ಇನ್ನು ವ್ಯವಸಾಯದ ಜಮೀನು ಇದರಲ್ಲಿ ಸೇರಿಕೊಂಡಿದೆ, ಇದರಿಂದ ರೈತರಿಗೆ ಸಾಲ ಪಡೆಯುವುದಕ್ಕೆ ಮತ್ತು ಅವರು ಜಮೀನನ್ನು ಅಭಿವೃದ್ಧಿ ಮಾಡುವುದಕ್ಕೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ಏನಾದರೂ ತಿದ್ದುಪಡಿ ಅವಶ್ಯಕ ಆದರೆ ಕೇಂದ್ರಕ್ಕೆ ಬರೆದು ತಿದ್ದುಪಡಿ ಮಾಡಿಸತಕ್ಕ ಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಿ, ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

2-30 P.M.

MADAM SPEAKER.—The question is :

"That the Karnataka Vacant Lands in Urban Areas (Prohibition of Alienation) (Amendment) Bill 1976 be taken into consideration."

The motion was adopted.

CLAUSE 2.

MADAM SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

CLAUSE 1 ETC.

MADAM SPEAKER.—The question is :

"That clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting formula were added to the Bill.

MOTION TO PASS,

SRI N. HUTCHMASTHY GOWDA.—I beg to move :

"That the Karnataka Vacant Lands in Urban Areas (Prohibition of Alienation) (Amendment) Bill, 1976, be passed."

MADAM SPEAKER.—The question is :

"That the Karnataka Vacant Lands in Urban Areas (Prohibition of Alienation) (Amendment) Bill, 1976, be passed."

The motion was put and adopted and the Bill was passed.

KARNATAKA LAND REFORMS (THIRD AMENDMENT) BILL, 1975.

Motion to consider.

SRI N. HUTCHMASTHY GOWDA (Minister for Revenue).—I move :

"That the Karnataka Land Reforms (Third Amendment) Bill, 1976 be taken into consideration."

MADAM SPEAKER.—Motion moved :

"That the Karnataka Land Reforms (Third Amendment) Bill 1976 be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಈ ಮಸೂದೆಯ ಮುಖ್ಯ ಉದ್ದೇಶ ಏನೆಂದರೆ ಈ ಹೆಚ್ಚುವರಿ ಭೂಮಿಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ರೈತರಿಗೆ ಎಷ್ಟು ಹೆಚ್ಚುವರಿ ಜಮೀನು ಇದೆ ಅದರಲ್ಲಿ ಎಷ್ಟನ್ನು ಬಿಟ್ಟುಕೊಡಬೇಕಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡುವ ಒಂದು ಅಧಿಕಾರ ಈ ತಹಸೀಲ್ದಾರರಿಗೆ ಇದೆ. ಈ ಅರ್ಜಿಗಳನ್ನೆಲ್ಲಾ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವುದಕ್ಕೋಸ್ಕರ ಈ ಟ್ರಿಬ್ಯುನಲ್‌ನ್ನು ಮಾಡಿದೆ. ತಹಸೀಲ್ದಾರರುಗಳಿಗೆ ಈ ಒಂದು ಅಧಿಕಾರವನ್ನು ಕೊಡುವಂಥ ತಿದ್ದುಪಡಿ ಇದಾಗಿರುವುದರಿಂದ ಇವಕ್ಕೆ ಈ ಮಾನ್ಯ ಸದನವು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಸನ್ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ಈ ಒಂದು ಮಸೂದೆಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸರ್ಕಾರ ಆಡಳಿತಕ್ಕೆ ಬಂದಮೇಲೆ ಈ ಟ್ರಿಬ್ಯುನಲ್‌ಗಳನ್ನು ರಚನೆ ಮಾಡಿತು. ಹೀಗೆ ರಚನೆ ಮಾಡಿದಂತಹ ಕಾಲದಲ್ಲಿ ಈ ಸದನದ ಕೆಲವು ಸದಸ್ಯರನ್ನು ಅಲ್ಲಿಗೆ ಸದಸ್ಯರನ್ನಾಗಿ ಮಾಡಿದೆ, ಹೀಗೆ ಮಾಡುವಾಗ ಏನು ಮಾಡಿದ್ದಾರೆ ಎಂದರೆ ತಮಗೆ ಬೇಕಾದಂತಹ ವ್ಯಕ್ತಿಗಳನ್ನು, ಭೂಮಿಯ ವಿಚಾರದಲ್ಲಿ ಏನೇನೂ ಗೊತ್ತಿಲ್ಲದವರನ್ನು ಮತ್ತು ರೈತರ ಬಗ್ಗೆ ಅಭಿಮಾನ ಇಲ್ಲದೇ ಇರುವವರನ್ನು ಇಂಥವರನ್ನು ಸದಸ್ಯರನ್ನಾಗಿ ಕಳುಹಿಸಿರುವುದನ್ನು ನನ್ನ ಅನುಭವದಲ್ಲಿ ನೋಡಿದ್ದೇನೆ. ಇವತ್ತು ತಾವು ಏನೊಂದು ಗುರಿಯನ್ನು ಇಟ್ಟುಕೊಂಡಿದ್ದೀರಿ, ಇದು ಒಳ್ಳೆಯ ಗುರಿ ತಾವು ಮಾಡತಕ್ಕಂಥ ಕಾರ್ಯ ಮೆಚ್ಚುವಂತಹದ್ದು. ಆದರೆ ಇದನ್ನು ತಾವು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಇದು ಕೇವಲ ಅವ್ಯವಹಾರ, ಅಷ್ಟೇ ಅಲ್ಲ, ಕೆಲವು ಸ್ವಾರ್ಥಿಗಳನ್ನು, ಕೆಲವು ಸಮಾಜ ಘಾತುಕ ಶಕ್ತಿಗಳನ್ನು ಬೆಳೆಸುವುದಕ್ಕೋಸ್ಕರ ಇಂಥ ಒಂದು ಟ್ರಿಬ್ಯೂನಲ್‌ಗಳನ್ನು ಮಾಡಿದ್ದೀರಿ ಎಂಬುದನ್ನು ನಾನು ಸಾಕ್ಷಿ, ಆಧಾರದ ಸಹಿತ ತೋರಿಸಿಕೊಡುತ್ತೇನೆ. ಆದರೆ ತಾವು ಏತಕ್ಕೆ ಹೀಗೆ ಮಾಡಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ಯಾರದೋ ಜಮೀನು ಯಾರೋ ಕಷ್ಟಪಟ್ಟು ಸಂಪಾದನೆ ಮಾಡಿದ್ದು ಯಾರೋ ಹಿರಿಯರು ಈ ಜಮೀನನ್ನು ಸಂಪಾದನೆ ಮಾಡಿ ಅವರ ಮನೆಯವರಿಗೋಸ್ಕರ ಇಟ್ಟುಕೊಂಡಿರತಕ್ಕ ಜಮೀನನ್ನು ಈ ಸರ್ಕಾರ ತಮ್ಮ ವಶಕ್ಕೆ ತೆಗೆದುಕೊಂಡು ಅನಂತರ ಅದನ್ನು ತಮಗೆ ಬೇಕಾದವರಿಗೆ ಮನಸ್ವಿಯಾಗಿ ಹಂಚುವ ಈ ರೀತಿ ಏನಿದೆ ಇದನ್ನು ಸರ್ಕಾರ ವಾಪಸ್ಸು ಪಡೆಯಬೇಕೆಂದು ಹೇಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದೊಂದು ಸಣ್ಣ ಮಸೂದೆ, ಇದನ್ನು ಸಭೆ ಒಪ್ಪಿಕೊಳ್ಳಬೇಕು ಎನ್ನುವ ಒಂದು ಮಾತನ್ನು ಹೇಳಿದರು. ಆದರೆ ಇದಕ್ಕೆ ನಾನು ಹೇಳುವುದಾದರೆ ಇದೊಂದು ಸಣ್ಣ ಮಸೂದೆಯಾದರೂ ಕೂಡ ಇದರ ಮಹತ್ವ ಬಹಳ ದೊಡ್ಡದಿದೆ. ಇವತ್ತು ನಾನು ನೋಡಿದ ಹಾಗೆ ತಾಲ್ಲೂಕು ಮಟ್ಟದಲ್ಲಿ ಲ್ಯಾಂಡ್ ಕನ್ಸರ್ವೇಟಿವ್ ಕಮಿಟಿ ಎಂದು ಮಾಡಿದ್ದಾರೆ ಅಲ್ಲಿ ಏನೇನು ಅವ್ಯವಹಾರಗಳು ನಡೆಯುತ್ತಿವೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ 1968ನೇ ಇಸವಿಯಲ್ಲಿ ಒಬ್ಬ ಅರ್ಜಿಯನ್ನು ಹಾಕಿದ್ದಾನೆ, ಅವನಿಗೆ ಭೂಮಿ ಇಲ್ಲ ಇನ್ನೊಬ್ಬರ

ಭೂಮಿಯನ್ನು ಉಳುತ್ತಿದ್ದಾನೆ ಅವನಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ ಆದರೂ ಕೂಡ ಅಂಥವನ ಅರ್ಜಿಯನ್ನು ಇವತ್ತು ತಿರಸ್ಕೃತ ಮಾಡಿದ್ದಾರೆ. ಇನ್ನೊಂದು ಕಡೆ ಇನ್ನೊಬ್ಬನಿಗೆ ನೀನು ಅರ್ಜಿಯನ್ನು ಕೊಡು ಆ ಭೂಮಿಯನ್ನು ನಿನಗೆ ಮಾಡಿಸಿಕೊಡುತ್ತೇನೆಂದು ಹೇಳುತ್ತಾರೆ. ಇಂತಹ ವಿಷಯ ಮಾನ್ಯ ಸಚಿವರ ಅನುಭವಕ್ಕೂ ಕೂಡ ಬಂದಿದೆ. ಇವತ್ತು ತಾವು ಉಳುವವನಿಗೇ ಭೂಮಿ ಎನ್ನುವ ಒಂದು ವಾದವನ್ನು ದೇಶದ ಮುಂದಿಟ್ಟಿದ್ದೀರಿ. ತಾವೇ ರಚನೆ ಮಾಡಿರತಕ್ಕಂಥ ಈ ನೀತಿಯನ್ನು ಕಾರ್ಯಗತ ಮಾಡಲು ಈ ಒಂದು ಕಮಿಟಿಗಳ ಕೈಯಲ್ಲಿ ಕೊಟ್ಟಿರುವುದರಿಂದ ಇವತ್ತಿನ ದಿವಸ ರೈತನಿಗೆ ಅಹಿತವಾಗಿದೆ, ಅನ್ಯಾಯವಾಗಿದೆ. ಸ್ವಾಮಿ, ನನ್ನ ಕ್ಷೇತ್ರದಲ್ಲಿಯೇ ಆದಂತಹ ಒಂದು ಘಟನೆಯನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ ಇವತ್ತು ಒಬ್ಬರ ಹತ್ತಿರ 3 4 ಎಕರೆ ಭೂಮಿ ಇದ್ದರೆ, ಅದನ್ನು ಫ್ರಾಗ್ಮೆಂಟೇಷನ್ ಮಾಡುವುದಕ್ಕೆ ಬರುವುದಿಲ್ಲ ಎಂದು ತಹಸೀಲ್ದಾರರು ಹೇಳುತ್ತಾರೆ. ಆದರೆ ಇಷ್ಟೇ ಎಕರೆ ಜಮೀನು ಇರಬೇಕೆಂದು ನಿಗದಿ ಆಗಿಲ್ಲ. ಈ ಕಮಿಟಿಯ ಸದಸ್ಯರು ತಮಗೆ ಬೇಕಾದವರು ಬಂದರೆ ಎಲ್ಲ ನಿಯಮಗಳನ್ನೂ ಕೂಡ ಮುರಿದು ಭೂಮಿಯನ್ನು ಹಂಚತಕ್ಕ ವ್ಯವಸ್ಥೆ ಮಾಡುತ್ತಾರೆ. ಈ ಟ್ರಿಬ್ಯುನಲ್‍ಗಳಿಗೆ ಸದಸ್ಯರನ್ನು ಹಾಕುವಾಗ ಅವರ ಮೇಲೆ ನಂಬಿಕೆ ಇಟ್ಟುಕೊಂಡು ಹಾಕುತ್ತೀರಿ. ಆದರೆ ಅವರು ತಮಗೆ ಬೇಕಾದ ಜಮೀನ್ದಾರರನ್ನು ಕರೆದುಕೊಂಡು ಬಂದು ಅವರಿಂದ ಅರ್ಜಿಯನ್ನು ಹಾಕಿಸಿ ಅವರಿಗೆ ಆ ಜಮೀನನ್ನು ಮಾಡಿಸಿಕೊಡುತ್ತಾರೆ. ಆ ಜಮೀನು ಅವನ ಅನುಭವದಲ್ಲಿ ಇರುವುದಿಲ್ಲ ಅವರ ಹೆಸರಿಗೆ ಖಾತೆ ಇರುವುದಿಲ್ಲ, ಪಹಣಿ ಇರುವುದಿಲ್ಲ, ಆದರೂ ಅತನಿಗೆ ಭೂಮಿ ಕೊಡಿಸುತ್ತಾರೆ ತಮಗೆ ಬೇಡವಾದ ರೈತ ಬಂದರೆ ಅವನನ್ನು ಹೆದರಿಸಿ, ನಿನ್ನ ಜಮೀನನ್ನು ಕಿತ್ತುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದು ನನ್ನ ತಾಲ್ಲೂಕಿನಲ್ಲಿ ಇರುವುದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ಇದರ ಬಗ್ಗೆ ಕಳಕಳಿಯ ವಿಚಾರವನ್ನು ಮಾಡಬೇಕೆಂದು ಹೇಳುತ್ತೇನೆ ಹಿರಿಯರಾದ ಮಾನ್ಯ ಹುಚ್ಚ ಮಾಸ್ತಿಗೌಡರು ಈ ಬಗ್ಗೆ ಯೋಚನೆ ಮಾಡಬೇಕು, ಆ ರೈತನ ಕಣ್ಣೀರು ಹೇಳುವುದಕ್ಕಾಗುವುದಿಲ್ಲ ಅವನು ಗದ್ದೆಯನ್ನು ಬೆಳೆದಿದ್ದಾನೆ. ಅದಕ್ಕೆ ಇವರು ಟೆಂಪೊರರಿ ಇಂಜಂಕ್ಷನ್ ಕೊಟ್ಟಿದ್ದಾರೆ. ಇವತ್ತು ನಿಜವಾದ ಖಾತೆದಾರ ಯಾರಿದ್ದಾನೆ ಯಾರು ಭೂಮಿಯ ಒಡೆಯನಿದ್ದಾನೆ ಯಾರು ಸಾಲ ಸೋಲ ಮಾಡಿ ಗದ್ದೆಯಲ್ಲಿ ಪೈರು ಬೆಳೆಸಿದ್ದಾನೆ ಅವನನ್ನು ಆ ಭೂಮಿಯಿಂದ ಹೊರಗೆ ಹಾಕುವಂತಹ ಪರಿಸ್ಥಿತಿ ಇದೆ ಇದನ್ನು ತಾವು ಒಪ್ಪುತ್ತೀರಾ? ಯಾರು ಭೂಮಿಯಲ್ಲಿ ನ್ಯಾಯವಾದ ರೀತಿಯಲ್ಲಿ ಕಷ್ಟಪಟ್ಟು ದುಡಿಯುತ್ತಾರೆ ಅವರಿಗೆ ಆ ಭೂಮಿ ನ್ಯಾಯವಾಗಿ ದೊರೆಯಬೇಕು.

ಯಾರು ಬೇಸಾಯ ಮಾಡಲಿಕ್ಕೆ ಅರ್ಹರಾಗಿರುತ್ತಾರೋ, ಯಾರಿಗೆ ಬೇಸಾಯ ಮಾಡಲಿಕ್ಕೆ ನ್ಯಾಯವಾಗಿ ದೊರೆಯಬೇಕೋ ಅಂಥವರಿಗೆ ನೀವು ಮಾಡಿರತಕ್ಕ ಟ್ರಿಬ್ಯೂನಲ್‍ನಿಂದ ಜಮೀನು ದೊರೆಯುವಂತಾಗಬೇಕು. ಇವತ್ತು ನೀವು ಕೊಟ್ಟಿರತಕ್ಕಂಥದ್ದನ್ನು ನೋಡಿದರೆ, ಲ್ಯಾಂಡ್ ಗ್ರಾಂಟ್‍ನ್ನು ತೆಗೆದು ನೋಡಿದರೆ ವ್ಯವಸಾಯ ಮಾಡತಕ್ಕಂಥ ರೈತರಿಗೆ ಉಪಯೋಗವಿಲ್ಲದಂಥ ಜಮೀನನ್ನು ಹಂಚಿದ್ದೀರಿ. ತಾವು ಯಾವ ರೈತರಿಗೆ ಜಮೀನಿನ ಒಡೆತನವನ್ನು ಕೊಡುತ್ತಿದ್ದೀರೆಂದು ಹೇಳಿದರೆ ಯಾರು ರಾಜಕೀಯದಲ್ಲಿ ಪುಢಾರಿ ಕೆಲಸವನ್ನು ಮಾಡಿಕೊಂಡಿರುತ್ತಾರೋ ಅಂಥವರಿಂದ ಅರ್ಜಿಯನ್ನು ತೆಗೆದುಕೊಂಡು ಅವರಿಗೆ ಜಮೀನು ಇದ್ದರೂ ಕೂಡ ಜಮೀನನ್ನು ಕೊಡುತ್ತಿದ್ದೀರಿ. ಸ್ವಾಮಿ ಇದರಿಂದ ಏನಾಗುತ್ತಿದೆಯೆಂದರೆ ನೀವು ಇಟ್ಟುಕೊಂಡಿರುವ ಘನ ಉದ್ದೇಶ ಅಂದರೆ ದೊಡ್ಡ ದೊಡ್ಡ ರೈತರಿಂದ ಹೆಚ್ಚುವರಿ ಇರತಕ್ಕಂಥ ಜಮೀನನ್ನು ತೆಗೆದುಕೊಂಡು ಅದನ್ನು ಸದ್ವಿನಿಯೋಗವಾಗುವಂತೆ ಮಾಡಬೇಕಾದರೆ ನಿಜವಾಗಿಯೂ ಈ ವಿಧೇಯಕ ತಿದ್ದುಪಡಿಯಾಗತಕ್ಕದ್ದು ಪ್ರಾಮುಖ್ಯವಾಗಿರುತ್ತದೆ ಯಾರು ರಾಜಕೀಯವನ್ನು ಉಪಯೋಗಿಸಿ ಕೇವಲ ಸ್ವಾರ್ಥಕ್ಕಾಗಿ ತಮ್ಮ ಪ್ರಭಾವವನ್ನು ಬೀರುತ್ತಾರೋ ಅಂಥವರಿಗೆ ಈ ಟ್ರಿಬ್ಯೂನಲ್‍ಗಳು ಉಪಯೋಗವಾಗುತ್ತಿವೆ. ಇದರಲ್ಲಿ ಅನ್ಯಾಯ ವಿಪುಲವಾಗಿ ನಡೆಯುತ್ತಿದೆ ಎನ್ನುವ ವಾದಕ್ಕೆ ಅನೇಕ ದೃಷ್ಟಾಂತಗಳನ್ನೂ ಮತ್ತು ಸನ್ನಿವೇಶಗಳನ್ನು ಉದಾಹರಣೆಯ ಮೂಲಕ ನಿಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಿತ್ರರು ಹೇಳಿದಹಾಗೆ ಟ್ರಿಬ್ಯೂನಲ್‍ಗಳನ್ನು ಮೆಂಬರ್ಸ್ ಕೈಯಿಂದ ತೆಗೆದುಹಾಕುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ನೀವು ಕೊಟ್ಟಿರತಕ್ಕಂಥ ಒಂದು ಅಧಿಕಾರದಿಂದ ದುರುಪಯೋಗ ನಡೆಯುತ್ತಾ ಇದೆ ಇದನ್ನು ಖುದ್ದಾಗಿ ನೋಡಿದಂಥ ನಿದರ್ಶನಗಳೂ ಇರುತ್ತವೆ. ಕೆಲವೊಂದು ಸಂದರ್ಭದಲ್ಲಿ ಪ್ರಾಮಾಣಿಕವಾದ ರೈತರೂ ಇದ್ದಾರೆ, ಎಲ್ಲವೂ ಅಕ್ರಮ

ವಾಗಿ ನಡೆದಿದೆ ಎಂದು ಹೇಳುವುದಿಲ್ಲ. ಇದರಲ್ಲಿ ನೀವು ಮಾಡಬೇಕಾದುದು ಏನೆಂದರೆ ನಿಜವಾದ ರೈತ ಯಾರು ಇದ್ದಾರೆ. ಭೂಮಿಯನ್ನು ವ್ಯವಸಾಯ ಮಾಡಲಿಕ್ಕೆ ಯಾರು ಅರ್ಹರಾಗಿದ್ದಾರೆ ಅಂಥವರಿಗೆ ಜಮೀನನ್ನು ಕೊಡಬೇಕೆಂದು ಹೇಳುತ್ತೇನೆ. ಟ್ರಿಬ್ಯೂನಲ್‌ಗಳಿಗೆ ಕೇವಲ ರಾಜಕೀಯ ವ್ಯಕ್ತಿಗಳನ್ನು ನೇಮಕ ಮಾಡಿದರೆ ಅದು ತಪ್ಪಾಗುತ್ತದೆ ಅಂಥವರಿಗೆ ಪ್ರಾಧಾನ್ಯತೆ ಸಿಕ್ಕಿರುವುದನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ದೊಡ್ಡ ರೈತರ ಹತ್ತಿರ ಹೋಗುವುದು, ಅವರು ಯಾರು ಹೇಳುತ್ತಾರೆ ಅವರಿಗೆ ಯಾರು ಬೇಕಾಗಿರುತ್ತಾರೋ ಅವರಿಂದ ಅರ್ಜಿಯನ್ನು ಹಾಕಿಸುವುದು, ಟ್ರಿಬ್ಯೂನಲ್ ಮುಖಾಂತರ ಅವರಿಗೆ ಕೊಡಿಸತಕ್ಕಂಥ ಅವ್ಯವಹಾರಗಳು ನಡೆಯುತ್ತಿದೆ. ಟ್ರಿಬ್ಯೂನಲ್ ಮುಖಾಂತರ ಕೊಡತಕ್ಕಂಥ ಜಮೀನು ಏನು ಇರುತ್ತದೆ ಅದು ನಿಜವಾಗಿಯೂ ಪ್ರಾಮಾಣಿಕವಾಗಿ ಯಾರು ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಯಾರು ವಂಶ ಪಾರಂಪರ್ಯವಾಗಿ ವ್ಯವಸಾಯವನ್ನು ಮಾಡುತ್ತಿರುತ್ತಾರೆ ಅಂಥವರಿಗೆ ಭೂಮಿ ಸಿಗುವಂತೆ ವ್ಯವಸ್ಥೆಯನ್ನು ಮಾಡಬೇಕು ಅದನ್ನು ಬಿಟ್ಟು ಕೇವಲ ತಮಗೆ ಸಂಬಂಧಪಟ್ಟವರಿಗೆ ಅಧಿಕಾರಿಗಳ ಮುಖಾಂತರ ಮಂಜೂರು ಮಾಡತಕ್ಕಂಥದ್ದು ನಡೆಯುತ್ತಿದೆ. ಈ ರೀತಿಯಾಗಿ ಟ್ರಿಬ್ಯೂನಲ್‌ನಲ್ಲಿ ಅಂತಿಮವಾಗಿ ತೀರ್ಮಾನ ಕೊಟ್ಟಿದ್ದಾರೆ. ಅಂಥ ಅನ್ಯಾಯ ನಡೆದು ಬಂದಿದ್ದರೆ ಅದಕ್ಕೆ ಮಾನ್ಯತೆ ಕೊಟ್ಟು ಕುತ್ತಿಗೆಯನ್ನು ಕೊಯ್ಯುವ ವ್ಯವಸ್ಥೆಯನ್ನು ಮಾಡಬೇಡಿ ಟ್ರಿಬ್ಯೂನಲ್ಲಿರತಕ್ಕ ಕಧೀಮರಿಂದಲಾಗಲಿ, ನೀಚ ಜನತೆಯಿಂದಲಾಗಲಿ ಅನ್ಯಾಯ ನಡೆದಿದೆ ಎಂದು ಕಂಡುಬಂದರೆ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಂಡು ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಟ್ರಿಬ್ಯೂನಲ್‌ನಲ್ಲಿ ಒಬ್ಬರು ಅಧಿಕಾರಿಗಳು, ಒಬ್ಬರು ಚೇರ್‌ಮನ್‌ರು ಇದ್ದುಕೊಂಡು ಒಂದೇ ತರಹ ಕೇಸನ್ನು ಎರಡು ವಿಧವಾಗಿ ತೀರ್ಮಾನ ತೆಗೆದುಕೊಳ್ಳುತ್ತಿರುವುದು ನಡೆಯುತ್ತಾ ಇವೆ. ಇಂಥಹ ಟ್ರಿಬ್ಯೂನಲ್‌ಗಳ ಮೇಲೆ ಏತಕ್ಕೆ ಸರ್ಕಾರ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬಾರದೆಂದು ಕೇಳುತ್ತೇನೆ. ನೀವು ದೊಡ್ಡ ದೊಡ್ಡ ರೈತರಿಂದ ಪಡೆದಂಥ ಹೆಚ್ಚುವರಿ ಜಮೀನನ್ನು ನಿಜವಾಗಿಯೂ ಯಾರು ಭೂಮಿಯ ಒಡೆತನವನ್ನು ಬಯಸುತ್ತಾರೋ ಯಾರು ಆಹಾರವನ್ನು ಬೆಳೆದು ದೇಶಕ್ಕೆ ಹಂಚುತ್ತಾರೋ ಅಂಥವರಿಗೆ ನೇರವಾಗಿ ಸರ್ಕಾರ ಅಧಿಕಾರವನ್ನು ತೆಗೆದುಕೊಂಡು ಅದರ ಮುಖಾಂತರ ಹಂಚತಕ್ಕಂಥದ್ದು ಸೂಕ್ತವೆಂದು ಹೇಳುತ್ತಾ ಈ ತಿದ್ದುಪಡಿಗೆ ವಿರೋಧ ಮಾಡುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಸನ್ಮಾನ್ಯ ಅಧ್ಯಕ್ಷಣಿಯವರೆ ಮಾನ್ಯ ಕಂದಾಯ ಖಾತಾ ಸಚಿವರು ತಂದಿರತಕ್ಕಂಥ ಭೂ ಸಂಧಾರಣಾ ವಿಧೇಯಕವನ್ನು ನಾನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ನನಗಿಂತ ಮುಂಚೆ ಮಾತನಾಡಿದಂಥ ಮಾನ್ಯ ಶ್ರೀ ಟಿ. ಎಂ ಮಂಜುನಾಥ್‌ರವರು ಈ ವಿಧೇಯಕವನ್ನು ವಿರೋಧಿಸಿದರು. ಅವರು ವಿರೋಧಿಸಿದುದರಲ್ಲಿ ಅರ್ಥವಿದೆ. ಮತ್ತೆ ಕೊನೆಯಲ್ಲಿ ಅವರು ಇದನ್ನು ಸಮರ್ಥಿಸಿರುತ್ತಾರೆ ಇದರಲ್ಲೂ ಅರ್ಥವಿದೆ. ಆದುದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಈ ವಿಧೇಯಕವನ್ನು ವಿರೋಧಿಸುವುದಕ್ಕೆ ಕಾರಣವೇನೆಂದರೆ ಟ್ರಿಬ್ಯೂನಲ್‌ಗಳಲ್ಲಿ ಅವ್ಯವಹಾರ, ಪಕ್ಷಪಾತಗಳು ನಡೆಯುತ್ತಿರುವುದೇ ಕಾರಣವಾಗಿರುತ್ತದೆ. ಅಂಥ ಅವ್ಯವಹಾರಗಳು ನಡೆದುದು ಕಂಡುಬಂದರೆ ಅಂಥ ಟ್ರಿಬ್ಯೂನಲ್‌ಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ನಾನಾದರೂ ಕೂಡ ಅದನ್ನ ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಯಾರೇ ಆಗಲಿ ಯಾವುದೇ ಭೂ ನ್ಯಾಯಮಂಡಲಿಗಳಿಗೆ ಬಂಧ ಬರತಕ್ಕ ರೀತಿಯಲ್ಲಿ ನಡೆದಿದ್ದರೆ, ನಡೆದರೆ ಅಂಥವರಮೇಲೆ ಕ್ರಮ ತೆಗೆದುಕೊಳ್ಳುವುದು ಅವಶ್ಯಕವೂ ಮತ್ತು ನ್ಯಾಯ ಸಮ್ಮತವೂ ಆಗಿರುತ್ತದೆಂದು ಶ್ರೀಮಾನ್ ಮಂಜುನಾಥ್‌ರವರು ಹೇಳಿದಹಾಗೆ ವ್ಯಕ್ತಿಗಳು ಅಂಥ ಮಂಡಲಿಗಳು ಕನಿಷ್ಟ ಪಕ್ಷ ಎಲ್ಲೋ ಅಲ್ಲಿ ಇಲ್ಲಿ ಒಂದೊಂದು ಇರಬಹುದು ಅದಮಾತ್ರಕ್ಕೆ ಇರತಕ್ಕಂಥ ೧೭೩ ಭೂ ನ್ಯಾಯ ಮಂಡಲಿಗಳಲ್ಲಿ ಎರಡೂ ಮೂರು ಮಂಡಲಿಗಳು ದುರ್ವ್ಯವಹಾರಕ್ಕೆ ಒಳಗಾಗಿದ್ದರೂ ಉಳಿದ ೧೭೦ ಭೂ ನ್ಯಾಯ ಮಂಡಲಿಗಳ ಬಗ್ಗೆ ತಪ್ಪು ಅಭಿಪ್ರಾಯವನ್ನು ಕಲ್ಪಿಸುವುದೂ ಸೂಕ್ತವಲ್ಲವೆಂದು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿರತಕ್ಕಂಥ ಟ್ರಿಬ್ಯೂನಲ್‌ಗಳು ಅಂದರೆ ತೀರ್ಥಹಳ್ಳಿ, ಸಾಗರ, ಸೊರಬ, ಶಿವಮೊಗ್ಗ ಇವೇ ಮುಂತಾದ ೪-೫ ಟ್ರಿಬ್ಯೂನಲ್‌ಗಳು ಬಹಳ ಚೆನ್ನಾಗಿ ಕೆಲಸಮಾಡಿಕೊಂಡು ಹೋಗುತ್ತಿವೆ. ನಮ್ಮ ಅಧ್ಯಕ್ಷರೂ ಕೂಡ ಅದರ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಯಾವ ಸಂದೇಹವೂ ಇಲ್ಲ ಆದರೆ ಶ್ರೀಮಾನ್ ಮಂಜುನಾಥ್‌ರವರು ಹೇಳಿದಂಥ ರೀತಿಯಲ್ಲಿ ಯಾವುದೇ ಭೂ ನ್ಯಾಯ ಮಂಡಲಿಯಲ್ಲಿ ಅವ್ಯವಹಾರ ನಡೆದಿದ್ದರೆ ಅದು ತಮ್ಮ

ಗಮನಕ್ಕೆ ಬಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ರಾಜ್ಯಾಂಗದಲ್ಲಿ ಅಧಿಕಾರ ವಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ ಈಗ ತಂದಿರತಕ್ಕಂಥ ತಿದ್ದುಪಡಿ ಯೋಗ್ಯವಾಗಿರುತ್ತದೆ. ಮೊದಲು ಹೆಚ್ಚುವರಿ ಭೂಮಿಯನ್ನು ಹಂಚುವುದಕ್ಕೆ ತಹಸೀಲ್ದಾರರಿಗೆ ಅಧಿಕಾರವನ್ನು ಕೊಟ್ಟಿದ್ದರು. ಈಗ ತಹಸೀಲ್ದಾರರಿಂದ ಭೂ ನ್ಯಾಯ ಮಂಡಳಿಗಳಿಗೆ ಹೆಚ್ಚುವರಿ ಭೂಮಿಯನ್ನು ಹಂಚತಕ್ಕ ಅಧಿಕಾರವನ್ನು ಕೊಡತಕ್ಕಂಥ ಈ ತಿದ್ದುಪಡಿಯ ಉದ್ದೇಶವೂ ನಿಜವಾಗಿಯೂ ಒಳ್ಳೆಯ ತಿದ್ದುಪಡಿಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇದೇ ಸಂದರ್ಭದಲ್ಲಿ ಮಾನ್ಯ ಮಂಜುನಾಥ್‌ರವರು ಹೇಳಿದ್ದನ್ನು ನಾನು ಈಗ ಹೇಳಬೇಕಾದಿದೆ, ಲ್ಯಾಂಡ್ ಗ್ರ್ಯಾಂಟ್ಸ್ ಕಮಿಟಿಗಳಲ್ಲಿ ನಡೆಯುತ್ತಿರತಕ್ಕಂಥ ಅನ್ಯಾಯಗಳನ್ನು ಹೇಳಿದ್ದಾರೆ. ಕೆಲವು ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳಲ್ಲಿ ಮಾನ್ಯ ಸಚಿವರಾದ ಹುಚ್ಚಮಾಸ್ತಿಗೌಡರು ನೇಮಕ ಮಾಡಿದಂತಹ ಕಮಿಟಿಗಳೂ ಇದ್ದಾವೆ ಅವು ಯಥಾಪ್ರಕಾರ ಕಾಂಗ್ರೆಸ್ ಕಮಿಟಿಗಳು ಆಗಿವೆ ಅನೇಕ ಕಡೆ ಟ್ರಿಬ್ಯೂನಲ್‌ಗಳು ಕೂಡ ಕಾಂಗ್ರೆಸ್ ಕಮಿಟಿಗಳು ಆಗಿವೆ. ಅವರ ಪ್ರೀತಿ ಇರುವವರನ್ನು ನೇಮಕ ಮಾಡಿದ್ದಾರೆ: ಅದರಲ್ಲಿ ನನ್ನಂತವನನ್ನು ಒಬ್ಬನನ್ನು ಎಂ ಎಲ್.ಎ. ಆಗಿರುವುದರಿಂದ ನನ್ನನ್ನು ಸೇರಿಸಿದ್ದಾರೆ ಅದರಲ್ಲಿ ತಾಲ್ಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಇತ್ಯಾದಿ ಇತ್ಯಾದಿಯವರನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಆದರೆ ನಾವು ಒಬ್ಬರು ಎಂ.ಪಿ.ಸಿ.ಸಿ. ಮೆಂಬರು ರಂಗಪ್ಪ ಎನ್ನುವವರು ಇದ್ದಾರೆ ಅವರನ್ನು ಈ ಕಮಿಟಿಗೆ ಹಾಕಿ ಎಂದರೆ ಹಾಕುವುದಿಲ್ಲ. ಈಗ ಯಾರೋ ಹೊಸಬರನ್ನು ಹಾಕುತ್ತಾರೆ ೫-೧೦ ಗುಂಟೆ ಜಮೀನು ಇರತಕ್ಕಂಥವರಿಗೆ ಜಮೀನು ಕೊಡಬೇಕೆಂದು ಹೇಳಿದರೆ ಕೊಡುವುದಿಲ್ಲ. ಅದೇ ದೊಡ್ಡ ದೊಡ್ಡ ಜಮೀನ್ದಾರರುಗಳಿಗೆ ಒತ್ತುವರಿ ಎಂದು ಹೇಳಿ ಇರುವವರಿಗೆ ಭೂಮಿಯನ್ನು ಕೊಡುವುದು ನಡೆಯುತ್ತಿದೆ. ಸ್ವಲ್ಪದರಲ್ಲಿ ಅದನ್ನು ನಾನೇ ರುಜುವಾತು ಮಾಡಿ ಕೊಡುತ್ತೇನೆ. ಈ ಬಗ್ಗೆ ಲ್ಯಾಂಡ್ ಗ್ರ್ಯಾಂಟ್ ಮಾಡುವ ಅಧಿಕಾರ ಬಂದಿದೆ. ಆದರೆ ಅದನ್ನು ಕಾರ್ಯಗತ ಮಾಡುವ ಕಾಲದಲ್ಲಿ ಬಹಳ ವಿಮರ್ಶನೆಗೆ ಒಳಗಾಗಬೇಕಾಗುತ್ತದೆ. ಮಾನ್ಯ ಹುಚ್ಚಮಾಸ್ತಿಗೌಡರು ರೆವಿನ್ಯೂ ಸಚಿವರು ಅವರ ಜನ ಯಾರಿಗೆ ಕೊಡಬೇಕು ಯಾರು ಲ್ಯಾಂಡ್‌ಲೆಸ್ ಇದ್ದಾರೆ ಯಾರಿಗೆ ಆ ಭೂಮಿಯನ್ನು ಪಡೆಯಲು ಅರ್ಹತೆ ಇದೆ ಅಂತಹ ರೈತರು ಯಾರು ಇದ್ದಾರೆ ಅಂತಹವರಿಗೆ ಕೊಡುವುದಾದರೆ ನಮಗೆ ಒಂದೂ ಚಿಂತೆಯಿಲ್ಲ ಅದಕ್ಕೆ ನಮ್ಮ ತಕರಾರು ಕೂಡ ಯಾವತ್ತೂ ಇಲ್ಲ ಆದರೆ ಉದಾಹರಣೆಗೆ ಹೇಳಬೇಕೆಂದರೆ ಮಾನ್ಯ ಕಂದಾಯ ಸಚಿವರಿಗೆ ಸಾಕಷ್ಟು ಭೂಮಿ ಇದೆ. ಆದರೂ ಸ್ವಲ್ಪ ಆಶೆ ಇರುತ್ತದೆ. ಅದಕ್ಕೆ ಏನು ಮಾಡುತ್ತಾರೆಂದರೆ ಅವರ ಮಗನ ಅಥವಾ ಮಕ್ಕಳ ಅಥವಾ ಮಮ್ಮೊಕ್ಕಳ ಹೆಸರಿನಲ್ಲಿ ಅರ್ಜಿ ಕೊಡಿಸಿ ಬಿಟ್ಟರೆ ಆಯಿತು ನಮ್ಮ ಲ್ಯಾಂಡ್ ಕಮಿಟಿಗಳಲ್ಲಿ ಹಂಚತಕ್ಕಂಥವರು ನಾವು ಏನು ಇದ್ದೇವೆ ನಾವು ನಮಗೆ ಬೇಕು ಬೇಕಾದವರಿಗೆ ಭೂಮಿಯನ್ನು ಹಂಚಿಕೊಳ್ಳಬಹುದು. ಇದೇ ರೀತಿ ಜಮೀನು ಇರುವವರೇ ಅವರ ಮಕ್ಕಳ ಹೆಸರಿನಲ್ಲಿ ಭೂಮಿಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಇಂತಹ ಕಮಿಟಿಗಳಲ್ಲಿ ಕೆಲವರು ನಿಷ್ಠೂರವಾದಿಗಳನ್ನು ಹಾಕಿದರೆ ನಿರ್ದಾಕ್ಷಿಣ್ಯವಾಗಿ ನ್ಯಾಯ ಜನರಿಗೆ ದೊರಕುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ನಾನೇ ಆಗಲಿ ಯಾವುದಾದರೂ ತಪ್ಪು ಮಾಡಿದರೆ ಕೂಡಲೇ ಟ್ರಿಬ್ಯೂನಲ್‌ನಿಂದ ತೆಗೆದುಹಾಕಬೇಕೆಂದು ಹೇಳುತ್ತೇನೆ. ಜೊತೆಗೆ ಅಂತವರಿಗೆ ತಕ್ಕ ಶಿಕ್ಷೆ ವಿಧಿಸತಕ್ಕಂಥ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ. ನಾವು ಇಲ್ಲಿ ಇದ್ದೇವೆ ಯಾರಾದರೂ ತಪ್ಪು ಮಾಡಿದರೆ ತಪ್ಪು ಮಾಡಿದ್ದಾರೆಂದು ನಾವು ಪ್ರತಿಪಾದಿಸಬಹುದು. ಆದರೆ ಅಲ್ಲಿ ಏನು ಸದಸ್ಯರು ಇದ್ದಾರೆ ಅವರನ್ನು ನಾಮಿನೇಟ್ ಮಾಡುವಾಗ ಅದಷ್ಟು ಶುದ್ಧಹಸ್ತರೆಂದು ಕಂಡು ಬಂದವರನ್ನು ಹಾಕಿದರೆ ಒಳ್ಳೆಯದು. ಆದರೆ ಅವರನ್ನು ನೇಮಕ ಮಾಡಿದಮೇಲೆ ಅವರನ್ನು ಆಳೆಯುವುದಕ್ಕೆ ಬರುವುದಿಲ್ಲ. ಅದರಲ್ಲೂ ಮುಂದೆ ಅನ್ಯಾಯಗಳೇನಾದರೂ ನಡೆದದ್ದು ಗಮನಕ್ಕೆ ಬಂದರೆ ಕೂಡಲೇ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲೇಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮಾನ್ಯ ಮಂಜುನಾಥ್‌ರವರು ಹೇಳಿದರು ರೈತರು ಯಾರು ಇದ್ದಾರೆ ಅವರಿಗೆ ಭೂಮಿಯನ್ನು ಕೊಡಬೇಕೆಂದು. ಅವರ ದೃಷ್ಟಿಯಲ್ಲಿ ರೈತರು ಎಂದರೆ ಯಾರು ಎಂಬುದು ನನಗೆ ಗೊತ್ತಾಗಲಿಲ್ಲ. ಯಾರು ಭೂಮಿಯಲ್ಲಿ ನಿಜವಾಗಿಯೂ ದುಡಿದು, ಬೆಳೆಯುತ್ತಾನೋ ಅವನೇ ರೈತ ಅದನ್ನು ಬಿಟ್ಟು ಯಾರು ದುಡಿದು ಬೆಳೆಯುತ್ತಾನೋ ಅವನಿಂದ ಬೆಳೆದದ್ದನ್ನು ವಸೂಲುಮಾಡಿ ಉಪಯೋಗಿಸಿಕೊಳ್ಳತಕ್ಕವನು ಅವನು ನಿಜವಾಗಿಯೂ ರೈತನಾಗುವುದಿಲ್ಲ. ಅವನು ಏನು ಇದ್ದರೂ ಶೋಷಣೆಗಾರ ಎಂದು ಕರೆಯಬೇಕಾಗುತ್ತದೆ. ಆ ಶೋಷಣೆ ತಪ್ಪಬೇಕು ಯಾರು ಭೂಮಿಯಲ್ಲಿ ದುಡಿಯುತ್ತಾರೆ ಅವರಿಗೇ ಆ ಭೂಮಿ ದೊರೆಯಬೇಕು. ಉಳುವವನೇ ಭೂಮಿಯ ಒಡೆಯ ಅದು ಯೋಗ್ಯವಾದ ತೀರ್ಮಾನ ಇದರಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ. ನಮ್ಮಲ್ಲೂ ಇಂತಹ

ಘಟನೆಗಳು ಅನೇಕವು ನಡೆಯುತ್ತಾ ಇವೆ ಈ ರೀತಿ ಅನೇಕ ಮುಖಂಡರು ಬೆದರಿಕೆ ಹಾಕಿ ಜನರನ್ನು ಶೋಷಣೆ ಮಾಡತಕ್ಕಂಥಾವರು ಹತ್ತಾರು ಜನ ಇದ್ದಾರೆ ದೊಡ್ಡ ದೊಡ್ಡ ಹುಲಿಗಳು ಇವೆ. ಈ ಪಟ್ಟೇಗಾರ ಹುಲಿಗಳು ಏನು ಇದ್ದವು ಅವು ಸಾಯುವ ಕಾಲ ಬಂದಿದೆ. ಅದರ ಬಗ್ಗೆ ಹೆಚ್ಚು ಚಿಂತೆ ಮಾಡುವುದಕ್ಕೆ ಹೋಗಬಾರದು. ಅವು ನೆಮ್ಮದಿಯಿಂದ ಸಾಯುವುದಕ್ಕೆ ಅವಕಾಶ ಮಾಡಿಕೊಟ್ಟು ಅವುಗಳ ಶವ ಸಂಸ್ಕಾರ ಮಾಡಬೇಕು. ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಇಂಜಂಕ್ಷನ್ ಬಗ್ಗೆ ಮಾನ್ಯ ಮಂಜುನಾಥ್‌ರವರು ಮಾತನಾಡಿದ್ದಾರೆ ಅದರ ಬಗ್ಗೆಯೂ ಕೂಡ ವಿಚಾರ ಮಾಡಬೇಕು. ನಿನ್ನೆ ದಿವಸ ಒಂದು ಘಟನೆ ನಡೆದದ್ದು ನನ್ನ ಗಮನಕ್ಕೆ ಬಂದಿದೆ ಅದು ನನ್ನ ಕ್ಷೇತ್ರಕ್ಕೆ ಸೇರಿದಂತ ಒಂದು ಘಟನೆ ಮಾನ್ಯ ಅಧ್ಯಕ್ಷರೇ, ನಮಗೆ ಅಧಿಕಾರ ಕೊಡುತ್ತಾರೆ ಆದರೆ ಅದು ಕಾರ್ಯಗತ ಮಾಡುವುದಕ್ಕೆ ಯೋಗ್ಯವಾದ ರೀತಿಯಲ್ಲಿ ತಿಳುವಳಿಕೆ ಕೊಟ್ಟಿಲ್ಲ. ನಮ್ಮ ನ್ಯಾಯ ಮಂಡಲಿ ಮಾಡತಕ್ಕಂಥಾದ್ದು ಕೇವಲ ಬೂಟಾಟಿಕೆ ಮಾಡತಕ್ಕಂಥಾದ್ದು ಎಂದು ತಿಳಿದು ಅಲ್ಲಿ ಇತ್ಯರ್ಥವಾದ ಕೇಸುಗಳಿಗೆ ತಡೆ ಆಜ್ಞೆಗಳನ್ನು ತಂದು ಸಂಪೂರ್ಣವಾಗಿ ನಮ್ಮ ನ್ಯಾಯಮಂಡಲಿಯ ತೀರ್ಮಾನಗಳನ್ನು ನಿರ್ಲಕ್ಷ್ಯಮಾಡುವಂತ ಅಧಿಕಾರಿಗಳು ಇದ್ದಾರೆ. ನನ್ನ ಕ್ಷೇತ್ರಕ್ಕೆ ಸೇರಿದ ನಗರ ಹೋಬಳಿ ಕುಂಟಗೆರೆ ಗ್ರಾಮದಲ್ಲಿ ಒಬ್ಬಳು ಬೆಳ್ಳಮ್ಮ ಅವರ ಗಂಡ ಗಿಡ್ಡನಾಯಕ ಎಂಬುವರು ೩೦-೧೧೦ ವರ್ಷಗಳಿಂದ ಗೇಣಿ ಮಾಡಿಕೊಂಡು ಬಂದಿದ್ದಾರೆ ಹೋದ ವರ್ಷ ಕೂಡ ಇದೇ ರೀತಿ ಅವರಿಗೆ ತೊಂದರೆ ಕೊಟ್ಟರು ನಾನು ಆಮೇಲೆ ಸ್ಥಳದಲ್ಲೇ ಬೇಕಾದ ರಕ್ಷಣೆ ಕೊಟ್ಟು ಅವರು ಬೆಳೆದದ್ದನ್ನು ಅವರಿಗೆ ಉಳಿಸಿ ಬಂದಿದ್ದೆ. ಆದರೆ ಮೊನ್ನೆ ೬ನೇ ತಾರೀಖು ರಾತ್ರಿ ೧೧ ಗಂಟೆ ಸಮಯದಲ್ಲಿ ಹೊಸನಗರ ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿಯ ಜೊತೆ ಮನೆಗೆ ನುಗ್ಗಿ ೮ ಖಂಡುಗ ದಿನಸಿಯನ್ನು ಲಾರಿಯಲ್ಲಿ ತುಂಬಿಕೊಂಡು ಹೋಗಿದ್ದಾರೆ ಇದಕ್ಕೆ ಮಾಲೀಕರೇ ಕಾರಣರಾಗಿರುತ್ತಾರೆ. ಆ ಗೇಣಿದಾರನಿಗೆ ಅವನ ಗುಡಿಸಲು ಬಿಟ್ಟು ಹೊರಗೆ ಬರದಂತೆ ಹೆದರಿಸಿ ಬೆದರಿಸಿ ಅವನಿಗೆ ಹೊಡೆದು ಅವನ ಮನೆಯಿಂದ ಹೊರಗಡೆ ಬರದಂತೆ ಪೋಲೀಸರನ್ನು ಕಾವಲು ಹಾಕಿ ಈ ಕೆಲಸವನ್ನು ಮಾಡಿದ್ದಾರೆ. ನ್ಯಾಯವಾಗಿ ನ್ಯಾಯಮಂಡಲಿ ತೀರ್ಮಾನದಂತೆ ನಮ್ಮ ಅಧಿಕಾರಿಗಳು ನಡೆಯಬೇಕು ಆದರೆ ಅದಕ್ಕೆ ವಿರುದ್ಧವಾಗಿ ನಡೆದು ಭೂ ಸುಧಾರಣೆ ಕಾನೂನನ್ನು ಕಾರ್ಯಗತಗೊಳಿಸುವುದಕ್ಕೆ ಸಹಾಯ ಮಾಡುವುದರ ಬದಲು ಅದರ ವಿರುದ್ಧವಾಗಿ ಕಾರ್ಯಾಚರಣೆ ಮಾಡಿದರೆ ಅಂತಹ ಅಧಿಕಾರಿಗಳ ಮೇಲೆ ಏನು ಮತ್ತು ಎಂತಹ ಕ್ರಮ ತೆಗೆದುಕೊಳ್ಳುತ್ತೀರಿ ? ಜೊತೆಗೆ ಇಂತಹ ಅಧಿಕಾರಿಗಳಿಗೆ ಸರಿಯಾದ ತಿಳುವಳಿಕೆ ಕೊಡದೆಹೋದರೆ ಈ ಶಾಸನದಿಂದ ಯಾವ ರೀತಿ ಸಹಾಯ ಜನರಿಗೆ ಸಿಕ್ಕಿದಂತಾಗುವುದಿಲ್ಲ. ಅದು ನಿರುಪಾಯವಾಗುತ್ತದೆ.

3-00 P. M.

ನಮ್ಮ ಕಡೆಯಲ್ಲಿ ಆದಷ್ಟು ಜಾಗ್ರತೆಯಾಗಿ ಟ್ರಿಬ್ಯುನಲ್ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮಗೆ ಬೇಕಾದಂತ ಸವಲತ್ತನ್ನು ಕೊಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ 10 ಸಾವಿರಕ್ಕಿಂತಲೂ ಹೆಚ್ಚು ಜನ ಗೇಣಿದಾರರು ಇದ್ದರೆ ಇನ್ನೊಂದು ಟ್ರಿಬ್ಯುನಲ್ಲನ್ನು ಕೊಡುತ್ತೇವೆಂದು ಹೇಳಿದರೂ ನಮ್ಮ ತಾಲ್ಲೂಕ್‌ನಲ್ಲಿ 9866 ಅರ್ಜಿಗಳು ಇದ್ದರೂ 11 ಸಾವಿರಕ್ಕೆ 134 ಅರ್ಜಿಗಳು ಕಡಿಮೆಯಾಗಿದೆ. ಹಾಗಾದರೆ ಮಾನ್ಯ ಮಂಜುನಾಥ್ ಅವರು ಹೇಳಿದಹಾಗೆ ಯಾರಿಂದಲಾದರೂ ಅರ್ಜಿಯನ್ನು ಹಾಕಿಸೋಣವೇ ? ಇಂತಹ ಪಾಪದ ಕೆಲಸವನ್ನು ನಾವು ಯಾವತ್ತೂ ಮಾಡುವುದಿಲ್ಲ ಇದರ ಬಗ್ಗೆ ಅಂಕಿಅಂಶಬದ್ಧವಾಗಿ ಹೇಳುವುದಾದರೆ ವಿಧಿನಿಯಮಕ್ಕನುಸಾರವಾಗಿ ಹೇಳುವುದಾದರೆ ಇದನ್ನು ಕಾರ್ಯಗತ ಮಾಡುವಲ್ಲಿ ವಿಮಂಚನೆಗೆ ಒಳಗಾಗಿದ್ದಾರೆ. 4 ಎಕರೆ ಮಾಡಿಕೊಂಡಿರುವ ಗೇಣಿದಾರರು ಅವರು ಅವರ ಹೊಟ್ಟೆ ಬಟ್ಟೆಯನ್ನು ನೋಡಿಕೊಂಡರೆ ಸಾಕಾಗಿರುತ್ತದೆ. ಅವರ ಹತ್ತಿರ ಹಾಕಿಸುವುದಕ್ಕಾಗುತ್ತದೆಯೇ ? ಇನ್ನು ಕೆಲವರು ನಮ್ಮಲ್ಲಿ ಗೇಣಿದಾರರು ಇದ್ದಾರೆ. ನಮ್ಮಲ್ಲಿ ಬಾಗಾಯಿತು ತೋಟ ಕಾಯುವುದಕ್ಕೆ ಇರುವವರು, ಅಡಿಕೆ ತೋಟ ಕಾಯುವವರು ಅರ್ಜಿ ಹಾಕಿದ್ದಾರೆ. ರಸ್ತೆಯ ಪಕ್ಕದಲ್ಲಿ ವಾಸಿಸಿಕೊಂಡು ಅಲ್ಲಿ ಪಾಕಿಂಗ್ ಮಾಡುವ ಮನುಷ್ಯರು ಅರ್ಜಿ ಹಾಕಿದ್ದಾರೆ. ಇಂತಹವರೂ ಸಹ ಇವತ್ತು ಇದ್ದಾರೆ. ಆದರೆ ನಿಜವಾದ ಗೇಣಿದಾರ ಅರ್ಜಿ ಹಾಕಿದರೆ ಕೈಕಾಲು ಮುರಿಯುತ್ತೇವೆಂದು ಹೇಳಿ ಅರ್ಜಿ ಹಾಕುವುದಕ್ಕೆ ಅವಕಾಶವನ್ನು ಕೊಡದೇ ಇರತಕ್ಕಂಥ ಜಮೀನ್ದಾರರೂ ಇದ್ದಾರೆ. ಇದರಲ್ಲಿ ಒಳ್ಳೆಯವರೂ ಕೆಟ್ಟವರೂ ಇದ್ದಾರೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ಈ ಸರ್ಕಾರಿ ಯಂತ್ರವನ್ನು ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟನ್ನು ಮಾತ್ರ ಉಪಯೋಗಿಸಿಕೊಂಡು ಈ ಒಂದು ಕಾರ್ಯವನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ ಇವತ್ತು

ಜೂನ್ 30ನೇ ತಾರೀಖಿನವರೆಗೆ ಡಿಕ್ಲರೇಷನ್ ಹಾಕುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈಗ ಉಳಿದಿರತಕ್ಕಂಥ 1, 1½ ತಿಂಗಳಲ್ಲಿ ಕಠೋರವಾದ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ತಹಶೀಲ್ದಾರ್, ವಿಲೇಜ್ ಅಕೌಂಟೆಂಟ್ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಆಜ್ಞೆಯನ್ನು ಕೊಟ್ಟು ಯಾರುಯಾರು ಇನ್ನೂ ಡಿಕ್ಲರೇಷನ್ ಹಾಕಿಲ್ಲವೋ ಅಂತಹವರನ್ನು ಕಡ್ಡಾಯವಾಗಿ ಹಾಕಿಸತಕ್ಕಂಥ ಒಂದು ಕ್ರಮವನ್ನು ತಾವು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಕೊಡುತ್ತಿರುವ ಎಕ್ಸೆಸ್ ಲ್ಯಾಂಡ್ ಎಲ್ಲಾ ಗುಡ್ಡಬೆಟ್ಟಗಳು ಇದೆ. ಈ ಕಲ್ಲು ಗುಡ್ಡಗಳ ಲ್ಯಾಂಡ್ ಅನ್ನು ತೆಗೆದುಕೊಂಡು ಹೇಗೆ ಬಚ್ಚಿಕೊಳ್ಳಬೇಕು: ಒಳ್ಳೆಯ ಭೂಮಿ ಯಾವುದು, ಕೆಟ್ಟ ಭೂಮಿ ಯಾವುದು ಎಂಬುದನ್ನು ತಿಳಿದು ಅದನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಅವಕಾಶ ಇದೆ. ನಮ್ಮಲ್ಲಿ ಒಂದು ವಿಪರ್ಯಾಸ ಏನೆಂದರೆ ನಮ್ಮ ಮಲೆನಾಡು ಭಾಗದಲ್ಲಿ ಒಂದು ಗುಂಟೆ ಎಕ್ಸೆಸ್ ಲ್ಯಾಂಡ್ ಸಹ ಸಿಕ್ಕುವುದಿಲ್ಲ. ಶಿವಮೊಗ್ಗದ ಸಕ್ಕರೆ ಫ್ಯಾಕ್ಟರಿಯ ಹತ್ತಿರ 3 ಸಾವಿರ ಎಕರೆಯನ್ನು ಬಿಟ್ಟರೆ ಬೇರೆ ಎಲ್ಲೂ ಸಿಕ್ಕುವುದೇ ಇಲ್ಲ. 1955-56ರಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು ಅಧಿಕಾರಕ್ಕೆ ಬಂದಮೇಲೆ ಗಂಡ, ಹೆಂಡತಿ- ಮಕ್ಕಳು, ಮೊಮ್ಮಕ್ಕಳು, ಅವರ ಮನೆಯ ನಾಯಿ ನರಿಗಳಿಗೆಲ್ಲಾ ಹಂಚಿಕೆಯಾಗಿ ಬಿಟ್ಟಿದೆ. ಆದುದರಿಂದ ನಮ್ಮಲ್ಲಿ ಸಿಕ್ಕುವುದಿಲ್ಲ. ಅದು ಏನೇ ಇರಲಿ ಸಿಕ್ಕತಕ್ಕಂಥ ಕಡೆಯಲ್ಲಿ ಯೋಗ್ಯ ರೀತಿಯಲ್ಲಿ ದೊರಕಬೇಕಾದವರಿಗೆ ದೊರಕುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಈ ಟ್ರಿಬ್ಯೂನಲ್ ಮಾಡತಕ್ಕಂಥ ನಿರ್ಧಾರ ಏನಿದೆ, ತೀರ್ಮಾನ ಏನಿದೆ, ಅದನ್ನು ಅನುಸರಿಸಬೇಕಾದ್ದು, ಮತ್ತು ಅದನ್ನು ಕಾರ್ಯಗತಗೊಳಿಸುವುದಕ್ಕೆ ಸಹಾಯ ಮಾಡಬೇಕಾದದ್ದು ಪ್ರತಿಯೊಬ್ಬ ಸರ್ಕಾರೀ ಅಧಿಕಾರಿಯ ಆದ್ಯ ಕರ್ತವ್ಯ ಎಂಬುದನ್ನು ಕೂಡಲೇ ಅಧಿಕಾರೀ ವರ್ಗದವರಿಗೆ ತಿಳಿಸಬೇಕು. ಮತ್ತು ಇನ್ನೆ ಏನು ಒಂದು ಘಟನೆ ನಡೆದಿದೆ ಅದರ ಬಗ್ಗೆ ತೀವ್ರವಾದ ಕ್ರಮವನ್ನು ಕೈಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಿ ಮಾನ್ಯ ಸರ್ಕಾರದವರು ತಂದಿರತಕ್ಕಂಥ ಈ ತಿದ್ದುಪಡಿಯನ್ನು ಸ್ವಾಗತಿಸುತ್ತಾ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಿಳಿದೋ ತಿಳಿಯದೆಯೋ ತಪ್ಪು ಮಾಡಿದ ಟ್ರಿಬ್ಯೂನಲ್‌ಗಳು ಅದರ ಬಗ್ಗೆ ಅಕಸ್ಮಾತ್ ಒಂದು ಸಣ್ಣ ತಪ್ಪು ಮಾಡಿದ್ದರೆ, ಉದಾಹರಣೆಗೆ ನಮ್ಮ ಟ್ರಿಬ್ಯೂನಲ್ ಬಗ್ಗೆ ಹೇಳುವುದಾದರೆ ಟ್ರಿಬ್ಯೂನಲ್‌ನವರು ತೀರ್ಮಾನ ಮಾಡಿಬಿಡುತ್ತಾರೆ, ಅದರಂತೆ ಅವನ ಗೇಣಿದಾರನಾಗುತ್ತಾನೆ ಆದರೆ ಕಡೆಯಲ್ಲಿ ನಮಗೆ ಸತ್ಯ ಗೊತ್ತಾಗುತ್ತದೆ. ನಿಜವಾದ ಗೇಣಿದಾರ ಮತ್ತೊಬ್ಬ ಎಂದು. ಅವನಿಗೆ ಅನ್ಯಾಯವಾಗಿರುತ್ತದೆ. ಇಂತಹದು ನಮ್ಮಲ್ಲಿ ಆಗಿಲ್ಲ. ಬೇರೆ ಕಡೆ ಆಗಿರುವುದು ನನಗೆ ಗೊತ್ತಿದೆ. ಯಾವ ಒಂದು ಕೆಟ್ಟ ಮನೋಭಾವದ ಮಾತು ಅಥವಾ ದುರುದ್ದೇಶದ ಮಾತೂ ಅಲ್ಲ. ಪ್ರಾಮಾಣಿಕವಾಗಿ ಅವರು ನಿರ್ಧಾರ ಮಾಡಿದ್ದರೂ ಅಲ್ಲಿ ಸಣ್ಣ ತಪ್ಪಾಗಿದೆ. ಪ್ರತಿಯೊಬ್ಬ ಟ್ರಿಬ್ಯೂನಲ್ ಮೆಂಬರ್ ಫೀಲ್ ಮಾಡಿಕೊಳ್ಳುತ್ತಾರೆ ಇದು ಸತ್ಯವಾಗಿರುವ ಗೇಣಿದಾರನಿಗೆ ಏನು ಅನ್ಯಾಯವಾಗದಂತೆ ಯಾವ ಟ್ರಿಬುನಲ್ ತೀರ್ಮಾನ ಮಾಡಿದೆಯೋ ಆ ಟ್ರಿಬ್ಯೂನಲ್‌ಗೆ ಮನವರಿಕೆಯಾದರೆ ಆ ತೀರ್ಮಾನಗಳನ್ನು ರಿವ್ಯೂ ಮಾಡುವುದಕ್ಕೆ, ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸತ್ಯವನ್ನು ಎತ್ತಿ ಹಿಡಿಯುವುದಕ್ಕೆ ಅನುಕೂಲವಾಗಿ ನ್ಯಾಯವನ್ನು ದೊರಕಿಸಿ ಕೊಡುವುದಕ್ಕೆ ಅವಕಾಶವನ್ನು ಅದೇ ಟ್ರಿಬ್ಯೂನಲ್‌ಗೆ ಅವಕಾಶ ಕೊಡಬೇಕು ಎನ್ನುವ ಸಲಹೆಯನ್ನು ಸರ್ಕಾರದವರ ಮುಂದೆ ಇಟ್ಟು, ಇದನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತಂದರೆ ಈಗ ಅಲ್ಲಲ್ಲಿ ಆಗಿರತಕ್ಕಂಥ ಅನ್ಯಾಯಗಳನ್ನು ಸರಿಪಡಿಸಲಿಕ್ಕೆ ಹೆಚ್ಚು ಅವಕಾಶವಾಗುತ್ತದೆಂದು ಹೇಳಿ ಈ ತಿದ್ದುಪಡಿಯನ್ನು ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ಈ ಒಂದು ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಈ ಭೂಸುಧಾರಣಾ ಕಾಯಿದೆಯನ್ನು ಮಾಡಿದಾಗ ಇದು ಒಂದು ದೊಡ್ಡ ತಪ್ಪು ಆಗಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಅಧಿಕಾರವನ್ನು ಜನತಾ ಪ್ರತಿನಿಧಿಗಳಿಗೆ ಕೊಟ್ಟು ಹೆಚ್ಚುವರಿ ಭೂಮಿಯನ್ನು ಮಾತ್ರ ನಿರ್ಣಯ ಮಾಡುವುದನ್ನು ತಹಶೀಲ್ದಾರರಿಗೆ ಕೊಟ್ಟಿರತಕ್ಕಂಥಾದ್ದು ಶಾಸನದಲ್ಲಿ ನ್ಯೂನತೆ ಆಗಿತ್ತು. ಅಂತಹ ನ್ಯೂನತೆಯನ್ನು ಪರಿಹರಿಸತಕ್ಕಂಥ ಕಾನೂನನ್ನು ಮಾನ್ಯ ಕಂದಾಯ ಸಚಿವರು ತಂದಿದ್ದಾರೆ. ಅದಕ್ಕಾಗಿ ನಾನು ಹಾರ್ದಿಕವಾಗಿ ಸ್ವಾಗತವನ್ನು ಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಗೆಳೆಯರಾದ ಮಂಜುನಾಥ್ ಅವರು ಮಾತನಾಡುತ್ತಿದ್ದುದನ್ನು ಕೇಳಿ ಆಶ್ಚರ್ಯವಾಯಿತು. ಶೀತ ಆಗಿದೆಯೆಂದು ಹೇಳಿ ಔಷಧಿಯನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಮೂಗು ಕೊಯ್ದುಕೊಳ್ಳತಕ್ಕಂಥ ಪ್ರಶ್ನೆ ಬರುವುದಿಲ್ಲ. ಎಲ್ಲಾ ನ್ಯಾಯ ಮಂಡಲಿಗಳಲ್ಲಿ ಎಲ್ಲರೂ

ಸಂಪನ್ನರೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಂಪನ್ನರು ಎಂದು ಹೇಳತಕ್ಕಂಥ ವಾದವನ್ನು ಬುದ್ಧಿಜೀವಿಗಳ ವರ್ಗದವರು ಯಾರು ಒಪ್ಪುವುದಕ್ಕಾಗುವುದಿಲ್ಲ, ಅದು ಒಂದು ಪ್ರಜಾಪ್ರಭುತ್ವಕ್ಕೆ ಕಳಂಕ ಎಂಬ ವಾದವನ್ನು ಹೇಳಬೇಕಾದ ಗತ್ಯಂತರ ಇಲ್ಲ. ಯಾರು ಅನಾಸಕ್ತಿಯಿಂದ ನಡೆದುಕೊಳ್ಳುತ್ತಾರೆ ಅವರನ್ನು ಕಂಡುಹಿಡಿದು ಅವರ ಮೇಲೆ ಉಗ್ರವಾದ ಶಿಕ್ಷೆಯನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಜೊತೆಗೆ ನ್ಯಾಯಮಂಡಲಿಗಳಿಗೆ ಒಳ್ಳೆಯ ಹೆಸರು ಬರುವುದಿಲ್ಲವೆನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ಬಂದಿರುವ ಒಂದು ದೊಡ್ಡ ಕುತ್ತು ಎಂದರೆ ಭೂ ನ್ಯಾಯ ಮಂಡಲಿಗಳನ್ನು ಇದೊಂದು ಕೋರ್ಟ್ ಎಂದು ಹೇಳಿ ಪರಿಗಣನೆಗೆ ತೆಗೆದುಕೊಳ್ಳುತ್ತಾ ಇಲ್ಲ ಎಂದು ನಾನು ಹೇಳುತ್ತೇನೆ. ಇದರ ಬಗ್ಗೆ ಇನ್‌ಜಂಕ್ಷನ್ ಆರ್ಡರನ್ನು ಕೊಟ್ಟಿದ್ದಾರೆ. ಮಾನ್ಯ ಗೆಳೆಯರಾದ ಲಿಂಗಪ್ಪನವರು ಹೇಳಿದ ಮಾತು ನಮ್ಮ ಟ್ರಿಬ್ಯುನಲ್‌ಗೆ ಸಂಬಂಧಪಟ್ಟಿದ್ದು. ಇಂಜಂಕ್ಷನ್ ಆರ್ಡರನ್ನು ಕೈಯಲ್ಲಿ ಇಟ್ಟುಕೊಂಡಿರುವವರು ಅದಕ್ಕೆ ಬೆಂಬಲವನ್ನು ಕೊಟ್ಟು, ರಕ್ಷಣೆ ಕೊಡುವುದನ್ನು ಬಿಟ್ಟು, ಅದಕ್ಕೆ ತದ್ವಿರುದ್ಧವಾಗಿ ಮಾಡಿದರೆ ಯಾವ ರೀತಿಯ ಭೂ ಶಾಸನವನ್ನು ಜಾರಿಗೆ ತರುತ್ತಾರೆಯೋ ನನಗೆ ಅರ್ಥವಾಗುವುದಿಲ್ಲ. ಇದು ಒಂದು ಕೋರ್ಟ್ ಎಂದು ಹೇಳತಕ್ಕಂಥ ಭಾವನೆಯೇ ಇಲ್ಲ. ಇದರಲ್ಲಿ ಮಾನ್ಯ ಕೊಣಂದೂರು ಲಿಂಗಪ್ಪನವರು, ಮಾನ್ಯ ಶಿರನಾಳಿಯವರು ಇದ್ದಾರೆಂದು ಹೇಳತಕ್ಕಂಥ ಮಾತು ಉದ್ಭವಿಸಿತದ್ದು. ಈ ರೀತಿ ಭೂ ನ್ಯಾಯ ಮಂಡಳಿಗಳ ಕೆಲಸ ಇತ್ತು. ಆದರೆ ಸರ್ಕಾರದವರು ಇದನ್ನು ಮುಖ್ಯವಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಕೊಣಂದೂರು ಲಿಂಗಪ್ಪನವರು ಹೇಳಿದಹಾಗೆ ಅನ್ಯಾಯವಾದ ತೀರ್ಮಾನವನ್ನು ತೆಗೆದುಕೊಂಡರೆ ಅದರ ಬಗ್ಗೆ ಪುನರ್ ಪರಿಶೀಲನೆ ಮಾಡತಕ್ಕಂಥ ಅಧಿಕಾರವನ್ನು ಕೊಡಬೇಕೆಂದು ಹೇಳುವ ವಾದವನ್ನು ನಾನು ಕೂಡ ಸಮರ್ಥಿಸುತ್ತೇನೆ. ಇವತ್ತು ಮನುಷ್ಯರು ಯಾವುದೋ ಒಂದು ಕ್ಷಣಿಕವಾದ ಯೋಚನೆಗೆ ಒಳಪಟ್ಟು ತಪ್ಪು ನಿರ್ಣಯ ತೆಗೆದುಕೊಳ್ಳಬಹುದು. ಆ ರೀತಿ ತಪ್ಪು ನಿರ್ಣಯವನ್ನು ತೆಗೆದುಕೊಂಡಾಗ ಅದನ್ನು ಪುನರ್‌ಪರಿಶೀಲನೆ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟರೆ ಏನೂ ತೊಂದರೆಯಾಗುವುದಿಲ್ಲ. ನಾವು ದಿನೇ ದಿನೇ ಪಡತಕ್ಕ ಕಷ್ಟ ಎಂದರೆ, ನೀವು ಟ್ರಿಬ್ಯುನಲ್ಲಿಗೆ ಛೇರ್ಮನ್‌ರನ್ನು ನೇಮಕ ಮಾಡುತ್ತಿರುವುದು. ಸಾಮಾನ್ಯವಾಗಿ ನಾಲ್ಕೈದು ತಾಲ್ಲೂಕುಗಳಿಗೆ ಒಬ್ಬೊಬ್ಬ ಛೇರ್ಮನ್ನರು ಇರುತ್ತಾರೆ. ಆ ಛೇರ್ಮನ್ನರು ಹಾಕತಕ್ಕಂಥಹ ಕೋರ್ಟು ತಿಂಗಳಲ್ಲಿ ಒಂದು ವಾರ ಮಾತ್ರ, ಹೀಗೆ ತಿಂಗಳಲ್ಲಿ ಒಂದು ವಾರ ಕೋರ್ಟ್ ಹಾಕಿದರೆ ಹೇಗೆ ತಾನೇ ರೈತರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯ ಅತ ನೇರವಾಗಿ ಇಂಜಂಕ್ಷನ್ ಆರ್ಡರ್ ಕೊಡುವುದಕ್ಕಾಗುವುದಿಲ್ಲ, ಬೇರೆ ಸದಸ್ಯರನ್ನು ಕನ್ಸಲ್ಟ್ ಮಾಡಿ ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ರೈತ ಕಾಯಬೇಕಾಗುತ್ತದೆ. ಅಷ್ಟರಲ್ಲಿ ಅವನ ಮನೆ ಮಠ ನಿರ್ನಾಮವಾಗುತ್ತದೆ. ಆದಕಾರಣ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ನೀವು ಏನು ಟ್ರಿಬ್ಯುನಲ್ ಛೇರ್ಮನ್‌ಗಳನ್ನು ನೇಮಕ ಮಾಡಿದ್ದೀರಿ, ಅವರೇ ಪ್ರತಿಯೊಂದು ಸಾಕ್ಷಿ ಪುರಾವೆಗಳನ್ನು ತಮ್ಮ ಕೈಯಲ್ಲಿ ಬರೆಯಬೇಕಾಗಿದೆ. ಹೀಗಾಗಿ ಒಂದು ಸಾಕ್ಷಿಯನ್ನು ವಿಚಾರ ಮಾಡಬೇಕಾದರೆ 1-1½ ಗಂಟೆಯಾಗುತ್ತದೆ. ಆದುದರಿಂದ ಅವರಿಗೆ ಒಂದೊಂದು ಟೈಪ್‌ರೈಟರುಗಳನ್ನು ಒದಗಿಸಿಕೊಟ್ಟರೆ ಅವರು ಬಾಯಿಯಲ್ಲಿ ಹೇಳಿದ್ದನ್ನು ಜರೂರಾಗಿ ಟೈಪ್ ಮಾಡಬಹುದು, ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಒಂದೊಂದು ಕೇಸಿಗೆ ಎಷ್ಟೋ ಹೊತ್ತು ಆಯಿತೆಂದರೆ ತಿಂಗಳಾನುಗಟ್ಟಲೆ ಅಲೆದುಕೊಂಡುಹೋಗುವಂತಹ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಇದರ ಜೊತೆಗೆ ತಾವು ಒಳ್ಳೆಯ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ. ಅದೇನೆಂದರೆ ತಾವು ನಮಗೆ ಕೊಟ್ಟಿರತಕ್ಕಂತಹ ಇಂಜಂಕ್ಷನ್ ಆರ್ಡರ್ ಕೊಡುವ ಅಧಿಕಾರ ಹುಸಿಯಾಗಿದೆ. ಪ್ರತಿಯೊಂದು ಇಂಜಂಕ್ಷನ್ ಆರ್ಡರ್ ಮೇಲೂ ಹೈಕೋರ್ಟಿನಿಂದ ಸ್ಟೇ ಇದೆ, ಇದರಿಂದಾಗಿ ಜನರು ನೀವು ಏನು ರಕ್ಷಣೆ ನೀಡಿದ್ದೀರಿ, ಯಾವ ನ್ಯಾಯ ದೊರಕಿಸಿ ಕೊಟ್ಟಿರಿ ಎಂದು ನಮ್ಮ ಎದುರಿಗೆ ಮೀಸೆ ಮೇಲೆ ಕೈಹಾಕಿಕೊಂಡು ತಿರುಗುತ್ತಾರೆ. ಈ ರೀತಿಯಾದರೆ ಟ್ರಿಬ್ಯುನಲನ್ನು ಏಕೆ ರಚಿಸಬೇಕಿತ್ತು ? ನಾವು ನಮ್ಮ ಅಸ್ತ್ರ ಬಿಟ್ಟರೂ ಬ್ರಹ್ಮಾಸ್ತ್ರ ಇದ್ದೇ ಇರುತ್ತದೆ. ಇದರಿಂದಾಗಿ ನಮ್ಮ ಕೋರ್ಟಿನ ವ್ಯಾಪ್ತಿಗೆ ಕುಂದು ಬರುತ್ತದೆ, ಮತ್ತು ಇಂಜಂಕ್ಷನ್ ಆರ್ಡರ್ ಇದ್ದರೂ ರೈತರಿಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಆದಕಾರಣ ತಾವು ಇದನ್ನು ಪುನರ್ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಭೂ ನ್ಯಾಯ ಮಂಡಲಿಯು ಯಾವುದೇ ತೀರ್ಮಾನ ತೆಗೆದುಕೊಳ್ಳಲಿ, ಭೂ ಮಾಲೀಕರ ಮತ್ತು ಗೇಣಿದಾರರ ಸಮಸ್ಯೆಯಾಗಲಿ, ಯಾವುದೇ ನಿರ್ಣಯ ತೆಗೆದುಕೊಂಡರೂ ಅದಕ್ಕೆ ರಕ್ಷಾ ಕವಚ ಕೊಡಲೇಬೇಕಾಗುತ್ತದೆ. ಇಲ್ಲವಿದ್ದರೆ ಯಾವುದೇ

ತಪ್ಪು ತೀರ್ಮಾನ ತೆಗೆದುಕೊಂಡರೂ ಕೂಡ ಅದನ್ನು ತಿದ್ದಿ ಸರಿಪಡಿಸಲಿಕ್ಕೆ ಅವಕಾಶ ಇಲ್ಲವಾಗುತ್ತದೆ. ಆದ್ದರಿಂದ ರೆವ್ಯೂ ಪವರನ್ನು ಟ್ರಿಬ್ಯುನಲ್ಲಿಗೆ ಕೊಟ್ಟರೆ ತಪ್ಪಿದ್ದನ್ನು ಸರಿಪಡಿಸಿಕೊಳ್ಳಲಿಕ್ಕೆ ಅವಕಾಶವಾಗುತ್ತದೆಂದು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರುವ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಮೊಟ್ಟಮೊದಲನೆಯದಾಗಿ, ಭೂಮಿ ಪರಿಮಿತಿ ನಿಗದಿಯಾಗಬೇಕು ಮತ್ತು ಹೆಚ್ಚುವರಿ ಭೂಮಿಯನ್ನು ಕಾಯಿದೆಯಲ್ಲಿ ಹೇಳಿದ ಪ್ರಕಾರ ಭೂರಹಿತರಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಹಂಚಬೇಕೆಂಬ ತತ್ವವನ್ನು ದೇಶದಲ್ಲಿ ಎಲ್ಲಾ ಕಡೆಯೂ ಇಟ್ಟುಕೊಂಡಿದ್ದಾರೆ. ಹಾಗೆಯೇ ನಮ್ಮಲ್ಲಿ ಭೂಸುಧಾರಣಾ ಶಾಸನ ಜಾರಿಗೆ ಬಂದಾಗ ಅದನ್ನು ಅಂಗೀಕಾರ ಮಾಡಿ ಈ ಸದನ ಸಂಪೂರ್ಣವಾಗಿ ಒಪ್ಪಿಕೊಂಡಿತು. ಆ ತತ್ವದ ಬಗ್ಗೆ ಮಾನ್ಯ ಮಂಜುನಾಥ್‌ರವರು ಅಪರೋಕ್ಷವಾಗಿ ಏಕೆ ವಿರೋಧ ವ್ಯಕ್ತ ಮಾಡಿದರೋ ಅರ್ಥವಾಗುತ್ತಿಲ್ಲ. ಹೆಚ್ಚು ಭೂಮಿಯನ್ನು ಹೊಂದಿರುವಂತಹ ರೈತರಿಂದ ಆ ಭೂಮಿಯನ್ನು ಪಡೆದು ಭೂ ರಹಿತರಿಗೆ ಹಂಚಿಕೊಡುವ ವಾದವನ್ನು ನಾನಾ ರಾಜ್ಯಗಳಲ್ಲಿ ಪೂರ್ಣ ಅಂಗೀಕಾರ ಮಾಡಿ ಜಾರಿಗೆ ತಂದಾಗಿದೆ, ಅದೇ ರೀತಿ ನಮ್ಮಲ್ಲೂ ಕೂಡ ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಂಥ ಸಂದರ್ಭದಲ್ಲಿ ಈ ವಾದವನ್ನು ಪುನಃ ತರುವುದನ್ನು ನೋಡಿದರೆ ವಿಧಿ ಇಲ್ಲದೆ ಅವರು ಭೂಸುಧಾರಣಾ ಶಾಸನಕ್ಕೆ ಬೆಂಬಲ ಕೊಟ್ಟಿದ್ದಾರೆಯೇ ಹೊರತು ಮಾನಸಿಕವಾಗಿ ಪರಿವರ್ತನೆಯಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಟ್ರಿಬ್ಯುನಲ್ಲನ್ನು ರಚನೆ ಮಾಡುವ ಕಾಲದಲ್ಲಿ ಸರಿಯಾದವರನ್ನು ಆಯ್ಕೆ ಮಾಡಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಭೂ ಪರಿಮಿತಿಯನ್ನು ನಿಗದಿ ಮಾಡುವ ವಿಚಾರದಲ್ಲಿ ಹಿಂದೆ ಶಾಸನದಲ್ಲಿ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದೆ. ಇದರಲ್ಲಿ ಇರುವ ಪ್ರಶ್ನೆ ಏನೆಂದರೆ ಪರಿಮಿತಿಗೆ ಹೆಚ್ಚಿರುವ ಭೂಮಿಯನ್ನು ಯಾವ ಅಧಿಕಾರಿಗಳು ತೀರ್ಮಾನ ಮಾಡಬೇಕೆಂಬುದು ಮಾತ್ರ ಈ ಮಸೂದೆಯ ವ್ಯಾಪ್ತಿ ಎಂದು ತಿಳಿದುಕೊಂಡಿದ್ದೇನೆ. ಹಿಂದೆ ತಹಸೀಲ್ದಾರ್‌ರವರಿಗೆ ಈ ಅಧಿಕಾರವನ್ನು ಕೊಟ್ಟಿತ್ತು. ಭೂಮಾಲೀಕರು ಹೆಚ್ಚುವರಿ ಭೂಮಿಯ ವಿಚಾರದಲ್ಲಿ ಡಿಕ್ಲರೇಷನ್ ಕೊಟ್ಟಿದ್ದು ಅದನ್ನು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಸ್ಪೆಶಲ್ ತಹಸೀಲ್ದಾರರಿಗೆ ಇತ್ತು. ಈಗ ಆ ಅಧಿಕಾರವನ್ನು ಭೂ ನ್ಯಾಯ ಮಂಡಲಿಗೆ ಕೊಡುವುದು ಈ ಮಸೂದೆಯ ಮೂಲಭೂತವಾದ ಉದ್ದೇಶವೆಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಮಾನ್ಯ ಮಂಜುನಾಥ್‌ರವರು ಸಹ ಹೇಳಿದರು. ಮಾನ್ಯ ಲಿಂಗಪ್ಪನವರು ಕೂಡ ಕೆಲವು ಸಮಸ್ಯೆಗಳನ್ನು ವ್ಯಕ್ತ ಮಾಡಿದರು. ಆದರೆ ಇಂಥ ಸಮಸ್ಯೆಗಳೆಲ್ಲ ವಿಚಾರ ವಿನಿಮಯಗಳಲ್ಲಿ ಬರುತ್ತವೆಂದು ನನಗನ್ನಿಸುತ್ತದೆ. ಭಾರತದಲ್ಲಿ ಸ್ವಾತಂತ್ರ್ಯ ಉಳಿಯುತ್ತದೋ ಇಲ್ಲವೋ ಎಂದು ಸ್ವಾತಂತ್ರ್ಯಕ್ಕೆ ಹೋರಾಟ ನಡೆದಾಗ ನಿಮ್ಮ ಕೈಗೆ ಸ್ವಾತಂತ್ರ್ಯ ಕೊಟ್ಟರೆ ಉಳಿಯುವುದಿಲ್ಲವೆಂದು ಕೆಲವರು ಬುದ್ಧಿವಾದ ಹೇಳಿದರು. ವಯಸ್ಕರಿಗೆ ಮತದಾನದ ಹಕ್ಕನ್ನು ಕೊಟ್ಟರೆ ದೇಶದಲ್ಲಿ ಪ್ರಜಾಪ್ರಭುತ್ವ ಹೊರಟುಹೋಗುತ್ತದೆಂದು ಹೇಳಿದರು. ಅದೇ ರೀತಿ ಇವತ್ತಿನ ಪರಿಸ್ಥಿತಿಯೂ ಇದೆ. ಭೂ ನ್ಯಾಯ ಮಂಡಲಿಯ ಮೂಲಕ ತೀರ್ಮಾನ ಮಾಡುವುದು ಮೂಲಭೂತವಾದ ಪ್ರಶ್ನೆ. ಭೂಮಿಯ ಹಕ್ಕು ನೂರಾರು ವರ್ಷಗಳಿಂದ ಬಂದಿರತಕ್ಕದ್ದು. ಅದನ್ನು ಬದಲಾವಣೆ ಮಾಡುವುದು ಒಂದು ದೊಡ್ಡ ಕಾರ್ಯ. ಅದು ಸುಲಭವೆಂದು ಯಾರು ತಿಳಿದುಕೊಂಡಿಲ್ಲ. ಅದನ್ನು ಪರಿಹರಿಸುವ ಕಾರ್ಯವನ್ನು ಭೂ ನ್ಯಾಯ ಮಂಡಲಿಗಳಿಗೆ ಕೊಟ್ಟರೆ ಅದರಿಂದ ನ್ಯಾಯ ಸಿಗುವುದಿಲ್ಲವೆಂದು ಅನುಮಾನ ವ್ಯಕ್ತಪಡಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಅವುಗಳ ಪೈಕಿ ಒಬ್ಬರು ಇಬ್ಬರು ತಪ್ಪಿತಸ್ಥರು ಇದ್ದಾರೆಂದು ಕಂಡುಬಂದಿರಬಹುದು. ಕೆಲವು ಕಡೆ ಸಾಬೀತಾಗಿರುವ ಸಂದರ್ಭಗಳಲ್ಲಿ ಅಂಥ ಸದಸ್ಯರನ್ನು ಕಿತ್ತುಹಾಕಿರುವ ನಿದರ್ಶನಗಳು ಇವೆ. ಇನ್ನು ಮುಂದೆಯೂ ಕೂಡ ಅದನ್ನು ಮಾಡಬಹುದು. ಮಾನ್ಯ ಲಿಂಗಪ್ಪನವರು ಭೂಸುಧಾರಣೆ ಬಗ್ಗೆ ಮಾತನಾಡಿದರು. ಆದರೆ ನಾನು ಅವರ ಪಕ್ಷದ ಬಗ್ಗೆ ಹೇಳುವುದಿಲ್ಲ. ಅವರ ಪಕ್ಷಕ್ಕೆ ಸೇರಿದವರನ್ನು ಕೂಡ ಬದಲಾವಣೆ ಮಾಡಿದಂತಹ ನಿದರ್ಶನಗಳನ್ನು ಕೇಳಿದ್ದೇನೆ. ಸಾರ್ವಜನಿಕ ಪ್ರತಿನಿಧಿಗಳನ್ನು ಇಂಥ ನ್ಯಾಯ ಮಂಡಲಿಗಳಲ್ಲಿ ಸೇರಿಸುವುದರಿಂದ ಸಮಾಜಕ್ಕೆ ಅನ್ಯಾಯವಾಗುವುದಿಲ್ಲವೆಂದೂ, ಅನ್ಯಾಯವಾಗದ ಹಾಗೆ ನಡೆಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೆ ತೆಗೆದುಹಾಕಿರುವುದು ನನಗೆ ಗೊತ್ತಿರಲಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಲಿಂಗಪ್ಪನವರು ಮಾತನಾಡುತ್ತಾ ಇಂಜಂಕ್ಷನ್ ಆರ್ಡರನ್ನು ಟ್ರಿಬ್ಯುನಲ್‌ನವರು ಕೊಟ್ಟರೆಂದು ಹೇಳಿದರು ಅದು ಸತ್ಯವಾದ ವಿಚಾರವಲ್ಲ. ಆದರೆ ಪೋಲೀಸ್ ಅಧಿಕಾರಿಗಳು ಭೂ ಮಾಲೀಕರ ಜೊತೆ ಸೇರಿಕೊಂಡು ಏನೇನೋ ಮಾಡುತ್ತಾರೆಂಬ ಉದಾಹರಣೆ ಕೊಟ್ಟರು. ಇಂಥ ಅವ್ಯವಹಾರಗಳು ನಮ್ಮ ರಾಜ್ಯದಲ್ಲಿ ಅನೇಕ ಕಡೆ ಪೋಲೀಸ್ ಅಧಿಕಾರಿಗಳಿಂದ, ರೆವಿನ್ಯೂ ಅಧಿಕಾರಿಗಳಿಂದ ನಡೆಯುತ್ತಿವೆ. ಅವರುಗಳ ಕೈಗೆ ಈ ಭೂಸುಧಾರಣಾ ಶಾಸನವನ್ನು ಜಾರಿ ಮಾಡುವ ಅಧಿಕಾರವನ್ನು ಕೊಟ್ಟರೆ ಇಂಥ ಅವ್ಯವಹಾರಗಳು ಜಾಸ್ತಿಯಾಗುತ್ತದೆ. ಅಧಿಕಾರಸ್ಥರು ಸರಿಯಾದ ರೀತಿಯಲ್ಲಿ ಕಾನೂನು ಬದ್ಧವಾಗಿ, ನ್ಯಾಯ ಬದ್ಧವಾಗಿ ಕೆಲಸ ಮಾಡಬೇಕು. ಆ ರೀತಿ ಕೆಲಸ ಮಾಡುವ ಹಾಗೆ ನೋಡಿಕೊಳ್ಳುವುದಕ್ಕೆ ಒಂದು ಸಮಿತಿ ಇರುವುದು ಒಳ್ಳೆಯದು. ವಿಶ್ವವಿದ್ಯಾನಿಲಯಗಳಲ್ಲಿ ವೈಸ್ ಛಾನ್ಸಲರ್ ಇರುತ್ತಾರೆ, ಕಂಟ್ರೋಲರ್ ಆಫ್ ಎಕ್ಸಾಮಿನೇಶನ್ಸ್ ಇರುತ್ತಾರೆ; ಏನಾದರು ಒಂದು ತೀರ್ಮಾನ ತೆಗೆದುಕೊಳ್ಳಬೇಕಾದರೆ ? ಮಂದಿ ಕೂಡಿ ಚರ್ಚೆ ಮಾಡುತ್ತಾರೆ. ಯಾವುದಾದರು ಒಂದು ಸೆಲೆಕ್ಷನ್ ಮಾಡಬೇಕಾದರೆ ಕಮಿಟಿ ಮುಖಾಂತರ ಮಾಡಬೇಕಾಗುತ್ತದೆ. ಹೀಗೆ ಯಾವುದೇ ಒಂದು ಕಾರ್ಯ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳತಕ್ಕ ಒಬ್ಬ ಅಧಿಕಾರಿ ಇರಬೇಕಾಗುತ್ತದೆ, ಹೀಗಿದ್ದರೆ ಹೆಚ್ಚಿನ ನ್ಯಾಯ ದೊರಕುತ್ತದೆ ಎಂದು ನನ್ನ ಅಭಿಪ್ರಾಯ. ನನ್ನ ಜಿಲ್ಲೆಯಲ್ಲಿರುವ ಟ್ರಿಬ್ಯುನಲ್ ಮತ್ತು ಬೇರೆ ಕಡೆಯ ಟ್ರಿಬ್ಯುನಲ್‌ಗಳ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ಒಟ್ಟಿನಲ್ಲಿ ಟ್ರಿಬ್ಯುನಲ್‌ಗಳಲ್ಲಿ ಅಧಿಕಾರೇತರರು ಇದ್ದರೆ ಹೆಚ್ಚಿನ ನ್ಯಾಯ ದೊರಕುತ್ತದೆ ಮತ್ತು ಸತ್ಯವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ದಾಖಲೆ ಪತ್ರಗಳು ಇದ್ದರೆ ನ್ಯಾಯ ಯಾವರೀತಿ ಸ್ಪಷ್ಟನೆಯಾಗುತ್ತದೆಂದು ತಮಗೆಲ್ಲ ಗೊತ್ತು. ದಾಖಲೆ ಪತ್ರಗಳು ಇಲ್ಲದಂತಹ ಸಂದರ್ಭದಲ್ಲಿ ಬಡಗೇಣಿದಾರರಿಗೆ ಸರಿಯಾದ ರೀತಿಯಲ್ಲಿ ಹೆಚ್ಚುವರಿ ಭೂಮಿಯನ್ನು ಹಂಚುವುದಕ್ಕೆ ಅಧಿಕಾರೇತರರು ಇದ್ದರೆ ಮಾತ್ರ ಸಾಧ್ಯವಾಗುತ್ತದೆ.

ಆದುದರಿಂದ ಈ ಟ್ರಿಬ್ಯೂನಲ್‌ಗಳಿಗೆ ಈ ಒಂದು ಅಧಿಕಾರವನ್ನು ಕೊಟ್ಟಿರುವುದು ಬಹಳ ಸಾಧುವಾದುದು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಹಾಗೆಯೇ ಇಡೀ ದೇಶದಲ್ಲಿ ಎಲ್ಲಾ ಭಾಗಗಳಲ್ಲೂ ಸರಿಯಾಗಿ ಕೆಲಸ ಮಾಡಿ ಜನತಾ ಪ್ರತಿನಿಧಿ ಮೂಲಕ ಈ ಬಗ್ಗೆ ಬರುವಂಥಾ ಎಲ್ಲಾ ಸಮಸ್ಯೆಗಳನ್ನೂ ಪರಿಹಾರ ಮಾಡಿ ಜನತೆಗೆ ಒಳ್ಳೆಯ ತೀರ್ಪು ಕೊಡುವಂತಾಗಲಿ ಎಂದು ನಾನು ಹಾರೈಸುತ್ತೇನೆ.

ಇನ್ನು ಹೆಚ್ಚುವರಿ ಭೂಮಿಯ ವಿಚಾರದಲ್ಲಿ ಹೇಳುವುದಾದರೆ ಈ ಬಗ್ಗೆ ಒಂದು ಹೆಚ್ಚು ಅಧಿಕಾರವನ್ನು ಈ ಟ್ರಿಬ್ಯುನಲ್‌ಗೆ ಕೊಟ್ಟಿರುವುದಂತೂ ಬಹಳ ಸಾಧುವಾದುದು ಎಂದು ಹೇಳುತ್ತೇನೆ. ಇದರಲ್ಲಿ ತಾವು ಏನೊಂದು ಅಧಿಕಾರವನ್ನು ವಿಭಜನೆ ಮಾಡಿದ್ದೀರಿ ಅದು ಸರಿಯಾದುದು. ಈ ಟ್ರಿಬ್ಯೂನಲ್‌ಗೆ ಎಲ್ಲಾ ಅಧಿಕಾರವನ್ನೂ ಕೊಟ್ಟರೆ ಮಾತ್ರಕ್ಕೆ ಅದು ಸರಿಯಾಗಿ ನಡೆಯಲಿಕ್ಕಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆ ಜಮೀನಿನ ದಾಖಲೆಗಳನ್ನು ಸರಿಯಾಗಿ ಮೊಫೈ ಮಾಡಬೇಕು. ಅದು ಯಾವ ಸರ್ವೆ ನಂಬರಿಗೆ ಸೇರಿದ್ದು, ಅದರ ವಿಸ್ತೀರ್ಣ ಎಷ್ಟು. ಅದು ಯಾವ ವರ್ಗಕ್ಕೆ ಸೇರಿದ್ದು ಇವನ್ನೆಲ್ಲಾ ಮೊಫೈ ಮಾಡಿ ಅದಕ್ಕೆ ಬೇಕಾದಂಥ ದಾಖಲೆಗಳನ್ನು ತಯಾರು ಮಾಡಿ ಈ ಗೇಣಿ ಜಮೀನಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನೂ ತಯಾರು ಮಾಡಿ ಟ್ರಿಬ್ಯೂನಲ್ ಮುಂದೆ ಇಟ್ಟದ್ದೆ ಆದರೆ ಅದರ ಬಗ್ಗೆ ತೀರ್ಮಾನ ಮಾಡಿ ನ್ಯಾಯ ಕೊಡುವುದಕ್ಕೆ ಅನುಕೂಲವಾಗುತ್ತದೆ ಆದುದರಿಂದ ನಾನು ಈ ತಿದ್ದುಪಡಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ. ಇನ್ನು ಈ ಬಗ್ಗೆ ಹೇಳುವುದಾದರೆ ಯಾವ ಟ್ರಿಬ್ಯುನಲ್ಲೇ ಆಗಲಿ ತನಗೆ ಬೇಕಾದ ಹಾಗೆ ಮಾಡಿಕೊಳ್ಳುವ ಹಾಗೆ ಇಲ್ಲ. ಅವೆಲ್ಲವನ್ನೂ ಸರಿಯಾಗಿ ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳಿಗೆ ಸಾಕಷ್ಟು ಕಾಲಾವಕಾಶ ಕೊಡಬೇಕು. ಅದಕ್ಕೆ ಬೇಕಾದಂಥಾ ದಾಖಲಾತಿ ಪತ್ರಗಳನ್ನು ಸಂಗ್ರಹಿಸಿ ಸಾಕ್ಷಿ ಆಧಾರದ ಮೇಲೆ ಆ ಟ್ರಿಬ್ಯೂನಲ್‌ಗಳು ಸರಿಯಾಗಿ ತೀರ್ಮಾನ ಕೊಡುವುದಕ್ಕೆ ಇದರಲ್ಲಿ ಮತ್ತೊಂದು ವ್ಯವಸ್ಥೆಯನ್ನು ಮಾಡುವುದು ಸೂಕ್ತವಾದುದು ಎಂದು ನನಗೆ ಅನ್ನಿಸುತ್ತದೆ.

ಇನ್ನು ಇದರ ಬಗ್ಗೆ ಮತ್ತೊಂದು ಮಾತು ಹೇಳುತ್ತೇನೆ. ಈ ಭೂ ವಿತರಣಾ ಸಮಿತಿಗಳು ಏನು ಇವೆ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನು ಇದ್ದಾರೆ ಅವರಿಗೆ ಸಾಕಷ್ಟು ತರಬೇತಿ ಕೊಟ್ಟು ಅವರು ಇದರ ಬಗ್ಗೆ ಈ ಭೂ ವಿತರಣಾ ಸಮಿತಿಗಳಿಗೆ ಒಂದು ಮಾರ್ಗದರ್ಶನ ಮಾಡಿಕೊಡುವಂತಾಗಬೇಕು

ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಬಂಟವಾಳ್ ಟ್ರಿಬ್ಯೂನಲ್‌ನಲ್ಲಿ ಇಷ್ಟರವರೆಗೂ ಎಷ್ಟು ಕೇಸುಗಳಲ್ಲಿ ಅವರಿಗೆ ಇಂಜಂಕ್ಷನ್ ಆರ್ಡರ್ ಹೋಗಿದೆ, ಎಷ್ಟು ಜನರಿಗೆ ಈ ಬಗ್ಗೆ ನೋಟೀಸ್‌ನ್ನು ಕೊಟ್ಟಿದ್ದಾರೆ ಅವರೆಲ್ಲರೂ ಟ್ರಿಬ್ಯೂನಲ್ ಮುಂದೆ ಬಂದಾಗ ಅವನ್ನು ತೀರ್ಮಾನ ಮಾಡೋಣವೆಂದರೆ ಅದಕ್ಕೆ ಸಂಬಂಧಪಟ್ಟ ಫೈಲುಗಳು ಅವೊತ್ತಿನವರೆಗೂ ಕಾಣಿಸು ವುದಿಲ್ಲ. ಸಾಮಾನ್ಯವಾಗಿ ಹಿಯರಿಂಗ್ ಕೊಟ್ಟ ದಿವಸ ಎರಡು ಕಡೆಯವರೂ ೫೦-೬೦ ಜನರು ಬಂದಿರುತ್ತಾರೆ. ಅವೊತ್ತಿನ ದಿವಸ ಅದಕ್ಕೆ ಸಂಬಂಧಪಟ್ಟ ಫೈಲುಗಳೇ ಕಾಣುವುದಿಲ್ಲ. ಕೊನೆಗೆ ಆ ಕೇಸಸ್‌ನ್ನು ಅಡ್ಜರ್ನ್ ಮಾಡಿದ ಮೇಲೆ ಆ ಫೈಲುಗಳು ಸಿಕ್ಕುತ್ತವೆ. ತಕ್ಷಣ ಸಿಕ್ಕುವುದೇ ಇಲ್ಲ. ಆದುದರಿಂದ ನಾನು ಹೇಳುವುದು ಈ ಭೂ ನ್ಯಾಯ ಮಂಡಲಿಗೆ ಸಂಬಂಧಪಟ್ಟಂತೆ ಕೆಳಮಟ್ಟದ ಅಧಿಕಾರಿಗಳು ಯಾರು ಇದ್ದಾರೆ, ಕೆಳಮಟ್ಟದ ನೌಕರರು ಏನು ಇದ್ದಾರೆ ಅವರು ಸರಿಯಾಗಿ ಕೆಲಸ ಮಾಡತಕ್ಕವಾಗಿರಬೇಕು. ಅವರು ಗೇಣಿದಾರರ ಹಿತಾಸಕ್ತಿಗಳನ್ನು ಗಮನಿಸಿ ಇದರಲ್ಲಿ ಕೆಲಸ ಮಾಡುವಂಥಾವರಾಗಿರಬೇಕು. ನಾನಿಷ್ಟು ಈ ಮಾತನ್ನು ಹೇಳಿದರೆ ಭೂ ಮಾಲೀಕರಿಗೆ ಅನ್ಯಾಯ ಮಾಡಬೇಕು ಅನ್ನುವ ಉದ್ದೇಶ ನನಗೆ ಇಲ್ಲ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದರು ಇದರಲ್ಲಿ ಅನ್ಯಾಯವಾಗಿ ಹೊಡೆದಾಟವಾಗುತ್ತಾ ಇದೆ, ಕೆಲವು ಅಣ್ಣತಮ್ಮಂದಿರು ಹೊಡೆದಾಡಿಕೊಂಡು ಆಸ್ಪತ್ರೆಯಲ್ಲಿ ಮಲಗಿದ್ದಾರೆ, ಇದರಿಂದ ಬಹಳ ಕೆಟ್ಟ ಪರಿಣಾಮಗಳಾಗಿದೆ ಎಂದು. ಆದುದರಿಂದ ನಾನು ಹೇಳುವುದು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥಾವರು ನಾವು ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಸಾಮಾನ್ಯವಾಗಿ ಇದರಲ್ಲಿ ಅಸಿಸ್ಟೆಂಟ್ ಕಮೀಷನರ್ ಮಟ್ಟದ ಅಧಿಕಾರಿಗಳು ಏನು ಇದ್ದಾರೆ ಅವರು ಸಾಮಾನ್ಯವಾಗಿ ಪರಿಜ್ಞಾನ ಉಳ್ಳಂಥಾವರು. ಅವರು ಈವೊತ್ತಿನ ದಿವಸ ಇದರ ಬಗೆ ಸರ್ಕಾರದ ಧೋರಣೆ ಏನು ಇದೆ ಅದನ್ನು ಅನುಸರಿಸಿಕೊಂಡು ಹೋಗಬೇಕು ಎನ್ನುವ ಮನೋಭಾವ ಉಳ್ಳವರು. ಅಂಥಾವರು ಇರುವ ಕಡೆ ಈ ಟ್ರಿಬ್ಯೂನಲ್‌ಗಳು ಸರಿಯಾಗಿ ಕೆಲಸ ಮಾಡಿಕೊಂಡು ಹೋಗುತ್ತದೆ. ಆದರೆ ಅದಕ್ಕಿಂತ ಕೆಳಮಟ್ಟದ ಅಧಿಕಾರಿಗಳು ಎಲ್ಲಿ ಇರುತ್ತಾರೋ ಅಂಥಾ ಕಡೆ ಸರಿಯಾಗಿ ಕೆಲಸ ಏನೂ ಕೂಡ ಆಗುವುದಿಲ್ಲ ಎಂದು ಹೇಳುತ್ತೇನೆ. ಹೀಗೆಂದ ಮಾತ್ರಕ್ಕೆ ಅವರಿಗೆ ಶಿಕ್ಷೆ ವಿಧಿಸಬೇಕು ಎಂದು ಹೇಳುವುದಿಲ್ಲ. ಅಂಥಾ ನೌಕರರಿಗೆ ಶಿಕ್ಷೆ ಏನೂ ಕೊಡಬೇಕಾಗಿಲ್ಲ. ಅವರಿಗೆ ಈ ಬಗ್ಗೆ ಹೊಸ ಪದ್ಧತಿಗಳನ್ನು ಬೆಳೆಸಬೇಕು, ಅವರಿಗೆ ಈ ಬಗ್ಗೆ ಇರುವ ಕಾನೂನಿನ ವಿಚಾರ ತಿಳಿಸಬೇಕು, ಅವರಿಗೆ ಸರಿಯಾದ ತರಬೇತಿ ಕೊಡಬೇಕು, ಇದನ್ನು ಪರಿಶೀಲನೆ ಮಾಡಿ ಅವರನ್ನು ಸರಿಯಾಗಿ ತರಬೇತಿ ಮಾಡಿದರೆ ಆಗ ಟ್ರಿಬ್ಯೂನಲ್‌ಗಳು ಚೆನ್ನಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಈ ಒಂದು ದೃಷ್ಟಿಯಿಂದ ತಾವು ತಂದಿರುವ ಈ ಒಂದು ಶಾಸನಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

† SRI DODDATHIMMAIAH (Gulur).—Madam Speaker, While welcoming the amending Bill I wish to make a few observations regarding the working of the Tribunals. Mr. Manjunath pointed out that the members of the Tribunal instigate persons, who are not connected with the land to declare as tenant and sometimes, confirm the land in the name of the tenant. He did not point out any instances of such cases. If any such cases happen in any tribunal and if such instances are brought to the notice of the Government, Government will certainly take action against that particular member of the Tribunal. Cases are there, where there are parties in the villages and one party instigates another person to file a declaration against any land lord.

As far as phanis are concerned, even if there are no phanis, land is being granted. I submit to the House that the land lords have got their phanis up-to-date. A lot of mischief is played by the Village Accountant. The Village Accountants are the most dangerous

creatures in the working of the tribunals and they are the persons who hinder the work of the Tribunals. Unless Government exercises strict control over them, it is impossible to do justice to the tenant. I request the Government to note this and view this very seriously. These Village Accountants are in the hands of the land lords. 10-12 years' phanis are being changed by the Village Accountants, because they are bribed by the land lords, The Phanis are in the name of the land lords. Even the levies paid to the Goveramment are in the name of the land lords. The land lords are too clever in cheating the tenants. Mr. Manjunath does not know anything about the mischief played by the land lord.

The Village Accountants always move in the villages and they come to the office only during the meetings of the Tribunal. They will be going round the villages and meeting the land lords. If a Village Accountant is transferred to some other place, the land lords are capable of briefing the concerned authorities and bringing him back to the same place. A lot of mischief is played by the Village Accountant.

There is one more thing. If any Tribunal passes an award in favour of the land lord, I request the Government to get the file and scrutinise it. Governmunt should instruct every tribunal that cases which are decided in favour of the land lord should be brought to the notice of the Government and Goveramment should scrutinise and see whether the Tribunal has passed the correct judgment or not.

I wish to point out one more thing, in this connection. The most unfortunate thing is that whenever the Tribunal gives injuncetion in favor of the tenant the injunction order passed by the Tribunal is never respected by the Police. The tenant is being harassed by the land lords and protection is given to the land lords by the Police, instead of protection being given to the tennant. This is very unfortunate. Unless the Police cooperate with the work of the tribunals, it is impossible to give any protection to the tenant. I request the Government to note this down.

3-30 P. M.

I want to tell about the mischief of the clerks in the Tribunal Office. In my experience some of them, if not all of them, are in the hands of the land lords. They delay the handing over of injunction order to the tenant, and secondly, they don't what to bring cases of the land lords before the Tribunal. They go on delaying for months together. We don't know who is the big landlord and who is the small landlord. To-day, in my experince, we have taken the land of the small landlord and given it to the small tenant. That

is all what we are doing. We have not yet decided the question of big landlords who owns 50 acres or 60 acres. The big landlord bribe the clerks and the clerks keep the cases of big land lords in the cold storage. They never bring it to the notice of the Tribunal; I therefore request the Government to see that the big land lords cases of the tenancy should be decided quickly. Generally, the small land lord will never hide the truth. They come and say that so and so is the tenant. In the case of big land lords, they have got money and they bribe the village accountant and get everything done in their favour and they are a headache to the Tribunals.

One more thing I would like to bring to the notice of the Govern ment is in regard to the issuing of Stay Order by the High Court. Any order passed by the Tribunal is stayed by the High Court. I request the Government to think over it and see that the power of the High Court to give stay order is also taken over Government so that no stay order is issued by them in favour of land lords.

About quick disposal of tenancy cases, I regret to bring to the notice of the Government that the staff supplied to the Tribunal is quit inadequate I request the Government to see that enough staff is provided to the Tribunals and I suggest that each taluka should have a separate Assistant Commissioner as the Chairman. Now, what are the works of the Assistant Commissioner to-day?. He has to do the tribunal work of three taluks i. e, three days in Tumkur three days in Gubbi and three days in Kunigal, in addition to this, he has to attend to the cases of Debt Relief Act. There will be 40,000-50,000 debt relief cases. He has to do the work relating to getting back the service inam lands for the purpose of giving it to the thoties and talwars. It is very difficult for him to attend to all these works because of the hevy work. I therefore request the Government to give one Assistant Commissioner as independent Chairman for the Tribunal.

[MR. DEPUTY SPEAKR in the chair]

The Government is recruiting an army of officers through the Public Service Commissioner. Why don't you put an Assistant Commissioner as an independent Chairman for the Tribunal in each taluk?. If that is done, there will be no delay in disposing of the tenancy cases.

Lastly, I wish to say something about the appointment of members to the tribunal. My Hon'ble Friend Mr. Manjunath said something about this subject I would like to submit in this connect ion that we have appointed the members of the tribunal with good

intention and without any motive. In this ocean, there may be some bad members. I request the Government to kindly watch the conduct of the members also. The Government has got the power to change them and I don't mind if the Government change some of the members if they found that they are not up to the mark and up to their expectation.

I thank the Chair for giving me an opportunity to speak on this Bill.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆಯಾದರೂ ಹೆಚ್ಚುವರಿ ಜಮೀನುಳ್ಳ ಭೂಮಾಲೀಕರಿಂದ ಜಮೀನನ್ನು ಸರ್ಕಾರ ಪಡೆಯುವ ಕಾಲದಲ್ಲಿ ಯಾವ್ಯಾವ ನಿಯಮಗಳನ್ನು ಅನುಸರಿಸಬೇಕೆಂಬುದಾಗಿ ಸೂಚಿಸುವುದಾಗಿದೆ, ಹಿಂದೆ ಕೇವಲ ಒಬ್ಬ ಅಧಿಕಾರಿಯ ಹಸ್ತದಲ್ಲಿದ್ದಂಥ ಈ ಒಂದು ಕಾನೂನನ್ನು ಈಗ ನ್ಯಾಯಮಂಡಲಿಗೆ ಹಸ್ತಾಂತರ ಮಾಡತಕ್ಕ ಒಂದು ತಿದ್ದುಪಡಿ ಮಸೂದೆಯಾಗಿದೆ, ನಾವು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳಂಥ ಜನ ಹಾಗೂ ಜನತಾ ಪ್ರತಿನಿಧಿಗಳು. ಸರ್ಕಾರದ ಒಂದು ಸೇವೆಯಲ್ಲಿ ಕೆಲಸ ಮಾಡುತ್ತಾ ಇರತಕ್ಕ ಅಧಿಕಾರಿಗಳಿಗಿಂತಲೂ ಉತ್ತಮವಾದಂಥ ರೀತಿಯಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ಮತ್ತು ಉದ್ದೇಶ ಸಾಧನೆಯಾಗುವ ರೀತಿಯಲ್ಲಿ ಕೆಲಸ ಮಾಡಬಲ್ಲರು ಎನ್ನುವ ಒಂದು ವಿಶ್ವಾಸದ ಆಧಾರದ ಮೇಲೆ ಈ ಒಂದು ಅಧಿಕಾರವನ್ನು ಭೂ ನ್ಯಾಯಮಂಡಲಿಗೆ ವಹಿಸಿಕೊಡುವುದು ವಿಹಿತವಾಗಿದೆ. ನನಗೆ ತಿಳಿದು ಬಂದಿರುವ ಹಾಗೆ ಮಾನ್ಯ ಶ್ರೀ ಮಂಜುನಾಥ್ ಅವರು ಈ ಒಂದು ತಿದ್ದುಪಡಿಯನ್ನು ಖಂಡಿತವಾಗಿಯೂ ವಿರೋಧ ಮಾಡಿಲ್ಲ. ಅವರ ಮಾತು ಯಾವ ಒಂದು ಹಿನ್ನೆಲೆಯಲ್ಲಿದೆಯೆಂದರೆ, ಈ ಭೂ ನ್ಯಾಯಮಂಡಲಿಗೆ ನೇಮಕ ಮಾಡುವ ವ್ಯಕ್ತಿಗಳು ಸರಿಯಾಗಿರಬೇಕು, ಅಂತಹವರನ್ನು ಸರ್ಕಾರ ನೇಮಕ ಮಾಡಬೇಕೆಂಬುದಾಗಿ ಅವರ ಕಳಕಳಿಯನ್ನು ವ್ಯಕ್ತಪಡಿಸುವ ಕಾಲದಲ್ಲಿ ಆ ರೀತಿಯಾಗಿ ಒಂದು ಮಾತನ್ನು ಅವರು ಹೇಳಿದ್ದಾರೆ. ಇಲ್ಲದಿದ್ದರೆ ಈ ಭೂ ನ್ಯಾಯಮಂಡಲಿಗೆ ಇಂತಹ ಅಧಿಕಾರವನ್ನು ಕೊಡಬಾರದು. ಅಂತಹವರಿಂದ ಹೆಚ್ಚಿನ ಸೇವೆ ಸಲ್ಲುವುದಿಲ್ಲವೆಂಬ ಶಂಕೆಯನ್ನು ಅವರು ವ್ಯಕ್ತಪಡಿಸಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಮಾನ್ಯ ಕಂದಾಯ ಸಚಿವರಿಗೆ ಆಗಲೇ ಗೊತ್ತಿರುವ ವಿಷಯವಾಗಿದೆ. ಈ ಭೂ ನ್ಯಾಯಮಂಡಲಿಗೆ ಸದಸ್ಯರನ್ನು ನೇಮಕ ಮಾಡುವ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಅವರ ಮುಂದಿಡುತ್ತೇನೆ. ಯಾರು ಯೋಗ್ಯರಾಗಿದ್ದಾರೆಯೋ ಅಂತಹವರನ್ನು ಆ ಮಂಡಲಿಯಲ್ಲಿ ನೇಮಿಸಬೇಕು. ಅವರು ತಹಸೀಲ್ದಾರರಾಗಲೀ, ಡೆಪ್ಯುಟಿ ಕಮಿಷನರ್ ಆಗಿರಲಿ, ಅಸಿಸ್ಟೆಂಟ್ ಕಮಿಷನರ್ ಅಥವಾ ಯಾವ ಸ್ಥಳೀಯ ಅಧಿಕಾರಿಗಳಾಗಿರಲಿ ಯಾವ ಒಂದು ವಿಧವಾದಂಥ ಪಕ್ಷಪಾತಕ್ಕೂ ಒಳಗಾಗದೆ ಮತ್ತು ಯಾವ ಒಂದು ದುರ್ಭಾವನೆಗೆ, ಪ್ರಚೋದನೆಗೆ ಪ್ರೇರಿತರಾಗದೆ ಪ್ರಾಮಾಣಿಕವಾಗಿ ನ್ಯಾಯವನ್ನು ದೊರಕಿಸಿಕೊಡುವ ಜನರು ಅಲ್ಲಿ ಇರಬೇಕು. ಪಕ್ಷದ ಹಾಗೂ ರಾಜಕೀಯ ದೂರವಾಗಿರುವ ಜನರು ಈಗ ಹಲವಾರು ಜನರು ಇದ್ದಾರೆ. ನಿಮ್ಮ ಪಕ್ಷದಲ್ಲಿಯೇ ಆಗಲೀ ಅಥವಾ ನಮ್ಮ ಪಕ್ಷದಲ್ಲಿಯೇ ಆಗಲೀ ಅಂತಹ ಜನರು ಇಲ್ಲದೆಂದು ಹೇಳುವುದಿಲ್ಲ. ಅಂತಹವರೂ ಸಹ ಇದ್ದಾರೆ ಇನ್ನು ಕೆಲವು ಜನ ಯಾವ ಪಕ್ಷದ ಗೊಂದಲಕ್ಕೂ ಸಿಕ್ಕಿಹಾಕಿಕೊಳ್ಳದೆ ನ್ಯಾಯ, ಧರ್ಮ, ನಿಷ್ಠೆ ಹಾಗೂ ಶಿಸ್ತಿನಿಂದ ಉತ್ತಮವಾದಂಥ ರೀತಿಯಲ್ಲಿ ನಡೆದುಕೊಳ್ಳದೇ ಇರುವ ಜನರು ಏನಿದ್ದಾರೆಯೋ ಅಂತಹವರನ್ನು ಗುರ್ತಿಸಿ ಅವರನ್ನು ನ್ಯಾಯಮಂಡಲಿಗೆ ಸದಸ್ಯರನ್ನಾಗಿ ಮಾಡುವುದು ಸರಿಯಲ್ಲ. ಆದರೆ ಇದುವರೆಗೂ ಈ ಒಂದು ವಿಚಾರದಲ್ಲಿ ಒಂದು ಉತ್ತಮವಾದಂಥ ನೀತಿಯನ್ನು ಸರ್ಕಾರ ಅನುಸರಿಸಿಕೊಂಡು ಬಂದಿಲ್ಲವೆಂದು ನನಗೆ ವಿಷಾದವಾಗುತ್ತದೆ. ಪಕ್ಷದ ಸದಸ್ಯರು ಯಾರೇ ಆಗಿರಲಿ ಅವರನ್ನು ಅಲ್ಲಿಗೆ ಹಾಕುತ್ತೇವೆಂದು ಹೇಳುವುದು ಸರಿಯಾದಂಥ ಮಾರ್ಗವಲ್ಲ. ಆ ಒಂದು ನೀತಿಯನ್ನು ಬದಲಾಯಿಸಬೇಕು. ಅನೇಕ ಸಂದರ್ಭಗಳಲ್ಲಿ ಈ ವಿಚಾರವನ್ನು ನಾವೇ ಕೇಳಿದ್ದೇವೆ. ಹೊರಗಡೆಯಿಂದಲೂ ದೂರುಗಳನ್ನು ಕೇಳಿದ್ದೇವೆ. ಅನೇಕ ಭೂ ನ್ಯಾಯಮಂಡಲಿಗಳಲ್ಲಿ ಕೆಲಸಮಾಡತಕ್ಕ ಸದಸ್ಯರು ಸರಿಯಾದಂಥ ರೀತಿಯಲ್ಲಿ ಹಾಗೂ ಪ್ರಾಮಾ

ಣಿಕ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲವೆಂದು ತಿಳಿದುಬಂದಿದೆ, ಆದರೆ ಅಲ್ಲಿ ಎಲ್ಲರೂ ಹಾಗೆ ಇಲ್ಲ. ಕೆಲವರು ಆ ರೀತಿಯಾಗಿ ಇದ್ದಾರೆ. ಆ ರೀತಿಯಾಗಿ ದೂರುಗಳು ಬಂದಿದ್ದರೂ ಅಲ್ಲಿ ಅಪ್ರಾಮಾಣಿಕತೆಯೇ ಬೆಳೆಯುವುದಕ್ಕೆ ಇನ್ನೂ ಅವಕಾಶ ಮಾಡಿಕೊಟ್ಟಿದೆ. ಅವುಗಳ ಬಗ್ಗೆ ದೂರುಗಳು ಅಲ್ಪಸ್ವಲ್ಪವಿದ್ದರೂ ಅವನ್ನು ಕಡಿಮೆ ಮಾಡುವುದಕ್ಕೆ ಅನುಕೂಲ ಮಾಡಕೊಡಬೇಕು. ಅಷ್ಟು ಹೆಚ್ಚು ಅಲ್ಲಿ ಬೆಳೆಯುವುದಕ್ಕೆ ನಿಜವಾಗಿಯೂ ಅವಕಾಶವನ್ನು ಕೊಡಬಾರದೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತೆಗೆದುಕೊಂಡು ಬರುತ್ತೇನೆ. ಇದು ಈಗ ಸಮಯೋಚಿತವಾದುದು. ಇಂಜೆಂಕ್ಷನ್‌ಗಳನ್ನು ಕೊಡುವ ಅಧಿಕಾರ ಮತ್ತು ರಿಸೀವರ್ ಅವರನ್ನು ನೇಮಕ ಮಾಡುವ ಅಧಿಕಾರವನ್ನು ನೀವು ಭೂ ನ್ಯಾಯ ಮಂಡಲಿಗಳಿಗೆ ಕೊಡುವುದರಿಂದ ಅದನ್ನು ಈ ಒಂದು ತಿದ್ದುಪಡಿ ಮಸೂದೆಯ ಮೂಲಕ ವಹಿಸಿ ಕೊಡುವುದು ಒಳ್ಳೆಯದು. ಏಕೆಂದರೆ ಯಾರಾದರೂ ಒಬ್ಬ ರೈತ ಅಥವಾ ಗುತ್ತಿಗೆದಾರ ಒಂದು ಅರ್ಜಿ ಕೊಟ್ಟು ತಾನು ಬೆಳೆದ ಬೆಳೆಯನ್ನು ಕಟಾವು ಮಾಡುವ ಕಾಲದಲ್ಲಿ ಭೂಮಾಲೀಕರಾಗಿರುವವರು ಅಥವಾ ಕೆಲವೇ ಪ್ರಭಾವಶಾಲಿಗಳು ತನ್ನ ಮೇಲೆ ಧಾಳಿಮಾಡಿ ಏನಾದರೂ ಒಂದು ರೀತಿಯಲ್ಲಿ ಅಪಹಾಸ್ಯಮಾಡುತ್ತಾ ಇದ್ದರೆ, ಅದಕ್ಕಾಗಿ ತನಗೆ ರಕ್ಷಣೆ ಬೇಕೆಂದು ಕೇಳಿದಾಗ ಅವನಿಗೆ ರಕ್ಷಣೆ ಕೊಡಬೇಕು, ಮತ್ತು ಅವನು ಬೆಳೆದ ಬೆಳೆಯನ್ನು ಎಲ್ಲಾ ಕಡೆಯೂ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು, ಯಾರೇ ಆಗಲೀ ಅಂತಹವನ ಜಮೀನಿನಲ್ಲಿ ಬಾರದ ಹಾಗೆ ನಿಷೇಧಾಜ್ಞೆಯನ್ನೂ ಸಹ ಕೊಡಬೇಕೆಂದು ಹೇಳುತ್ತೇನೆ. ಅಂತಹ ವಿಚಾರಗಳೇನಾದರೂ ದಾಖಲೆಗಳ ಮೂಲಕ ಸಾಬೀತಾದರೆ, ಕೂಡಲೇ ಅದರ ಬಗ್ಗೆ ಇಂಜಂಕ್ಷನ್ ಆರ್ಡರ್ ಕೊಡುವುದಕ್ಕೆ ಸಂಬಂಧಪಟ್ಟ ಟ್ರಿಬ್ಯೂನಲ್ ಸದಸ್ಯರಿಗೆ ತಿಳುವಳಿಕೆ ಕೊಡಬೇಕು. ಈಗ ಈ ರೀತಿ ಇಲ್ಲ. ಪಹಣಿ ಇಲ್ಲದೇ ಇದ್ದ ಕೇಸಿನಲ್ಲಿ ಅಲ್ಲ ಇಲ್ಲಿ ಕೆಲವು ಕಡೆ ಅವರಿಗೆ ನೋಟೀಸ್ ಕೊಟ್ಟಾದ ಮೇಲೆ ಅವರಿಂದ ಇಬ್ಬರ ಕಡೆಯಿಂದಲೂ ಮರು ಹೇಳಿಕೆ ತೆಗೆದುಕೊಂಡಾದ ಮೇಲೆ. ವಿವಾದಾಸ್ಪದವಾದ ಆ ಜಮೀನು ಒಬ್ಬ ವ್ಯಕ್ತಿಯ ಸ್ವಾಧೀನದಲ್ಲಿ ಇದ್ದು, ಈ ಭೂನ್ಯಾಯ ಮಂಡಲಿಯವರಿಗೆ ಇದರಲ್ಲಿ ಏನೋ ಅನ್ಯಾಯವಾಗಿದೆ ಎಂದು ಕಂಡು ಬಂದಾಗ ಅವರು ಎರಡನೇ ಆಲೋಚನೆ ಮಾಡದೇ ಈ ಒಂದು ಇಂಜಂಕ್ಷನ್ ಆರ್ಡರನ್ನು ಅವರಿಗೆ ಕೊಡುವಂಥಾ ಪದ್ಧತಿ ಜಾರಿಗೆ ಬರಬೇಕು ಎನ್ನುವುದೇ ನನ್ನ ವಿಚಾರವಾಗಿದೆ ಈ ಲ್ಯಾಂಡ್ ಟ್ರಿಬ್ಯೂನಲ್ಲಿಗೆ ಈ ಸಂಬಂಧವಾಗಿ ಇಂಜಂಕ್ಷನ್ ಆರ್ಡರ್ ಕೊಡುವುದಕ್ಕೆ ಇದರ ಬಗ್ಗೆ ಎರಡನೇ ತಿದ್ದುಪಡಿಯನ್ನು ಏನು ತಂದಿದ್ದೀರಿ ಈ ವಿಷಯದಲ್ಲಿ ನನ್ನ ಈ ಒಂದು ವಿಚಾರವನ್ನೂ ಕೂಡ ಈ ಸಭೆಯ ಮುಂದೆ ಇಟ್ಟಿದ್ದೇನೆ. ಮತ್ತು ಈ ಟ್ರಿಬ್ಯೂನಲ್ ಎರಡು ತಿಂಗಳಿಗೋ ಅಥವಾ ಮೂರು ತಿಂಗಳಿಗೋ ಒಂದು ಸಾರಿ ಕೂರುತ್ತದೆ. ತಮಗೆ ಗೊತ್ತಿರುವ ಹಾಗೆ ಈ ಇಂಜಂಕ್ಷನ ಆರ್ಡರ್‌ಗಳು ಕೊಡತಕ್ಕಂಥಾದ್ದು ತಕ್ಷಣ ಅವರಿಗೆ ರಕ್ಷಣೆ ಸಿಕ್ಕುವುದಕ್ಕೋಸ್ಕರ. ಇದನ್ನು ಇತ್ಯರ್ಥ ಮಾಡಲು ಇದರ ಬಗ್ಗೆ ಏನು ಅರ್ಜಿಗಳು ಬರುತ್ತವೆ, ಆ ಅರ್ಜಿಗಳನ್ನು ಪರಿಶೀಲಿಸಲು ಈ ಟ್ರಿಬ್ಯೂನಲ್‌ಗಳು ಒಂದು ತಿಂಗಳಿಗೊಂದು ಸಾರಿಯೋ ಅಥವಾ ಎರಡು ತಿಂಗಳಿಗೊಂದು ಸಾರಿಯೊ ಕೂತರೆ ಇದರ ಉದ್ದೇಶ ಸಫಲವಾಗುತ್ತದೆಯೇ ಅನ್ನುವುದನ್ನು ಆಲೋಚನೆ ಮಾಡಿ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಸಬ್ ಡಿವಿಷನ್‌ನಲ್ಲಿ ಈ ಬಗ್ಗೆ 600-700 ಅರ್ಜಿಗಳು ಇವೆ. ಈ ಲ್ಯಾಂಡ್ ಟ್ರಿಬ್ಯೂನಲ್ಸ್ ಮೀಟಿಂಗ್ ಸಹ ನಿಧಾನವಾಗಿದೆ. ತಮಗೆ ಗೊತ್ತಿರುವ ಹಾಗೆ ಪಾಂಡವಪುರ ಸಬ್‌ಡಿವಿಷನ್‌ನಲ್ಲಿರತಕ್ಕಂಥಾ ಕಮೀಷನರು ವರ್ಗವಾಗಿ 5 ತಿಂಗಳಾದರೂ ಕೂಡ ಇದುವರೆಗೂ ಯಾರೂ ನೇಮಕವಾಗಿಲ್ಲ. ಹೀಗಿರುವಾಗ ಈ ಲ್ಯಾಂಡ್ ಟ್ರಿಬ್ಯೂನಲ್ಸ್‌ಗಳು ಹೇಗೆ ಕೆಲಸ ಮಾಡುತ್ತವೆ ಈ ಸಬ್ ಡಿವಿಷನ್‌ಗೆ 4 ತಾಲೂಕಿನ ಲ್ಯಾಂಡ್ ಟ್ರಿಬ್ಯೂನಲ್ಸ್‌ಗಳು ಸೇರಿವೆ. ಈಗ ಇದರ ಕಾರ್ಯ ಸ್ಥಗಿತವಾಗಿದೆ. ಮೊನ್ನೆತಾನೇ ಒಂದು ಹುಕುಂ ಹೊರಡಿಸಿ ಮಂಡ್ಯದಲ್ಲಿರುವ ಮುನಿಸಿಪಲ್ ಕಮೀಷನರನ್ನು ಇನ್‌ಚಾರ್ಜ್ ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನ್ ಆಗಿ ಮಾಡಿದ್ದಾರೆ. ಈಗ ಇದರ ಸಿಟಿಂಗ್ ಇಟ್ಟುಕೊಳ್ಳುತ್ತಿದ್ದಾರೆ. 5 ತಿಂಗಳಿನಿಂದಲು ಏನು ಕೆಲಸವಾಗಿರಲಿಲ್ಲ. ಈ ಬಗ್ಗೆ ಇಂಜಂಕ್ಷನ್ ಆರ್ಡರ್ ಕೊಟ್ಟಾದ ಮೇಲೆ ತಕ್ಷಣ ಆ ವ್ಯಕ್ತಿ ಯಾವುದೇ ಒಂದು ಪರಿಹಾರ ಕೇಳಿದರೆ ಸಿಕ್ಕುವುದಿಲ್ಲ. ಈ ತರಹ ಕಾನೂನು ಮಾಡಿದರೆ ಇದರಿಂದ ನಿರುಪಯುಕ್ತವಾಗುತ್ತದೆ. ಈ ತರಹ ಕಾನೂನಿನಿಂದ ಅವರಿಗೆ ತಕ್ಷಣ ರಕ್ಷಣೆ ಸಿಕ್ಕುವುದಿಲ್ಲ. ಆದುದರಿಂದ ನಾನು ತಮ್ಮನ್ನು ಕೇಳಿಕೊಳ್ಳುವುದು ಲ್ಯಾಂಡ್ ಟ್ರಿಬ್ಯೂನಲ್ ಛೇರ್ಮನಗೆ ಒಂದು ಅರ್ಜಿ ಕೊಟ್ಟ ಮೇಲೆ ಕೊಟ್ಟ 3-4 ದಿವಸದೊಳಗೆ ಆ ಅರ್ಜಿಯನ್ನು ವಿಲೇವಾರಿ ಮಾಡಬೇಕು, ಅದಕ್ಕೆ ಒಂದು

ಕಾಲವನ್ನು ಗೊತ್ತು ಮಾಡಬೇಕು. ಹಾಗೆ ಮಾಡದೇ ಹೋದರೆ ಬಹಳ ಕಷ್ಟ. ಆದುದರಿಂದ ನಾನು ಹೇಳುವುದು ಇಂಜಂಕ್ಷನ್ ಆರ್ಡರ್ ಕೊಟ್ಟ ತಕ್ಷಣ ಅಫಿಷಿಯಲ್ ರಿಸೀವರ್ ಅನ್ನು ಅಪಾಯಿಂಟ್ ಮಾಡಿ. ಈಗ ಲ್ಯಾಂಡ್ ಟ್ರಿಬ್ಯೂನಲ್ಲಿ ಇಂಜಂಕ್ಷನ್ ಆರ್ಡರ್ ಕೊಟ್ಟ ತಕ್ಷಣ ಈ ಲ್ಯಾಂಡ್ ಟ್ರಿಬ್ಯೂನಲ್‌ರವರು ತೀರ್ಪು ಕೊಡುವವರೆಗೆ ಆ ಬೆಳೆಯನ್ನು ಅವರು ಆಕ್ಷನ್ ಮಾಡಿ ಅದರಲ್ಲಿ ಏನು ಹಣ ಬರುತ್ತದೋ ಆ ಸೇಲ್ ಪ್ರಾಸೀಡ್ಸ್ ಡಿಪಾಸಿಟ್ಟನ್ನು ಅವರ ಹೆಸರಿನಲ್ಲಿ ಡಿಪಾಸಿಟ್ ಮಾಡುತ್ತಾರೆ. ನಂತರ ಇದು ಯಾರಿಗೆ ದಕ್ಕಬೇಕೋ ಅವರಿಗೆ ದಕ್ಕುತ್ತದೆ. ಇದಕ್ಕೆ ಅಫಿಷಿಯಲ್ ರಿಸೀವರ್ ಅನ್ನು ಅಪಾಯಿಂಟ್ ಮಾಡಿದರೆ ಅವರು ಯಾವ ವಿಧವಾದ ಅಡ್ಡಿಆತಂಕಗಳನ್ನೂ ಒಡ್ಡದೆ ಸೂಕ್ತವಾದ ಸಲಹೆಗಳನ್ನು ತಮ್ಮ ಅಧಿಕಾರಿಗಳಿಗೆ ಕೊಡುತ್ತಾರೆ. ಒಂದು ವೇಳೆ ಒಬ್ಬ ವ್ಯಕ್ತಿ ಇಂಜೆಂಕ್ಷನ್ ಆರ್ಡರ್ ಕೇಳಿದರೂ ಕೂಡ ಆ ಕೇಸು ಕೇವಲ 3-4 ದಿವಸದಲ್ಲೇ ವಿಲೇವಾರಿ ಆಗತಕ್ಕಂಥ ಒಂದು ಕಾರ್ಯವನ್ನು ಅವರು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಸ್ನೇಹಿತರಾದಂಥಾ ಶ್ರೀಮಾನ್ ಮಂಜುನಾಥ್‌ರವರು ಈ ಬಗ್ಗೆ ವಿವಾದಾಸ್ಪದವಾದ ವಿಚಾರವೇನೂ ಹೇಳಿಲ್ಲಾ. ನಮಗೂ ನಿಮಗೂ ಗೊತ್ತಿರತಕ್ಕಂಥಾ ವಿಚಾರವೇ. ಅನೇಕ ಲ್ಯಾಂಡ್ ಟ್ರಿಬ್ಯೂನಲ್ಲಿ ಕೆಲಸ ಮಾಡತಕ್ಕಂಥಾ ಜನ ಸರಿಯಾಗಿಲ್ಲ ಎಂದು ಹೇಳಿದರೇ ಹೊರತು ಈ ಲ್ಯಾಂಡ್ ಟ್ರಿಬ್ಯೂನಲ್ ರಚನೆ ಮಾಡಿದಕ್ಕೆ ನನ್ನ ಸ್ವಾಗತ ಇಲ್ಲ ಎಂದು ಅವರು ವ್ಯಕ್ತಪಡಿಸಲಿಲ್ಲಾ ಮಾನ್ಯ ಅಧ್ಯಕ್ಷರೇ ಈ ವಿಚಾರವನ್ನು ಮಾನ್ಯ ಮಂತ್ರಿಗಳಿಗೆ ಸೂಚಿಸಿ, ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಕಂದಾಯ ಸಚಿವರು ನಮ್ಮ ರಾಜ್ಯದ ಭೂಸುಧಾರಣಾ ಕಾನೂನಿಗೆ ಮೂರನೇ ತಿದ್ದುಪಡಿ ಏನು ತಂದಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಹಾಗೆ ಸ್ವಾಗತ ಮಾಡುತ್ತ ಇದರ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಲು ಇಚ್ಛಿಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ನನಗೂ ಮತ್ತು ದೇಶಕ್ಕೂ ಗೊತ್ತಿರುವ ಹಾಗೆ ಕಳೆದ 4 ವರ್ಷದಿಂದ ಈ ದೇಶದಲ್ಲಿ ಈ ಭೂಸುಧಾರಣೆಯ ಮಾತು ಮತ್ತು ಕೂಗು ಬಹಳ ಚುರುಕಾಗಿ ಕೇಳಿಬರುತ್ತಾ ಇದೆ ಒಂದು ಕಡೆ ಜನರು ನಮಗೆ ಭೂ ಒಡೆತನ ಸಿಕ್ಕುತ್ತದೆ ಅನ್ನುವ ಒಂದು ಆಶೆ ಇಟ್ಟಿದ್ದಾರೆ, ಮತ್ತು ಸರ್ಕಾರವೂ ಕೂಡ ಬೆಂಕಿಗೆ ತಣ್ಣೀರು ಹಾಕುವ ಹಾಗೆ ಇದರ ಬಗ್ಗೆ ಕಾನೂನು ತರುತ್ತಾ ಇದ್ದೇವೆ ಆ ಕಾನೂನಿನ ಮೂಲಕ ನಿಮಗೆ ಜಮೀನು ಕೊಡುತ್ತಾ ಇದ್ದೇವೆ ಎಂದು ಹೇಳುತ್ತಾ ಬಂದಿದೆ. ಆದರೆ ಈವೊತ್ತಿನ ದಿವಸ ಸರ್ಕಾರ ತರುತ್ತಾ ಇರತಕ್ಕಂಥಾ ಕೆಲವು ತಿದ್ದುಪಡಿಗಳನ್ನು ನೋಡಿದರೆ ಬೆಂಕಿಗೆ ತಣ್ಣೀರು ಹಾಕುವ ಹಾಗೆ ಕೆಲಸ ಮಾಡುತ್ತಾ ಇದೆ. ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಲ್ಯಾಂಡ್ ಟ್ರಿಬ್ಯೂನಲ್‌ಗಳು ರಚನೆ ಆಗಿವೆ. ಕೆಲವು ಕಡೆ ಸುಮಾರು 35 ಸಾವಿರದಿಂದ 40 ಸಾವಿರದವರೆಗೂ ಡಿಕ್ಲರೇಷನ್ ಬಂದಿರಬಹುದು. ಕೆಲವು ಕಡೆ ಬಂದೇ ಇಲ್ಲ. ಬರದೇ ಇರತಕ್ಕಂಥಾ ಕಡೆಗಳಲ್ಲಿ ರೈತರು ವಶದಲ್ಲಿ ಭೂಮಿ ಇದ್ದರೂ ಅಲ್ಲಿರತಕ್ಕಂಥಾ ಕೆಲವರ ಹಿತಾಶಕ್ತಿಗಳಿಗೆ ಅವರು ಹೆದರಿ ಬಿಡಿದಿದ್ದಾರೆ. ಅವರು ತಲೆತಲಾಂತರಗಳಿಂದ ಆ ಜಮೀನನ್ನು ಉಳುತ್ತಾ ಇದ್ದರೂ ಅವನಿಗೆ ಹೆದರಿಕೆ ಬೆದರಿಕೆ ಹಾಕುತ್ತಾ ಇರುವುದರಿಂದ ಅವರು ಈ ಲ್ಯಾಂಡ್ ಟ್ರಿಬ್ಯೂನಲ್‌ಗೆ ಅರ್ಜಿಯನ್ನು ಕೊಡತಕ್ಕಂಥಾ ಪರಿಸ್ಥಿತಿ ಇಲ್ಲ. ಉದಾಹರಣೆಗೆ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಮೊದಲು 4-5 ಸಾವಿರ ಡಿಕ್ಲರೇಷನ್ ಕೊಟ್ಟಿದ್ದರು. ಈವೊತ್ತಿನ ದಿವಸ ನೋಡಿದರೆ 40-50 ಸಾವಿರ ಅರ್ಜಿಗಳು ಬಂದಿವೆ. ಇದಕ್ಕೆ ಮೊದಲು ಯಾರು ತಡೆ ಹಾಕಿದ್ದಾರೆ ಅನ್ನುವುದನ್ನು ನೋಡಿದರೆ ಅಲ್ಲೇ ಕೆಲವರು ಅಲ್ಲಿ ರೈತರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದರು ಅನ್ನುವುದು ಗೊತ್ತಾಗುತ್ತದೆ. ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಆ ಜನರಿಗೆ ಸಹಾಯ ಮಾಡಬೇಕಾಗಿದೆ. ಮೊದಲು ಟ್ರಿಬ್ಯೂನಲ್ಸ್ ಅನ್ನು ರಚನೆ ಮಾಡಿದಾಗ ಈ ಭೂಮಿಗಳ ಬಗ್ಗೆ ಇರುವ ವಿವಾದಾಸ್ಪದವಾದಂಥಾ ವಿಷಯಗಳನ್ನು ಪರಿಶೀಲನೆ ಮಾಡಿ ತೀರ್ಪು ಕೊಡುವ ಅಧಿಕಾರ ಇತ್ತು. ಈಗ ಈ ಲ್ಯಾಂಡ್ ಟ್ರಿಬ್ಯೂನಲ್‌ಗೆ ಇನ್ನೂ ಹೆಚ್ಚಿನ ಅಧಿಕಾರ ಕೊಟ್ಟಿದ್ದಾರೆ. ಇದರ ವ್ಯಾಪ್ತಿಯನ್ನು ಇನ್ನೂ ಹೆಚ್ಚು ಮಾಡಿ ಸರ್‌ಪ್ಲಸ್ ಲ್ಯಾಂಡ್ಸ್‌ಗಳನ್ನೂ, ಮಿತಿಗಿಂತ ಹೆಚ್ಚಾಗಿ ಇರುವಂಥಾ ಭೂಮಿಗಳನ್ನೂ ಕೂಡ ವಿಲೇವಾರಿ ಮಾಡತಕ್ಕಂಥಾ ಅಧಿಕಾರವನ್ನೂ ಸಹ ಸರ್ಕಾರ ಈ ಟ್ರಿಬ್ಯೂನಲ್‌ಗೆ ಕೊಡುತ್ತಾ ಇದೆ.

ಇನ್ನು ಇವಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಗೇಣಿದಾರನ ವಶದಲ್ಲಿರತಕ್ಕಂಥ ಭೂಮಿ ಏನು ಇದೆಯೋ ಆ ಬಗ್ಗೆ ಅವನ ಹೆಸರಿಗೆ ಖಾತೆ ಮಾಡುವುದು ಅತಿ ಮುಖ್ಯವಾದುದು. ಸರ್ಕಾರದ ವಶದಲ್ಲಿರತಕ್ಕಂಥಾ ಸಾವಿರಾರು ಎಕರೆ ಭೂಮಿ ತಲೆತಲಾಂತರಗಳಿಂದಲೂ ಯಾವ ಬೆಳೆಯನ್ನೂ ಮಾಡದೇ ಇರತಕ್ಕಂಥಾ ಸನ್ನಿವೇಶಗಳೂ ಕೂಡ ಇವೆ. ಇದೂ ಕೂಡ ಹಂಚಿಕೆಯಾಗಬೇಕಾಗಿತ್ತು. ಇದನ್ನು ಗಮನಿಸುವುದಾದರೆ ಕಳೆದ 4 ವರ್ಷದಿಂದಲೂ ನಮ್ಮ ರಾಜ್ಯದಲ್ಲಿ ಹೆಚ್ಚುವರಿ ಭೂಮಿ ಏನು ಇದೆಯೋ ಇದರಲ್ಲಿ ಒಂದು ಅಂಗುಲ ಭೂಮಿಯನ್ನು ಕೂಡ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಇದುವರೆಗೂ ಹಂಚಿರತಕ್ಕಂಥಾ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಸರ್ಕಾರ ಈ ಬಗ್ಗೆ ಏತಕ್ಕೆ ಮಂದಗಾಮಿಯಾಗಿ ಕೂತಿದೆಯೋ ನನಗಂತೂ ಗೊತ್ತಿಲ್ಲ. ಈ ಬಗ್ಗೆ ಸರ್ಕಾರ ಒಂದು ನೋಟಿಫಿಕೇಷನ್ ಹೊರಡಿಸಬೇಕಾಗಿತ್ತು. ಇದರಲ್ಲಿ ಎ.ಬಿ.ಸಿ ಅಂತ ವರ್ಗ ಮಾಡಿ ಯಾವ ಯಾವ ಭೂಮಿ ಯಾವ ವರ್ಗಕ್ಕೆ ಸೇರಿದ್ದು ಎನ್ನುವುದರ ಬಗ್ಗೆ ಸರ್ಕಾರ ನೋಟಿಫಿಕೇಷನ್ ಹೊರಡಿಸಬೇಕಾಗಿತ್ತು. ಏತಕ್ಕೆ ಆ ರೀತಿಯಾದ ಒಂದು ನೋಟಿಫಿಕೇಷನ್ ಹೊರಡಿಸಲಿಲ್ಲವೋ ನನಗೆ ಗೊತ್ತಿಲ್ಲ.

ಇದರಿಂದ ಗೇಣಿದಾರರಿಗೆ ಇಲ್ಲಿಯವರೆಗೆ ಹೆಚ್ಚುವರಿ ಜಮೀನನ್ನು ಹಂಚುವುದಕ್ಕೆ ಸಾಧ್ಯವಾಗಿಲ್ಲ. ಈ ವಿಚಾರದಲ್ಲಿ ಸರ್ಕಾರ ಯಾವ ಕಾರಣದಿಂದ ತನ್ನ ಕರ್ತವ್ಯ ಲೋಪ ಮಾಡಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದರಿಂದ ಒಂದು ವಿಚಾರ ಮಾತ್ರ ಸ್ಪಷ್ಟವಾಗಿ ಅರ್ಥವಾಗುತ್ತದೆ. ಏನೆಂದರೆ ಈ ಸರ್ಕಾರ ಇನ್ನೂ ಕೂಡ ಈ ರಾಜ್ಯದಲ್ಲಿರತಕ್ಕಂಥ ಭೂ ಮಾಲೀಕರ ಕೃಪಾಕಟಾಕ್ಷದಲ್ಲಿ ಮತ್ತು ಅವರ ಒಂದು ಪ್ರೋಷಣೆಯಲ್ಲಿದೆ ಎಂಬುದು; ಈ ಒಂದು ಕಾರಣದಿಂದಲೇ ಸರ್ಕಾರ ಇಲ್ಲಿಯವರೆಗೆ ಯಾವ ಯಾವ ಭೂಮಿ ಯಾವ ಯಾವ ವರ್ಗಕ್ಕೆ ಬರುತ್ತದೆಂಬ ಬಗ್ಗೆ ಒಂದು ನೋಟಿಫಿಕೇಷನನ್ನು ಹೊರಡಿಸದೆ ತಡ ಮಾಡುತ್ತಿದೆ ಎಂಬುದಾಗಿ ಸರ್ಕಾರದ ಮೇಲೆ ಆರೋಪ ಹೊರಿಸಬೇಕಾಗಿದೆ.

ಇನ್ನು ನಮ್ಮ ರಾಜ್ಯದಲ್ಲಿ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಕೆಲವು ಜಮೀನುಗಳಿವೆ. ಈ ಜಮೀನುಗಳು ಸಹ ಗೇಣಿದಾರರ ವಶದಲ್ಲಿವೆ. ಇಂತಹ ಜಮೀನಿಗೆ ಗೇಣಿದಾರರಾಗಿರುವವರ ಪೈಕಿ ಕೆಲವರು ಸ್ವಂತ ಜಮೀನನ್ನು ಇಟ್ಟುಕೊಂಡಿರುತ್ತಾರೆ. ಈ ರೀತಿ ಎರಡು ವರ್ಗದ ಜಮೀನನ್ನು ಸಾಗುವಳಿ ಮಾಡುತ್ತಿರುವವರು ಏನಾದರೂ ಡಿಕ್ಲರೇಷನ್ ಕೊಟ್ಟಿದ್ದರೆ, ಅಂತಹವರ ಕೇಸುಗಳನ್ನು ಭೂ ನ್ಯಾಯ ಮಂಡಲಿಯವರು ಜಾಗ್ರತೆ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಈ ದೇವಸ್ಥಾನಗಳಿಗೆ ಸೇರಿದ ಇನಾಂತಿ ಜಮೀನಿನ ಬಗ್ಗೆ ತೀರ್ಮಾನ ಕೈಕೊಳ್ಳುವ ಅಧಿಕಾರವನ್ನು ಸ್ಪೆಷಲ್ ಡಿ ಸಿ ಅವರಿಗೆ ಕೊಟ್ಟಿದ್ದಾರೆ. ಈಗ ಅವರ ಮುಂದೆ ಸಾವಿರಾರು ಅರ್ಜಿಗಳು ಇದ್ದರೂ ಸಹ ಜಾಗ್ರತೆ ತೀರ್ಮಾನವಾಗುತ್ತಿಲ್ಲ. ಇಂತಹ ಕೇಸುಗಳು ತೀರ್ಮಾನವಾಗುವವರೆಗೂ ಆ ಜಮೀನು ತಮಗೆ ಸಿಗುತ್ತದೋ ಅಥವಾ ಇಲ್ಲವೋ ಎಂಬತಕ್ಕಂಥ ಒಂದು ಅನುಮಾನ ಆ ಗೇಣಿದಾರರಿಗೆ ಇರುತ್ತದೆ. ಅಲ್ಲದೆ ಸರ್ಕಾರದ ಹತ್ತಿರ ಈಗ ಹೆಚ್ಚುವರಿ ಜಮೀನು ಏನಿದೆ, ಅದನ್ನು ಕೂಡ ಇಂತಹವರಿಗೆ ಹಂಚುವುದು ಕಷ್ಟವಾಗುತ್ತದೆ. ಈ ಬಗ್ಗೆ ನಾನು ಸರ್ಕಾರಕ್ಕೆ ಸೂಚನೆ ಮಾಡುವುದೇನೆಂದರೆ, ಈ ದೇವಸ್ಥಾನಗಳಿಗೆ ಸಂಬಂಧಪಟ್ಟಂತಹ ಜಮೀನುಗಳ ವಿವಾದವನ್ನು ತೀರ್ಮಾನ ಮಾಡುವ ಅಧಿಕಾರವನ್ನು ಸಹ ಲ್ಯಾಂಡ್ ಟ್ರಿಬ್ಯೂನಲ್ ಅವರಿಗೇ ವಹಿಸಿಬಿಟ್ಟರೆ ಅತಿ ಜಾಗ್ರತೆಯಾಗಿ ತೀರ್ಮಾನ ಕೈಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಮತ್ತು ಆ ಇನಾಂ ಜಮೀನುಗಳ ಮಾಲೀಕತ್ವವನ್ನು ಅತಿ ಜಾಗ್ರತೆಯಾಗಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಸರ್ಕಾರಕ್ಕೆ ಸೂಚಿಸುತ್ತೇನೆ.

ಇನ್ನು ಈ ಲ್ಯಾಂಡ್ ಟ್ರಿಬ್ಯೂನಲ್‌ಗಳ ರಚನೆಯ ಬಗ್ಗೆ ನನ್ನ ಮಿತ್ರರು ಹೇಳಿದ್ದಾರೆ. ಜನತಾ ಸಮಿತಿಗಳ ಮೂಲಕ ಈ ಭೂವಿವಾದ ಇತ್ಯರ್ಥವಾಗಬೇಕೆಂಬ ಒಂದು ತತ್ವದ ಮೇಲೆ ಇವು ರಚನೆಯಾಗಿವೆ. ಈ ಒಂದು ತತ್ವವನ್ನು ನಾವೂ ಸಹ ಒಪ್ಪಿಕೊಂಡಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ತಮ್ಮ ಪಕ್ಷದ ಒಂದು ರಾಜಕೀಯವನ್ನು ಬೆಳೆಸಿಕೊಳ್ಳುವುದಕ್ಕೆ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ ಎಲ್ಲ ಕಡೆಯೂ ಈ ರೀತಿ ನಡೆಯುತ್ತಿದೆ ಎಂಬುದಾಗಿ ನಾನು ಆಪಾದನೆ ಮಾಡುವುದಿಲ್ಲ; ಅನೇಕ ಕಡೆಗಳಲ್ಲಿ ಈ ಒಂದು ತತ್ವದ ಪರಿಪಾಲನೆ ಬಹಳ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಆದರೆ ಕೆಲವು ಕಡೆಗಳಲ್ಲಿ ಮಾತ್ರ ತಮ್ಮ ಒಂದು ಪಕ್ಷದ ರಾಜಕೀಯವನ್ನು ಬೆಳೆಸಿಕೊಳ್ಳುವುದಕ್ಕೆ ಹಾಗೂ ಇತರೇ ಪಕ್ಷದವರನ್ನು ಬಗ್ಗು ಬಡಿಯುವುದಕ್ಕೆ ಇದನ್ನು ಉಪಯೋಗ

ಮಾಡಿಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಕೆಲವರು ಇದನ್ನು ತಮ್ಮ ಒಂದು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರಕ್ಕೆ ಶೋಭಾಯಮಾನವಲ್ಲವೆಂದು ಹೇಳುತ್ತೇನೆ. ಮತ್ತು ಇದು ಕಾನೂನಿನ ದೃಷ್ಟಿಯಿಂದ ಹಾಗು ನ್ಯಾಯ ದೃಷ್ಟಿಯಿಂದ ಹಾಗೂ ಶೋಭಾಯಮಾನವಾಗಿ ಕಾಣುವುದಿಲ್ಲವೆಂದು ಹೇಳುತ್ತೇನೆ. ಇಂಥ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಾಗ ಸಂಬಂಧಪಟ್ಟವರ ಮೇಲೆ, ಅವರು ಎಂತಹ ಪ್ರಭಾವಶಾಲಿ ವ್ಯಕ್ತಿಗಳೇ ಆಗಿರಲಿ, ಎಂತಹ ಪ್ರತಿಷ್ಠಿತ ವ್ಯಕ್ತಿಗಳೇ ಆಗಿರಲಿ, ಅವರ ಮೇಲೆ ತೀವ್ರವಾದಂಥ ಕ್ರಮವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ರಾಜ್ಯದಲ್ಲಿರತಕ್ಕಂಥ ಪ್ರತಿ ತಾಲ್ಲೂಕಿನಿಂದ ಎಷ್ಟೆಷ್ಟು ಡಿಕ್ಲರೇಷನ್‌ಗಳು ಈ ಬಗ್ಗೆ ಸರ್ಕಾರಕ್ಕೆ ಬರಬೇಕಾಗಿತ್ತು ಎನ್ನುವ ಬಗ್ಗೆ ಸರ್ಕಾರದ ಹತ್ತಿರ ಕರಡು ಅಂಕಿ ಅಂಶಗಳು ಇವೆ. ಅದರಂತೆ ಕೆಲವು ತಾಲ್ಲೂಕ್‌ಗಳಿಂದ ಡಿಕ್ಲರೇಷನ್‌ಗಳು ಬಂದಿವೆ; ಮತ್ತೆ ಕೆಲವು ಕಡೆಗಳಲ್ಲಿ ಇನ್ನೂ ಹೆಚ್ಚಿನ ಡಿಕ್ಲರೇಷನ್‌ಗಳು ಬಂದಿವೆ ಉದಾಹರಣೆಗೆ ಹೇಳಬೇಕೆಂದರೆ, ಶಿವಮೊಗ್ಗ, ಚಿಕ್ಕಮಗಳೂರು ಕೋಲಾರ ಜಿಲ್ಲೆಗಳಿಗೆ ಸೇರಿದ ಕೆಲವು ಭಾಗಗಳಿಂದ ಸರ್ಕಾರ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಡಿಕ್ಲರೇಷನ್‌ಗಳು ಬಂದಿವೆ. ಇದಕ್ಕೆ ಕಾರಣವೇನೆಂದರೆ, ಅಲ್ಲಿರತಕ್ಕಂಥ ರೈತರ ಸಂಘದವರು ಈ ಬಗ್ಗೆ ಚುರುಕಾಗಿ ಕೆಲಸ ಮಾಡಿದ್ದರಿಂದ; ಮತ್ತು ಅಲ್ಲಿಯ ರೈತರನ್ನು ಸಂಘಟನೆ ಮಾಡಿದ್ದರಿಂದ; ಇವರು ಊರು ಊರಿಗೆ ಹೋಗಿ ಭೂ ಸುಧಾರಣೆಯ ಬಗ್ಗೆ ಪ್ರಚಾರ ಮಾಡಿದರು; ಈ ಕಾನೂನಿನ ಪ್ರಯೋಜನ ಪಡೆಯಕೊಳ್ಳಿ ಎಂದು ಗೇಣಿದಾರರಿಗೆ ತಿಳುವಳಿಕೆ ಕೊಡುವುದರ ಮೂಲಕ ಪ್ರಚಾರ ಮಾಡಿದರು; ಫಾರಂ ನಂ. 7ರ ಮೂಲಕ ಅರ್ಜಿ ಹಾಕಿಕೊಳ್ಳಿ ಎಂದು ತಿಳಿಸಿದ್ದೇ ಅಲ್ಲದೆ ಅವರಿಗೆ ಧೈರ್ಯ ಸಹ ತುಂಬಿದರು ನಾನೂ ಸಹ ಲ್ಯಾಂಡ್ ಟ್ರಿಬ್ಯುನಲ್ ಸದಸ್ಯನಾಗಿದ್ದೇನೆ: ನಾನು ಗೇಣಿದಾರರ ಪರವಾಗಿದ್ದೇನೆಂಬುದು ಇಡೀ ತಾಲ್ಲೂಕ್‌ಗೆ ಗೊತ್ತು ಮತ್ತು ಸರ್ಕಾರಕ್ಕೂ ಗೊತ್ತಿದೆ. ಜೊತೆಗೆ ಇಡೀ ರಾಜ್ಯದಲ್ಲಿರತಕ್ಕಂಥ ಎಲ್ಲ ಗೇಣಿದಾರರ ಹಿತವನ್ನು ಕಾಪಾಡಬೇಕೆಂದು ಹೇಳತಕ್ಕಂತಹವನು ನಾನು; ಆದರೆ ಕೆಲವರು ನನ್ನ ಮೇಲೆ ಇಲ್ಲದ ಅಪವಾದನೆಗಳನ್ನು ಹೊರಿಸುವುದರ ಮೂಲಕ ಸಿವಿಲ್ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದಾರೆ; ಅಕ್ರಮವಾಗಿ ತಮ್ಮ ಜಮೀನನ್ನು ಪ್ರವೇಶ ಮಾಡುವುದರ ಮೂಲಕ ಗೇಣಿದಾರರನ್ನು ಪ್ರಚೋದನೆ ಮಾಡಿದ್ದೇನೆಂಬುದಾಗಿ ನನ್ನ ಮೇಲೆ ಕೇಸ್ ಹಾಕಿದ್ದಾರೆ. ಸಿವಿಲ್ ಕೋರ್ಟಿನಲ್ಲಿ ಈ ಬಗ್ಗೆ ನನ್ನನ್ನು ಪಾರ್ಟಿಯನ್ನಾಗಿ ಮಾಡಿರುವುದೇ ಅಲ್ಲದೆ, ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ನಾನು ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡಬಾರದೆಂದು ಕೇಳಿದ್ದಾರೆ. ನಾನು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಭಾಗವಹಿಸಬಾರದೆಂಬ ದುರುದ್ದೇಶದಿಂದ ಈ ರೀತಿಯೆಲ್ಲಾ ಕೆಲವರು ಸೇರಿಕೊಂಡು ನನ್ನ ಮೇಲೆ ಇಲ್ಲದಿರತಕ್ಕಂಥ ಅಪವಾದನೆಗಳನ್ನು ಹೊರಿಸುತ್ತಿದ್ದಾರೆ. ಅದೇರೀತಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಏನಾಗಿದೆಯೆಂದು, ಅಲ್ಲಿರತಕ್ಕಂಥ ಪೋಲೀಸಿನವರು ಮತ್ತು ಭೂ ಮಾಲೀಕರು ಸೇರಿಕೊಂಡು ರೈತರ ಸಂಘದ ಕೆಲವು ಕಾರ್ಯಕರ್ತರುಗಳ ಮೇಲೆ ಡಿ.ಐ.ಆರ್. ಪ್ರಕಾರ ಮೊಕದ್ದಮೆಗಳನ್ನು ಹೂಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೋಷಿಯಲಿಸ್ಟ್ ಪಾರ್ಟಿಯ ಕಾರ್ಯಕರ್ತರ ಮೇಲೂ ಸಹ ಅದೇ ರೀತಿಯ ಕ್ರಮ ಕೈಗೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಇದರಿಂದ ಅವರುಗಳು ವಿನಾಕಾರಣ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಿದೆ. ಇಂತಹ ಒಂದು ಪರಿಸ್ಥಿತಿ ಬಂದಾಗ ಸರ್ಕಾರದವರು ಸಂಬಂಧಪಟ್ಟವರಿಗೆ ಎಲ್ಲ ರೀತಿಯ ರಕ್ಷಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಮಂದಗತಿಯಿಂದ ಮುನ್ನಡೆಯಬಾರದು, ತೀವ್ರಗತಿಯಿಂದ ಮುನ್ನಡೆಯಬೇಕೆಂದು ಹೇಳುತ್ತಿದ್ದೇವೆಯೇ ವಿನಃ ಈ ವಿಚಾರದಲ್ಲಿ ನಾವುಗಳಾರೂ ಸರ್ಕಾರದ ಒಂದು ನೀತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿಲ್ಲ; ಆದಕಾರಣ ನಮಗೆ ಎಲ್ಲ ರೀತಿಯಿಂದಲೂ ರಕ್ಷಣೆ ಕೊಡುವುದು ಸರ್ಕಾರದ ಮೊದಲನೆಯ ಕರ್ತವ್ಯವಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ತಮ್ಮ ಕರ್ತವ್ಯಭ್ರಷ್ಟತೆಗೆ ಎಡೆಕೊಡಬಾರದೆಂದು ಹೇಳುತ್ತೇನೆ ಮತ್ತು ಈಗ ಕೆಲವು ಭೂ ನ್ಯಾಯ ಮಂಡಲಿಗಳಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ಪಕ್ಷದ ಒಂದು ರಾಜಕೀಯವನ್ನು ಬೆಳಸಿಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ, ಅದಕ್ಕೆಲ್ಲಾ ಎಡೆ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಅದಕ್ಕೆ ಬೆಂಬಲವನ್ನು ಸೂಚಿಸುವುದಕ್ಕೂ ಇಚ್ಛೆಪಡುತ್ತೇನೆ. ನಾನು ಹಿಂದಿನಿಂದಲೂ ಕೂಡ ಭೂ ಸುಧಾರಣೆಯ ಕಾನೂನು ಬಗ್ಗೆ ವಾದ ಮಾಡುತ್ತಾ ಬಂದಿದ್ದೇನೆ. ಇದಕ್ಕೆ ಒಳ್ಳೆಯ ಕಾಲ ಹಿಂದಿನಿಂದಲೂ ಬಂದಿರಲಿಲ್ಲ. ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರ ಕಾಲದಲ್ಲಿ ಅದರಲ್ಲಿಯೂ ಈ ಮಂತ್ರಿಮಂಡಲ ಕಾಲದಲ್ಲಿ ಇದಕ್ಕೆ ಮೋಕ್ಷ ಸಿಕ್ಕಿತೆಂದು ನಾನು ಭಾವಿಸಿದ್ದೇನೆ. ಈ ಒಂದು ದಿಶೆಯಲ್ಲಿ ನಾನು ನಿಜವಾಗಿಯೂ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರನ್ನು ಈಗ ಅಭಿನಂದಿಸಬೇಕಾಗಿದೆ. ಎಷ್ಟು ಸಾರಿ ಅಭಿನಂದನೆಗಳನ್ನು ಅವರಿಗೆ ಸಲ್ಲಿಸಿದರೂ ಸಾಲದು ಇನ್ನೂ ಹೆಚ್ಚಿಗೆ ಅಭಿನಂದಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಭವಿಷ್ಯದಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಇದರ ಬಗ್ಗೆ ತರತಕ್ಕ ಸಂದರ್ಭವೂ ಬರುತ್ತದೆ. ಕೆಲವು ತಿದ್ದುಪಡಿಗಳು ಈ ಒಂದು ತಿದ್ದುಪಡಿ ಮಸೂದೆಯ ಕಕ್ಷೆಯಲ್ಲಿ ಬರುವುದಿಲ್ಲವೆಂದು ಹೇಳಿದ್ದರೂ ಕೂಡ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರ ಮನಸ್ಸನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ ಅವರು ಬಹಳ ಒಳ್ಳೆಯ ತಿದ್ದುಪಡಿಗಳನ್ನು ಸೂಚಿಸಿದ್ದಾರೆ ಬಹಳ ಸಂತೋಷಪಡತಕ್ಕ ವಿಷಯ. ನಾವು ಹಿಂದೆ ಇದರ ಬಗ್ಗೆ ಹೇಳಿದರ ಪ್ರಕಾರ ಮತ್ತು ಮಾನ್ಯ ಶ್ರೀ ಶೆಟ್ಟರ್ ಅವರೂ ಸಹ ಇದರ ಬಗ್ಗೆ ಒಂದು ವಾದವನ್ನು ಸರ್ಕಾರದ ಮುಂದೆ ಇಟ್ಟಾಗ ಅದಕ್ಕೆ ಮಾನ್ಯತೆ ಕೊಟ್ಟಿದ್ದಾರೆಂದು ಹೇಳಬಹುದು. ತಹಸೀಲ್ದಾರ್ ಅವರ ಪವರ್ಸ್ ಏನಿದೆಯೊ ಅದನ್ನು ಟ್ರಿಬ್ಯೂನಲ್‌ಗೆ ಕೊಡಬೇಕು ಮತ್ತು ಟ್ರಿಬ್ಯೂನಲ್‌ಗೆ ಇನ್ನು ಮುಂದೆ ಇದರ ಬಗ್ಗೆ ಹೆಚ್ಚಿನ ಅಧಿಕಾರವನ್ನು ಕೊಡುವುದರಲ್ಲಿ ಹಲವಾರು ಸದಸ್ಯರು ಹಿಂದೆ ಪ್ರಸ್ತಾಪ ಮಾಡಿದ್ದರು. ಈ ಒಂದು ವಿಷಯವನ್ನು ಅವರು ಚೆನ್ನಾಗಿ ಅರಿತು ಅದರ ಒಂದು ಅರ್ಥವನ್ನು ಮಾನ್ಯಮಾಡಿ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಆದ್ದರಿಂದ ನಾನು ಈ ಒಂದು ತಿದ್ದುಪಡಿ ಮಸೂದೆಯನ್ನು ಬಹಳ ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ಅನೇಕ ಕಡೆಗಳಲ್ಲಿ ಈಗಾಗಲೇ ತಹಸೀಲ್ದಾರರು ಅನೇಕ ವಿಚಾರಗಳನ್ನು ಹೆಚ್ಚಿನ ನಿಗಾದಿಂದ ನೋಡುತ್ತಿದ್ದಾರೆ ಆದರೂ ಕೂಡ ಈಗಾಗಲೇ ತಹಸೀಲ್ದಾರರ ಮೇಲೆ ಅನೇಕ ಅಪಾದನೆಗಳು ಬಂದಿವೆ. ಇದನ್ನು ಮನಗಂಡೇ ಈಗ ಭೂನ್ಯಾಯ ಮಂಡಲಿಗಳಿಗೆ ಅವರ ಒಂದು ಅಧಿಕಾರವನ್ನು ಕೊಡುವುದಕ್ಕೆ ಹೊರಟಿದ್ದಾರೆಂದು ನಾನು ಭಾವಿಸಿದ್ದೇನೆ. ಇದರಲ್ಲಿ ಒಂದು ವಿಷಯವನ್ನು ಹೇಳಲಿಲ್ಲ. ಮುಂದೆ ಟ್ರಿಬ್ಯೂನಲ್ ಅವರು ಅಂದರೆ ಭೂನ್ಯಾಯ ಮಂಡಲಿಯವರು ಕೆಲವಾರು ಹಕ್ಕುಗಳನ್ನು ಪಡೆಯುತ್ತಿದ್ದಾರೆ. ಆದರೆ ಇಲ್ಲಿ ಯಾವ ಭೂಮಿ ಸರಂಡರ್ ಆಯಿತು, ಯಾವ ಭೂಮಿ ಸರಂಡರ್ ಆಗಿಲ್ಲವೆಂದು ಹೇಳಿದ್ದರೆ ಚೆನ್ನಾಗಿತ್ತು. ಅದರ ಒಂದು ವಿಚಾರದಲ್ಲಿ ಈಗಾಗಲೇ ತಹಸೀಲ್ದಾರರು ಅನೇಕ ಕೇಸುಗಳನ್ನು ತೀರ್ಮಾನಮಾಡಿಬಿಟ್ಟಿದ್ದಾರೆ. ಇದರಲ್ಲಿಯೂ ಈಗಾಗಲೇ ಬೇಕಾದಷ್ಟು ತಪ್ಪುಗಳು ನಡೆದಿವೆ. ಅವುಗಳ ಬಗ್ಗೆ ಯಾವ ಒಂದು ಕಾನೂನು ಕಕ್ಷೆಯಲ್ಲಿಯೂ ಏನೂ ಉಳಿದಂತೆ ಮಾಡಲಿಲ್ಲ, ಆದ್ದರಿಂದ ತಾವು ದಯಮಾಡಿ ಇವುಗಳ ಬಗ್ಗೆ ತಕ್ಕ ವಿವರಗಳನ್ನು ಕೊಡಬೇಕು, ಆದ್ದರಿಂದ ತಾವು ಈಗಲೇ ಆ ಕೇಸುಗಳ ಬಗ್ಗೆ ಏನು ತೀರ್ಮಾನವನ್ನು ತಹಸೀಲ್ದಾರರು ತೆಗೆದುಕೊಂಡಿದ್ದಾರೋ ಅವನ್ನೆಲ್ಲಾ ಪುನಃ ರಿವ್ಯೂ ಮಾಡುವ ಅಧಿಕಾರವನ್ನು ಟ್ರಿಬ್ಯೂನಲ್‌ಗೆ ಕೊಡಬೇಕು. ಅವುಗಳ ಬಗ್ಗೆ ಅಂತ್ಯ ತೀರ್ಮಾನ ಮಾಡುವುದು ಟ್ರಿಬ್ಯೂನಲ್ ಅವರದೇ ಆಗಿರಬೇಕು. ಆದ್ದರಿಂದ ತಹಸೀಲ್ದಾರರು ತೀರ್ಮಾನ ಮಾಡಿರುವ ಕೇಸುಗಳನ್ನು ರಿವ್ಯೂ ಮಾಡುವ ಅಧಿಕಾರವನ್ನು ಟ್ರಿಬ್ಯೂನಲ್ ಅವರಿಗೆ ಕೊಡಿ ಎಂಬುದಾಗಿ ನಾನು ಹೇಳುತ್ತಿದ್ದೇನೆ. ಈ ಒಂದು ವಿಚಾರದಲ್ಲಿ ನಾನು ಮಂತ್ರಿಗಳ ಬಗ್ಗೆ ಏನೂ ಹೇಳುವುದಿಲ್ಲ, ಪದೇ ಪದೇ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ತಹಸೀಲ್ದಾರರ ಅಧಿಕಾರವನ್ನು ತೆಗೆದು ಟ್ರಿಬ್ಯೂನಲ್‌ಗೆ ಕೊಡಬೇಕೆಂಬುದೇ ಈ ಒಂದು ತಿದ್ದುಪಡಿ ಮಸೂದೆಯ ಮೂಲೋದ್ದೇಶ. ಆದರೆ ಮಾನ್ಯ ಶ್ರೀ ಬೈರೇಗೌಡರು ಬರೀ ಕಾಫಿಕೇಷನ್ ವಿಷಯವಾಗಿ ಅನೇಕ ಅಂಶಗಳನ್ನು ತಿಳಿಸಿದ್ದಾರೆ, ಆದರೆ ನಾನು ಒಂದೆರಡು ವಿಷಯಗಳನ್ನು ಮಾನ್ಯ ಸಚಿವರಿಗೆ ನೆನಪು ಮಾಡಿಕೊಡುತ್ತೇನೆ. ಈಗ ಟ್ರಿಬ್ಯೂನಲ್ಸ್ ಏನು ಕೆಲಸಗಳನ್ನು ಮಾಡುತ್ತಿದ್ದರೂ ಇಂಜಂಕ್ಷನ್ ಆರ್ಡರ್ ಕೊಡತಕ್ಕ ಅಧಿಕಾರವನ್ನು ಟ್ರಿಬ್ಯೂನಲ್ ಅವರಿಗೆ ಕೊಡಬೇಕು. ಅದನ್ನು ಕೊಡತಕ್ಕ ಸಂದರ್ಭದಲ್ಲಿ ಚೇರ್‌ಮನ್ನರು ಇರಬೇಕು. ಅವರ

ಹಾಜರಾತಿ ಅತ್ಯಾವಶ್ಯಕ. ಕೆಲವು ಕಡೆಗಳಲ್ಲಿ ಚೇರ್‌ಮನ್ನರೇ ಭೂ ನ್ಯಾಯಮಂಡಲಿಯ ಅಧ್ಯಕ್ಷರಾಗಿ ತೃಪ್ತಿಕರವಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ತಾಲ್ಲೂಕುಗಳಲ್ಲಿ ಕೆಲವು ಅಧಿಕಾರಿಗಳು ತಾಲ್ಲೂಕ್ ಮಂಡಲಿಯ ಅಧ್ಯಕ್ಷರಾಗಿದ್ದುಕೊಂಡು ಕೆಲವು ಕೆಲಸಗಳನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಗೇಣಿದಾರರ ಪ್ರಶ್ನೆ ಬಹಳ ಜಟಿಲವಾದ ಪ್ರಶ್ನೆ. ಆದ್ದರಿಂದ ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಒಳ್ಳೊಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಬೇಕು. ಕೆಲವು ತಾಲ್ಲೂಕುಗಳಿಂದ ನಮಗೆ ಬಂದಿರುವ ವರದಿಯ ಪ್ರಕಾರ ಇಂಜಂಕ್ಷನ್ ಕೊಡುವ ಸಂದರ್ಭದಲ್ಲಿ ಜಮೀನ್‌ದಾರರ ಪರವಾಗಿ ಸಹಾಯ ಮಾಡುವುದು ಉಂಟು, ಆದ್ದರಿಂದ ಮಾರನೆಯ ದಿವಸ ಯಾವುದಾದರೂ ಒಂದು ಕೇಸಿನ ಬಗ್ಗೆ ಕೋರ್ಟ್ ನಡೆಯಬೇಕಾಗಿದ್ದರೆ ಅಲ್ಲಿ ಭೂ ನ್ಯಾಯ ಮಂಡಲಿ ಅಧ್ಯಕ್ಷರು ಕೂತುಕೊಳ್ಳಬೇಕು ಆದರೆ ಅನೇಕ ಸಂದರ್ಭಗಳಲ್ಲಿ ಚೇರ್‌ಮನ್ನರೇ ತಪ್ಪಿಸಿಕೊಳ್ಳುತ್ತಾರೆ. ಇದರಿಂದ ಭೂ ನ್ಯಾಯಮಂಡಲಿ ಕೆಲಸ ಸರಿಯಾಗಿ ಕೆಲಸ ಮಾಡದಂತಾಗುವುದಿಲ್ಲ. ಇದನ್ನು ತಪ್ಪಿಸುವುದಕ್ಕೆ ಒಂದು ಪ್ರಿಯವಾದ ಆಲ್ಟರ್‌ನೇಟಿವ್ ವಿಚಾರ ಮಾಡಬೇಕು. ಅದಕ್ಕಾಗಿ ನಾನು ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರಾದವರು ಕೋರ್ಟಿಗೆ ಅಥವಾ ಸಭೆಗೆ ಒಂದುವೇಳೆ ಹಾಜರಾಗದಿದ್ದರೆ ತಾವು ದಯಮಾಡಿ ಅಲ್ಲಿರತಕ್ಕ ಕಮಿಟಿ ಸದಸ್ಯರಲ್ಲಿ ಯಾರಾದರೂ ಒಬ್ಬರು ಅಧ್ಯಕ್ಷ ಸ್ಥಾನವನ್ನು ವಹಿಸಬೇಕೆಂದು ಮಾಡಬೇಕು. ಅದಕ್ಕೆ ಸರಿಯಾದ ದಾರಿ ಮಾಡದಿದ್ದರೆ ಅನೇಕ ಸಂದರ್ಭಗಳಲ್ಲಿ ಇಂಜಂಕ್ಷನ್ ಆರ್ಡರ್ ಕೊಡುವುದಕ್ಕಾಗುವುದಿಲ್ಲ. ಈ ಒಂದು ವಿಚಾರದಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಅಧ್ಯಕ್ಷರು ಇಲ್ಲದೇ ಇದ್ದಾಗ ಭೂ ನ್ಯಾಯ ಮಂಡಲಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷ ಸ್ಥಾನ ಪಡೆಯುವಂತೆ ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಸೇರಿಸಬೇಕಾಗಿತ್ತು. ಇನ್ನುಳಿದಿರುವ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಅದರೂ ಒಂದು ವಿಷಯವನ್ನು ಮಾತ್ರ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರಲ್ಲಿ ಮತ್ತು ಮಾನ್ಯ ಶ್ರೀ ಸುಬ್ಬಯ್ಯಶೆಟ್ಟಿಯವರಲ್ಲಿ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಅವರಿಬ್ಬರ ಗಮನವನ್ನೂ ಸಹ ಅದರ ಬಗ್ಗೆ ಸೆಳೆಯುತ್ತಾ ಇದ್ದೇನೆ. ಈ ಒಂದು ವಿಚಾರದಲ್ಲಿ ರೈತರು ಅರ್ಜಿ ಹಾಕುವುದು ಮುಂದಿನ 31ನೇ ತಾರೀಖಿಗೆ ಮುಗಿದು ಹೋಗುತ್ತದೆ. ನಾನು ಇದರ ಬಗ್ಗೆ ಹಲವಾರು ಬಾರಿ ಹೇಳಿದ್ದೇನೆ. ಈಗ ಇವತ್ತು ಜೀವನದ ಬಗ್ಗೆ ಹೋರಾಟ ಮಾಡುವ ಜನರು ಇರುವುದರಿಂದ ಅನೇಕವೇಳೆ ಕೆಲವು ಜನ ಕಾರ್ಯಕರ್ತರು ರೈತರಿಂದ ಅರ್ಜಿಗಳನ್ನು ಹಾಕಿಸುವ ಕೆಲಸವನ್ನೇ ನಿಲ್ಲಿಸುವ ಹಾಗೆ ಮಾಡಿದ್ದಾರೆ. ಇದರಿಂದಾಗಿ ಅನೇಕ ಅರ್ಜಿಗಳು ಹಾಗೆಯೇ ಉಳಿದಿವೆ. ಇದರಲ್ಲಿ ಒಂದು ರೀತಿ ರಾಜಕೀಯದ ಬಣ್ಣ ಹಚ್ಚಿಕೊಂಡಿರುವ ಹಾಗೆ ಕಾಣುತ್ತದೆ. ಇದರಿಂದಲೇ ಇಂತಹ ಸಮಸ್ಯೆಗಳು ಬಗೆಹರಿಯುತ್ತಾ ಇಲ್ಲ. ಅದಕ್ಕಾಗಿ ಇದನ್ನು ಇನ್ನೂ 6 ತಿಂಗಳುಗಳ ಕಾಲ ಮುಂದಕ್ಕೆ ಹಾಕಬೇಕಾಗಿದೆ. ಏಕೆಂದರೆ ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಅನೇಕ ಗೇಣಿದಾರರು ಅರ್ಜಿಗಳನ್ನು ಹಾಕಲೇ ಇಲ್ಲ. ನನಗೆ ತಿಳಿದಿರುವ ಹಾಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಸಾವಿರಾರು ಜನ ಗೇಣಿದಾರರು ಅರ್ಜಿಗಳನ್ನು ಹಾಕಲೇ ಇಲ್ಲ. ಅರ್ಜಿಹಾಕಲು ಸಹ ಇನ್ನೂ ಧೈರ್ಯ ಮಾಡಿಲ್ಲ. ಅಲ್ಲಿನ ರಾಜಕೀಯದಿಂದ ಅವರಿಗೆ ಸರಿಯಾದ ತಿಳುವಳಿಕೆ ಕೊಡುವುದಕ್ಕಾಗುತ್ತಾ ಇಲ್ಲ. ನಾನು ಇದರ ಬಗ್ಗೆ ಹಿಂದೆಯೇ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ. ಯಾರು ಅಲ್ಲಿ ವಿಲೇಜ್ ಅಕೌಂಟೆಂಟ್ ಇರುತ್ತಾನೋ, ಯಾರು ಈ ಒಂದು ಅಧಿಕಾರದ ಕಕ್ಷೆಯಲ್ಲಿ ಅಥವಾ ಚೌಕಟ್ಟಿನಲ್ಲಿ ಬರುತ್ತಾನೋ ಅವನು ಇದರ ಬಗ್ಗೆ ಜವಾಬ್ದಾರಿ ವಹಿಸಬೇಕು. ಯಾರ್ಯಾರು ಗೇಣಿದಾರರು ಇದ್ದಾರೆ. ಅವರಿಗೆ ಪಹಣಿ ಇರಲಿ ಅಥವಾ ಇಲ್ಲದೇ ಇರಲಿ ಅವರು ಪಹಣಿಗಾಗಿ ಅರ್ಜಿಯನ್ನು ಹಾಕಲೇ ಬೇಕು. ಅಂತಹವರು ತಮಗೆ ಎಷ್ಟು ಜಮೀನು ಇದೆಯೆಂಬುದನ್ನು ನಿಕರವಾಗಿ ಅದರಲ್ಲಿ ತಿಳಿಸಬೇಕು. ಕಾನೂನು ಬಾಹಿರವಾಗಿ ಯಾರಾದರೂ ಜಮೀನನ್ನು ಬಿಡಿಸಿದ್ದರೆ ಅದಕ್ಕೂ ಬೇರೆ ಒಂದು ಕಾನೂನು ಇದೆ. ಅಂತಹ ಸಂದರ್ಭದಲ್ಲಿ ವಿಲೇಜ್ ಅಕೌಂಟೆಂಟ್ ಆಗಿರುವವರು ಅರ್ಜಿಗಳನ್ನು ಹಾಕಿಸದಿದ್ದರೆ ಅಂತಹವರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ನಾನು ಹೆಚ್ಚಿಗೆ ಭಾಷಣ ಮಾಡತಕ್ಕ ಅವಶ್ಯಕತೆ ಇಲ್ಲ. ಮಾನ್ಯ ಸಚಿವರು ಕಾಲದ ವಿಸ್ತರಣೆ ಮಾಡತಕ್ಕದ್ದು ಮತ್ತು ಅಧಿಕಾರಿಗಳ ಮೇಲೆ ಕಾನೂನಿನ ಕಡಿವಾಣ ಹಾಕಿಸತಕ್ಕ ಬಗ್ಗೆ ಗಮನ ಹರಿಸಬೇಕು ಇಷ್ಟು ವಿಷಯವನ್ನು ತಮ್ಮ ಅವಗಾಹನೆಗೆ ತಂದು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).— ಮಾನ್ಯ ಅಧ್ಯಕ್ಷರೆ, ಈಗ ಭೂಸುಧಾರಣೆ ವಿಷಯವಾಗಿ ದೊಡ್ಡ ಪ್ರವಾಹ ಹೋಗುತ್ತದೆ. ಈ ಪ್ರವಾಹದ ವಿರುದ್ಧವಾಗಿ ಮಾತನಾಡತಕ್ಕದ್ದು ಒಂದು ಸಾಹಸದ ಕೆಲಸ ಎಂದು ತಿಳಿದುಕೊಂಡಿದ್ದೇನೆ, ಆದರೆ ಒಂದು ಮನವಿಯನ್ನು ಮಾನ್ಯ ಮಂತ್ರಿಗಳಲ್ಲಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಈಗಾಗಲೇ ಸಾಕಾದಷ್ಟು ತಿದ್ದುಪಡಿಗಳು ಬಂದಿವೆ. ಇದೇ ರೀತಿಯ ಉತ್ಸಾಹ ಜಮೀನು ಕಳೆದುಕೊಂಡಿರುವ ಬಡಪಾಯಿಗಳ ಬಗ್ಗೆ ಯಾತಕ್ಕೆ ಇಲ್ಲ, ನಿಮ್ಮ ಕನಿಕರ ಯಾತಕ್ಕೆ ಅವರ ಕಡೆ ತಿರುಗಿಲ್ಲ ? 1974ರಿಂದಲೇ ಯಾರದೂ ಗುತ್ತಿಗೆ ಬರುತ್ತಿಲ್ಲ, ಕಾಂಪನ್‌ಸೇಷನ್ ಬರುತ್ತಿಲ್ಲ. ಪೀಕಲ್‌ಸಕ್ಷನ್ಸ್, ಬಡವರು, ಸ್ಮಾಲ್ ಲ್ಯಾಂಡ್ ಹೋಲ್ಡರ್ಸ್ ಮತ್ತು ವಿಧವೆಯರುಗಳಿಗೆ ತಾತ್ಕಾಲಿಕ ಪರಿಹಾರ ಕೊಡತಕ್ಕ ಬಗ್ಗೆ ಗಮನ ಹರಿಯಲಿ ಎಂದು ಮೊದಲನೆಯದಾಗಿ ನಾನು ಬೇಡಿಕೊಳ್ಳುತ್ತೇನೆ. ಈ ಲ್ಯಾಂಡ್ ರಿಫಾರ್ಮ್ಸ್ ಈಗಲೇ ಪೂರೈಸುವುದಿಲ್ಲ. ಇನ್ನೂ ಎಷ್ಟು ವರ್ಷ ಆಗುತ್ತದೆಯೋ ಗೊತ್ತಿಲ್ಲ. ನ್ಯಾಯವಾಗಿ ಕೊಡಬೇಕಾದ ಕಾಂಪನ್‌ಸೇಷನ್ ಎಷ್ಟಿದೆಯೋ ಅಷ್ಟನ್ನಾದರೂ ಕೊಡುವುದಕ್ಕೆ ಸಾಧ್ಯವಾದಷ್ಟು ಬೇಗ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಸರ್‌ಪ್ಲಸ್ ಲ್ಯಾಂಡ್ ಬಗ್ಗೆ ಒಂದು ಯೋಜನೆ ಹರಿದಿದೆ ಸರಪ್ಲಸ್ ಲ್ಯಾಂಡ್ ತೀರ್ಮಾನ ಮಾಡುವುದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಮ್ಮ ನೆರೆ ರಾಜ್ಯಗಳಾದ ತಮಿಳುನಾಡಿನಲ್ಲಿ, ಆಂದ್ರದಲ್ಲಿ ಕೆಲವು ಜಮೀನಿದೆ. ಕರ್ನಾಟಕದಲ್ಲಿ ಹೊಸೂರು ಹತ್ತಿರ ಕೆಲವರಿಗೆ, ಗೋರಿಬಿದನೂರು ಹತ್ತಿರ ಕೆಲವರಿಗೆ ಜಮೀನುಗಳಿವೆ ಸರ್‌ಪ್ಲಸ್ ತೆಗೆದುಕೊಳ್ಳುವಾಗ ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ ಎಂಬುದರ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಮತ್ತು ನಾನು ತಿಳಿದ ಹಾಗೆ ಟ್ರಿಬ್ಯುನಲ್ಸ್‌ಗೆ ಅಧಿಕಾರ ಕೊಡುವ ಬಗ್ಗೆ ಜನಗಳ ಪ್ರತಿನಿಧಿಯಾಗಿ ನಾನು ವಿರೋಧ ಮಾಡುವುದಕ್ಕೆ ಖಂಡಿತ ಇಷ್ಟಪಡುವುದಿಲ್ಲ. ಆದರೂ ಕೂಡ ನನಗೆ ಅನೇಕ ಕಡೆಯಿಂದ ದೂರುಗಳ ಬಂದಿವೆ ಕೆಲವು ಸಂದರ್ಭಗಳಲ್ಲಿ ಹಣ ಮತ್ತು ಬೇರೆ ಪ್ರಭಾವಗಳಿಗೆ ಟ್ರಿಬ್ಯುನಲ್‌ಗಳು ಒಳಗಾಗಿವೆ ಎಂದು ಅನೇಕ ಕಡೆ ಕೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಗೆ ಮತ್ತು ಇತರ ದೂರದ ಜಿಲ್ಲೆಗಳಿಗೆ ಪ್ರಯಾಣ ಮಾಡಿದಾಗ ನನ್ನ ಗಮನಕ್ಕೆ ಬಂತು, ಅನೇಕ ಕಡೆಗಳಲ್ಲಿ ನ್ಯಾಯಕ್ಕೆ ವಿರೋಧವಾಗಿ ನಡೆದಿರುವ ಸಂದರ್ಭಗಳಿವೆ ಎಂದು. ಅದರಲ್ಲೂ ಕೂಡ ಸತ್ಯಾಂಶ ಇದೆ. ಇದರಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ ನ್ಯಾಯ ದೊರೆಕುವಂತೆ ಮಾಡಿ ಎಂದು ಹೇಳುತ್ತೇನೆ. ಮತ್ತು ತಾವು ಅನೇಕಸಾರಿ ಹೇಳಿದ್ದೀರಿ ಟ್ರಿಬ್ಯುನಲ್‌ಗಳಲ್ಲಿ ಬೇಗ ತೀರ್ಮಾನಗಳು ಆಗಿರಬೇಕೆಂದು. ಅನೇಕ ಕಡೆಗಳಲ್ಲಿ ಮೀಟಿಂಗ್ ನಡೆಯಬೇಕಾದ ಸಂದರ್ಭದಲ್ಲಿ ಛೇರ್ಮನ್ ಇಲ್ಲ ಅಥವಾ ಸದಸ್ಯರಿಲ್ಲ ಎಂದು ಮೀಟಿಂಗ್‌ಗಳು ಮುಂದಕ್ಕೆ ಹೋಗುತ್ತಿವೆ. ಆದುದರಿಂದ ಇದರ ಬಗ್ಗೆ ಸ್ವಲ್ಪ ಗಮನ ಹರಿಸಿ ಆದಷ್ಟು ಬೇಗ ತೀರ್ಮಾನ ಆಗುವುದರ ಬಗ್ಗೆ ಇನ್ನಷ್ಟು ಆಸಕ್ತಿ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿದೆ. ಇದರಲ್ಲಿ ನಾನು ಯಾವ ಉತ್ಪ್ರೇಕ್ಷೆ ಮಾಡಿ ಹೇಳುವುದಿಲ್ಲ. ನನ್ನ ಸ್ವಂತ ಭಾವ 90 ವರ್ಷ ವಯಸ್ಸಾಗಿರುವವರು ಇದ್ದಾರೆ. ಅವರಿಗೆ ಕಾಗದ ಬರೆಯುವುದಕ್ಕೆ ಶಕ್ತಿ ಇಲ್ಲ. ನನ್ನ ಅಕ್ಕನವರೇ ಎಲ್ಲಾ ನೋಡಿಕೊಳ್ಳುತ್ತಿದ್ದಾರೆ. ಆದರೆ ಆ ಕಾಗದ ಟ್ರಿಬ್ಯುನಲ್‌ಗೆ ಕೊಡುವಾಗ ಗುತ್ತಿಗೆ ಸೃಷ್ಟಣೆ ಮಾಡಿಕೊಟ್ಟಿದ್ದಾರೆ, ನನ್ನ ಭಾವನವರಿಗೆ ಬರೆಯುವುದಕ್ಕೆ ಶಕ್ತಿ ಇಲ್ಲದಿರುವುದರಿಂದ ಪವರ್ ಆಫ್ ಅಟಾರ್ನಿ ನಮ್ಮ ಅಕ್ಕನವರಿಗೇ ಕೊಟ್ಟಿದ್ದಾರ. ಆದರೆ ಅವರು ಬರೆದ ಹಾಗೆ ಟ್ರಿಬ್ಯುನಲ್‌ಗೆ ಕಾಗದ ಕೊಟ್ಟಿದ್ದಾರೆ. ಇದರ ಬಗ್ಗೆ ಬೇಕಾದರೆ ಪರಿಶೀಲನೆ ಮಾಡಬಹುದು. ಅವರು ಎಷ್ಟು ವರ್ಷದಿಂದ ಬರೆಯುವುದಕ್ಕೆ ಶಕ್ತಿ ಇಲ್ಲ ಎಂಬುದನ್ನು ಪರಿಶೀಲನೆ ಮಾಡಬಹುದು. ಇಂತಹ ಸಂದರ್ಭಗಳಿವೆ. ಇದರ ಬಗ್ಗೆ ವಿಚಾರಿಸಿ. ಲೋಯರ್ ಕೋರ್ಟಿನಲ್ಲಿ 5 ವರ್ಷದ ಕೆಳಗೆ ಒಂದು ಡಿಸಿಷನ್ ಕೊಟ್ಟಾಗ ಒಬ್ಬರು ನಾನು ಟೆನೆಂಟಲ್ಲ ಎಂದು ಅರ್ಜಿ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಲ್ಯಾಂಡ್‌ರಿಫಾರ್ಮ್ಸ್‌ನಲ್ಲಿ ತಡ ಮಾಡಿದಷ್ಟೂ ತೊಡಕುಗಳು ಜಾಸ್ತಿಯಾಗುತ್ತವೆ. ನ್ಯಾಯವಾಗಿ ಯಾವ ತೀರ್ಮಾನಗಳನ್ನು ತೆಗೆದುಕೊಡಬೇಕೋ ಅದನ್ನು ಅದಷ್ಟುಬೇಗ ತೆಗೆದುಕೊಳ್ಳುವುದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ರೆವಿನ್ಯೂ ಇಲಾಖೆ ಸಚಿವರು ತಂದಿರುವ ಭೂಸುಧಾರಣಾ ತಿದ್ದುಪಡಿಯನ್ನು ನಾನು ಸ್ವಾಗತಿಸಿ ಇದರ ಬಗ್ಗೆ ನನ್ನ ಒಂದೆರಡುಸೂಚನೆಗಳನ್ನು ಕೊಡಲಿಚ್ಛಿಪಡುತ್ತೇನೆ ಇದುವರೆಗೆ ಮಾನ್ಯಸದಸ್ಯರು ಹೇಳಿದಹಾಗೆ ಟ್ರಿಬ್ಯುನಲ್‌ಗಳಿಗೆ ಕೆಲವೊಂದು ಅಧಿಕಾರಗಳನ್ನು ಕೊಟ್ಟಿರುವುದರಿಂದ ನಮ್ಮಕಾರ್ಯದಲ್ಲಿ ಏನು ಸಫಲರಾಗಿದ್ದೇವೆಏನು ಮುಂದುವರೆದಿದ್ದೇವೆ ಎಂಬುದನ್ನು ನೋಡಿದಾಗ ಏನೂ ಆಗಿಲ್ಲ, ಇನ್ನೂ ಸಾಕಷ್ಟು ಕೆಲಸಗಳು ಹಾಗೆಯೇ ಉಳಿದಿವೆ. ಈಗ ಟ್ರಿಬ್ಯುನಲ್‌ನಲ್ಲಿ ಫಾರಂ ನಂ 7 ಅರ್ಜಿಗಳನ್ನೂ ಪರಿಶೀಲನೆ ಮಾಡಬೇಕು ಮತ್ತು ಸಿವಿಲ್ ಕೋರ್ಟಿನಲ್ಲಿ ನಡೆದಂಥ ಕೇಸುಗಳಲ್ಲಿ ಟೆನೆಂಟ್ ಎಂದು ಶಬ್ದ ಬಂದರೆ ಅದನ್ನೂ ಟ್ರಿಬ್ಯುನಲ್‌ಗೆ ವರ್ಗಮಾಡಿ ಇತ್ಯರ್ಥ ಮಾಡಬೇಕು ಎಂದು ಹೇಳಿದೆ, ತಿದ್ದುಪಡಿ ಪ್ರಕಾರ ಇಂಥ ಕೇಸ್‌ಗಳನ್ನೂ ಕೂಡ ಪರಿಶೀಲನೆ ಮಾಡಬೇಕಾಗುತ್ತದೆ. ಎಲ್ಲಾ ಡಿಕ್ಲರೇಷನ್‌ಗಳನ್ನೂ ಪರಿಶೀಲನೆ ಮಾಡತಕ್ಕಂಥ, ವಿಚಾರಣೆ ಮಾಡಿ ಒಂದು ನಿರ್ಣಯಕ್ಕೆ ಬರತಕ್ಕ ಅಧಿಕಾರವನ್ನು ತಾವು ಈ ಒಂದು ಟ್ರಿಬ್ಯುನಲ್‌ಗೆ ಕೊಟ್ಟಿದ್ದೀರಿ, ಇದು ಸಂತೋಷದ ವಿಚಾರ, ಆದರೆ ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ ಒಬ್ಬ ಅಸಿಸ್ಟೆಂಟ್ ಕಮಿಷನರ್ 4-5 ತಾಲ್ಲೂಕುಗಳಲ್ಲಿ ಛೇರ್ಮನ್ನಾಗಿ ಇಂಥ ಮಹತ್ವದಾದ ಒಂದು ಕಾಯಿದೆಯನ್ನು ಅನುಷ್ಠಾನಕ್ಕೆ ತರುವುದು ಕಷ್ಟವಾಗುತ್ತದೆ. ಕೆಲಸ ತ್ವರಿತಗತಿಯಿಂದ ಆಗುವುದಿಲ್ಲ ಎಂದು ಇವತ್ತು ಹೇಳಬಹುದು, ಒಬ್ಬ ತಹಸೀಲ್ದಾರ ನೂರಾರು, ಸಾವಿರಾರು ಡಿಕ್ಲರೇಷನ್‌ಗಳನ್ನು, ಸಾವಿರಾರು ಅರ್ಜಿಗಳನ್ನು ಮೊದಲು ಪರಿಶೀಲನೆಮಾಡಿ ಟ್ರಿಬ್ಯುನಲ್ ಮುಂದೆ ತರುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಸಚಿವರಲ್ಲಿ ನನ್ನ ಒಂದು ಸೂಚನೆ ಏನೆಂದರೆ ಕನಿಷ್ಠಪಕ್ಷ ಇನ್ನೊಬ್ಬ ಅಡಿಷನಲ್ ತಹಸೀಲ್ದಾರ್ ಎಂದು ಹಾಕಿ ಎಲ್ಲಾ ಡಿಕ್ಲರೇಷನ್‌ಗಳನ್ನು, ಅರ್ಜಿಗಳನ್ನು ಪರಿಶೀಲನೆ ಮಾಡುವ ಕೆಲಸವನ್ನು ಅವರಿಗೆ ಒಪ್ಪಿಸಬೇಕು, ತಾಲ್ಲೂಕು ಆಫೀಸಿನಲ್ಲಿ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ನಾಲ್ಕು ಜನಕ್ಕೆ ಅಡಿಷನಲ್ ವರ್ಕ್ ಎಂದು ಈ ಕೆಲಸವನ್ನು ಒಪ್ಪಿಸಬೇಕು,

ಅಂದರೆ ಎಲ್ಲಾ ಡಿಕ್ಲರೇಷನ್ಸ್ ಕೂಡ ಸರಿಯಾಗಿ ಮತ್ತು ತೀವ್ರವಾಗಿ ಟ್ರಿಬ್ಯುನಲ್ ಮುಂದೆ ಬಂದು, ಎಲ್ಲಾ ಕೆಲಸ ಕಾರ್ಯಗಳನ್ನೂ ಕೂಡ ಅತಿ ತೀವ್ರವಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲವಾದರ ಈ ಒಂದು ತಿದ್ದುಪಡಿಯಲ್ಲಿರತಕ್ಕಂಥ ಅಂಶವೇನಿದೆ, ಆದರಲ್ಲಿ ಅರ್ಥವೇನಿದೆ, ತಹಶೀಲ್ದಾರರು ಮಾಡತಕ್ಕಂಥ ಒಂದು ಕಾರ್ಯ, ಒಂದು ತಿಂಗಳಿನಲ್ಲಿ ಆಗತಕ್ಕಂಥದ್ದು ಒಂದು ವರ್ಷಗಳ ಕಾಲವಾದರೂ ಟ್ರಿಬ್ಯುನಲ್ಲಿನಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಈ ಕಾರಣದಿಂದ ಈ ಒಂದು ತಿದ್ದುಪಡಿಯ ಉದ್ದೇಶದಂತೆ ಅತಿ ಶೀಘ್ರವಾಗಿ, ತ್ವರಿತವಾಗಿ ಮಾಡಬೇಕಾದರೆ ಅದಕ್ಕೆ ಫುಲ್ ಸ್ಟಾಫನ್ನು ಮತ್ತು ಅಡಿಷನಲ್ ಹ್ಯಾಂಡ್ಸ್ ಇವೆಲ್ಲವನ್ನೂ ಕೊಡಬೇಕೆಂದು ಹೇಳಿ ಈ ಒಂದು ತಿದ್ದುಪಡಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಾಪುಗೌಡ (ಶಹಾಪುರ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಕಂದಾಯ ಮಂತ್ರಿಗಳು ಭೂ ಸುಧಾರಣಾ ಕಾಯಿದೆಗೆ ತಂದಿರತಕ್ಕಂಥ ತಿದ್ದುಪಡಿಗೆ ನಾನು ಸ್ವಾಗತವನ್ನು ಬಯಸುತ್ತೇನೆ. ಈಗಾಗಲೇ ಅನೇಕ ಮಿತ್ರರು ಹೇಳಿದ ಪ್ರಕಾರ ಹೆಚ್ಚುವರಿ ಭೂಮಿಯನ್ನು ಕೊಡತಕ್ಕಂಥ ಅಧಿಕಾರ ಅದು ತಹಶೀಲ್ದಾರರಿಗೆ ವಹಿಸಿಕೊಟ್ಟಿದ್ದೀರಿ. ಆ ಅಧಿಕಾರವನ್ನು ಇಷ್ಟು ದಿವಸ ಭೂ ಮಂಡಲಿಗೆ ಕೊಟ್ಟಂಥ ಒಂದು ತಿದ್ದುಪಡಿ ಏನಿದೆ ಅದು ಸ್ವಾಗತಾರ್ಹವಾದ ತಿದ್ದುಪಡಿ ಆಗಿದೆ. ಈಗಾಗಲೇ ಮಾನ್ಯ ಶ್ರೀ ಬಂಗಾರಪ್ಪನವರು ಹೇಳಿದ ಪ್ರಕಾರ ತಹಶೀಲ್ದಾರರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಹೆಚ್ಚುವರಿ ಭೂಮಿ ಇದ್ದಂಥದ್ದನ್ನು ಪರಿಶೀಲನೆ ಮಾಡಿ ಅವರಿಗೆ ಸರ್ಟಿಫಿಕೇಟ್ ಕೊಡತಕ್ಕಂಥ ಅಧಿಕಾರವನ್ನು ವಹಿಸಿಕೊಟ್ಟಿದ್ದೀರಿ. ಈಗಾಗಲೇ ಈ ಕಾರ್ಯ ಅನೇಕ ತಾಲ್ಲೂಕ್‌ಗಳಲ್ಲಿ ಪ್ರಾರಂಭವಾಗಿದೆ. ನನ್ನ ಕ್ಷೇತ್ರದಲ್ಲಿ ಈ ಸರ್ಟಿಫಿಕೇಟ್ ಕೊಡತಕ್ಕಂಥ ಕಾರ್ಯ ಸುಮಾರು ೧೫ ದಿವಸಗಳಿಂದ ಭರ್ಜರಿಯಾಗಿ ನಡೆಯುತ್ತಿದೆ. ಇದರ ಬಗ್ಗೆ ಹೆಚ್ಚಿಗೆ ತಿಳಿದಂಥ ಜನ ಯಾರು ಇದ್ದಾರೆ, ವಕೀಲರು ಮತ್ತು ಟ್ರಿಬ್ಯೂನಲ್‌ನಲ್ಲಿ ಇರತಕ್ಕಂಥ ಸದಸ್ಯರು ಯಾರಿದ್ದಾರೆ ಅವರು ಈಗಾಗಲೇ ಸುಮಾರು ೫ ನೂರು ಸರ್ಟಿಫಿಕೇಟ್‌ಗಳನ್ನು ಶಹಾಪುರ ತಾಲ್ಲೂಕಿನಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಈಗ ಇಂಥ ಒಂದು ತಿದ್ದುಪಡಿಯನ್ನು ತಂದಿದ್ದೀರಿ, ಹಿಂದೆ ಕೊಟ್ಟಂಥ ಸರ್ಟಿಫಿಕೇಟ್‌ಗಳನ್ನು ವೆರಿಫಿಕೇಷನ್ ಮಾಡತಕ್ಕಂಥದ್ದು ಮತ್ತು ಅದನ್ನು ರದ್ದು ಮಾಡತಕ್ಕಂಥದ್ದು ಇದು ಕೂಡ ಟ್ರಿಬ್ಯೂನಲ್‌ಗೆ ಕೊಟ್ಟರೆ ಆಗ ಈ ಒಂದು ತಿದ್ದುಪಡಿಯಿಂದ ಸೂಕ್ತವಾದ ಕಾರ್ಯವನ್ನು ಮಾಡಿದಂತಾಗುತ್ತದೆ, ಆಗ ಸೂಕ್ತವಾದ ಕೆಲಸವನ್ನು ಮಾಡಿದಂತಾಗುತ್ತದೆಂದು ಮಾನ್ಯ ಮಂತ್ರಿಗಳಲ್ಲಿ ಹೇಳಬಯಸುತ್ತೇನೆ. ಇದಾದ ನಂತರ ಇಲ್ಲಿಯವರೆಗೆ ಭೂ ಮಂಡಲಿಯಲ್ಲಿ ಇದ್ದಂಥ

ಸದಸ್ಯರು ಯಾವ ರೀತಿಯಾಗಿ ತಮ್ಮ ಕಾರ್ಯಕಲಾಪಗಳನ್ನು ಮಾಡಿದ್ದಾರೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಮನವರಿಕೆ ಯಾಗಬೇಕು ಇವತ್ತಿನ ದಿವಸ ಪಕ್ಷದ ದೃಷ್ಟಿಯಿಂದ ಮಾತನಾಡ ಬೇಕೆಂದು ಅಲ್ಲ. ಭೂ ಮಂಡಲಿಯಲ್ಲಿರತಕ್ಕಂಥ ಸದಸ್ಯರುಗಳು ಯಾವ ರೀತಿಯಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ, ತಮ್ಮ ಸ್ವಂತಲಾಭ ಮಾಡಿಕೊಳ್ಳತಕ್ಕಂಥವರ ಬಗ್ಗೆ ಯಾವ ರೀತಿ ಪ್ರಯತ್ನ ಮಾಡಿದ್ದಾರೆ ಎನ್ನುವ ಬಗ್ಗೆ ಕೆಲವು ವಿಷಯಗಳನ್ನು ಹೇಳಿದರೆ ಶ್ರೀಮಾನ್ ಹುಚ್ಚಮಾಸ್ತಿಗೌಡರವರು, ಬಾಪೂಗೌಡ ರವರು ಪಕ್ಷದ ಸದಸ್ಯರ ಮೇಲೆ ಏನಾದರು ಕೂಡ ಅಪಾದನೆ ಹೊರಿಸತಕ್ಕದವರ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಬಹುದು. ನಿಮಗೆ ಹೇಳಬೇಕೆಂದರೆ, ಎಷ್ಟೋ ಸದಸ್ಯರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಗೇಣಿದಾರರು ಇದ್ದಂಥ ಜನರನ್ನು ಹೆದರಿಸಿ ಗೇಣಿಗಳನ್ನು ಬಿಡಿಸಿ, ಟ್ರಿಬ್ಯೂನಲ್ ಮುಂದೆ ಬೇರೆ ಒಂದು ಹೇಳಿಕೆ ಕೊಡತಕ್ಕಂಥ ಪ್ರಸಂಗಗಳು ನಮ್ಮಲ್ಲಿ ಸಾಕಷ್ಟು ಬಂದಿದೆ. ಇಂಥ ಮಾತು ಗಳನ್ನು ಹೇಳುವಾಗ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ, ತಿಳಿದು ಈ ಮಾತನ್ನು ಹೇಳುತ್ತಿದ್ದೇನೆ. ಈಗಾಗಲೇ ಹೇಳಿದ ಹಾಗೆ ತಮ್ಮ ಪಕ್ಷದವರೇ ಆದ ಗುಲ್ಬರ್ಗ ಕ್ಷೇತ್ರದ ಅಧ್ಯಕ್ಷರು, ಮಹಾ ವ್ಯಕ್ತಿಗಳು ಅವರು ಸುಮಾರು ೨೫ ಸರ್ಟಿಫಿಕೇಟ್‌ಗಳನ್ನು ಈಗಾಗಲೇ ಇಶ್ಯು ಮಾಡಿಸಿದ್ದಾರೆ. ಅವರ ಹೆಸರನ್ನು ಹೇಳುವುದಿಲ್ಲ. ಇದೇ ರೀತಿ ನಿಮ್ಮ ಅಧ್ಯಕ್ಷರು ಇದ್ದಾರೆ, ಅವರ ಬಗ್ಗೆ ನಾವು ಏನಾದರೂ ಹೇಳಿದರೆ ಬಾಪುಗೌಡರವರು ಏನಾದರೂ ರಾಜಕೀಯ ವೈಶಮ್ಯದಿಂದ ಮಾತನಾಡುತ್ತಿದ್ದಾರೆ ಎನ್ನತಕ್ಕಂಥ ಆಪಾದನೆ ಮಾಡುತ್ತೀರಿ. ಈ ಮಾತನ್ನು ತಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ ಮೊನ್ನೆ ದಿವಸ ಶಹಾಪುರ ತಾಲ್ಲೂಕಿನಲ್ಲಿ ಒಂದು ಕೇಸ್‌ಗೆ ಸಂಬಂಧಪಟ್ಟ ಹಾಗೆ ಸೂಕ್ತ ಕ್ರಮವನ್ನು ಅಧಿಕಾರಿಗಳು ತೆಗೆದುಕೊಂಡಾಗ ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟಿದ್ದೀರಿ. ನಾನು ಇವತ್ತು ರಾಜಕೀಯ ದೃಷ್ಟಿಯಿಂದ ಮಾತನಾಡುತ್ತಿಲ್ಲ. ನಿಮ್ಮ ಪಕ್ಷದವರು, ಗುಲ್ಬರ್ಗಾ ಜಿಲ್ಲೆಯಲ್ಲಿ ಮುಖಂಡರಾಗಿರತಕ್ಕವರು, ಟ್ರಿಬ್ಯೂನಲ್ ಸದಸ್ಯರು ಆಗಿರತಕ್ಕಂಥವರು ಯಾರಿದ್ದಾರೆ ಅವರು ಮಾಡಿರತಕ್ಕಂಥ ಕಾರ್ಯವೇನಿದೆ ಅದರ ಬಗ್ಗೆ ಸ್ಪಷ್ಟವಾದ ಉದಾಹರಣೆಯೊಂದನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಾವು ತಮ್ಮ ಅಧಿಕಾರಿಗಳ ಮೂಲಕ ಇಡೀ ರಾಜ್ಯದಲ್ಲಿರತಕ್ಕಂಥ ಟ್ರಿಬ್ಯೂನಲ್‌ಗಳಲ್ಲಿರತಕ್ಕಂಥ ಸದಸ್ಯರುಗಳು ಯಾವ ರೀತಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ನೇರವಾಗಿ, ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ನ್ನು ತರಿಸಿಕೊಳ್ಳಬೇಕು. ಏತಕ್ಕೆಂದು ಹೇಳಿದರೆ ಬಿದರ್ ಜಿಲ್ಲೆಯಲ್ಲಿ ಬಸವಕಲ್ಯಾಣದಲ್ಲಿರತಕ್ಕಂಥ ೪ ಮಂದಿ ಟ್ರಿಬ್ಯೂನಲ್ ಸದಸ್ಯರಿಗೆ ೨೫–೩೫ ಸಾವಿರ ರೂಪಾಯಿಗಳನ್ನು ಕೊಡಬೇಕಾಯಿತು ಎಂದು ಬಸ್‌ನಲ್ಲಿ ಮಾತನಾಡುತ್ತಿದ್ದರು. ಅವರು ಒಂದು ಲಕ್ಷವನ್ನಾದರೂ ಕೊಡುವುದಕ್ಕೆ ತಯಾರಾಗಿದ್ದಾರೆ. ಅವರು ಭೂಮಿಯನ್ನು ತೆಗೆದು ಕೊಂಡು ಸರಿಯಾಗಿ ವಿಸ್ತರಣೆ ಮಾಡಿ ಸಾವಿರಾರು ಬಂಡಿ ಗೊಬ್ಬರವನ್ನು ಹಾಕಿದ್ದಾರೆ, ಭಾವಿ ಹಾಕಿಸಿ ದ್ದಾರೆ, ಅದು ಇವತ್ತು ಅವರ ಕೈಬಿಟ್ಟು ಹೋಗತಕ್ಕಂಥ ಪ್ರಸಂಗ ಬಂದುದರಿಂದ ಅವರು ಎಷ್ಟು ದಂಡವನ್ನಾದರೂ ಖರ್ಚು ಮಾಡುವುದಕ್ಕೆ ತಯಾರಾಗಿದ್ದಾರೆ. ಆ ವ್ಯಕ್ತಿ ಯಾರು ಆ ಟ್ರಿಬ್ಯೂನಲ್‌ನಲ್ಲಿರತಕ್ಕಂಥ ಸದಸ್ಯರು ಯಾರು ಎಂಬುದು ನನಗೆ ಗೊತ್ತಿಲ್ಲ. ನಾನು ಬಸ್‌ನಲ್ಲಿ ಕುಳಿತಂಥ ಕಾಲದಲ್ಲಿ ಕೇಳಿದಂಥ ಮಾತುಗಳು ಇವು.

MR. DEPUTY SPEAKER.—As a responsible member of this House the Honble member could have taken that person into confidence, get the full information and could have written a D.O letter to the Minister who could take action upon the written letter Otherwise it becomes vague and ambiguous and a market talk.

SRI BAPU GOWDA.—I am speaking with all sincerity and responsibility. I charge that these people are not doing justice.

MR. DEPUTY SPEAKER.—The Ho'nble. Member may charge or discharge. But before charging, one should have to be on a secured ground. Simply framing such a charge and go on arguing is no use. I request the Hon'ble Member to write a letter.

SRI BAPU GOWDA.—Through you I am requesting the Minister.

MR. DEPUTY SPEAKER.—If the Hon'ble. Member wants to make an allegation against a third party who is not here to defend, he should give a notice earlier I knew the Hon'ble Member in not mentioning the name, but he is mentioning the designation. Even Earlier, he could have passed on that information to the Minister. I could have appreciated very much if he had passed on that information to investigate the matter.

SRI BAPU GOWDA.—I am expressing my view in the matter. I am telling the Tribunals are not functioning sincerely, honestly and in an unbiased manner. If the Minister has entrusted this work to a person who is in his confidence, he could have given a clear picture and other political aspects. I am making a direct charge against the President who is one of the members of our Tribunal.

MR. DEPUTY SPEAKER.—Has the Hon'ble. Member given earlier a letter in writing about the misconduct of any official or anybody in his view?

SRI BAPU GOWDA.—I am telling this to the Minister who has entrusted this work to the Tribunal.

MR. DEPUTY SPEAKER.—I am speaking of the member of the Tribunal only. Has the Hon'ble Member made an earlier charge about his misconduct to any of the officials or to the Hon'ble. Minister for Revenue?

SRI BAPU GOWDA.—It is up to the Minister to know the functioning of his own colleagues there.

4-30 P.M.

ಒಟ್ಟಿನಲ್ಲಿ ನಾನು ಮಾನ್ಯ ಮಂತ್ರಿಗಳಿಗೆ ಇಷ್ಟೇ ಹೇಳುವುದು, ಈಗಲಾದರೂ ಕೂಡ ಈ ಭೂಮಿಯನ್ನು ಹಂಚುವ ಮಹತ್ತರವಾದ ಹೊರೆಯನ್ನು ಸದಸ್ಯರುಗಳಿಗೆ ಏನು ಕೊಟ್ಟಿದ್ದೀರಿ ಅವರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಾವು ತರಿಸಿಕೊಳ್ಳಬೇಕು. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚು ಜನ ಟೆನೆಂಟ್ಸ್ ಇಲ್ಲ. ಆದರೂ ಅಲ್ಲಿ ಭೂಮಿಯನ್ನು ಹೆಚ್ಚು ಹೊಂದಿರುವ ಭೂಮಾಲೀಕರು ಇದ್ದಾರೆ. ಇವರೂ ಸಹ ಇವತ್ತು ತಮಗೆ ಇದ್ದಂಥ ಭೂಮಿಯನ್ನು ತಮ್ಮ ತಮ್ಮವರಲ್ಲಿಯೇ ಹಂಚಿಕೊಂಡು ಸಣ್ಣ ರೈತರಾಗಿದ್ದಾರೆ. ತಮ್ಮ ಕಾಯಿದೆ ೧೯೭೪ರಲ್ಲಿ ಬಂದನಂತರ ಅದಕ್ಕೆ ಅನುಗುಣವಾಗಿ ಭೂಮಿಯನ್ನು ಹಂಚಿಕೊಂಡಿದ್ದಾರೆ. ಈ ದೃಷ್ಟಿಯಿಂದ ನೋಡಬೇಕಾದರೆ ಹೈದರಾಬಾದ್ ಕರ್ನಾಟಕದಲ್ಲಿ ಲ್ಯಾಂಡ್ ಸೀಲಿಂಗ್‌ಗೆ ಕಡಿಮೆ ಇದ್ದಂಥವರು ಟಿನೆಂಟ್‌ಗಳನ್ನು ಇಟ್ಟುಕೊಂಡು ವ್ಯವಸಾಯ ಮಾಡಿಸುತ್ತಿದ್ದುದರಿಂದ ಇವರು ಅಂಥವರಿಗೆ ಕುತ್ತು ಬಂದಿದೆ. ಹಳೆಯ ಮೈಸೂರು ಮತ್ತು ಸೌತ್ ಕೆನರಾ ಭಾಗದಲ್ಲಿ ಇಂಥ ಒಂದು ಪರಿಸ್ಥಿತಿ ಇಲ್ಲ. ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಯನ್ನೂ, ಹಳೆಯ ಮೈಸೂರು ಭಾಗದ ಪರಿಸ್ಥಿತಿಯನ್ನು ತಾವು ವಿಚಾರ ಮಾಡಿದ ಹಾಗೆ ಕಾಣುವುದಿಲ್ಲ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ನಾನು ಈ ಸಂದರ್ಭದಲ್ಲಿ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮಲ್ಲಿ ಎರಡು ಎಕರೆ ಭೂಮಿಯನ್ನು ಇಟ್ಟುಕೊಂಡಂಥ ರೈತ, ಟೆನೆಂಟ್ಸ್ ಇಟ್ಟುಕೊಂಡು ಕೆಲಸ ಮಾಡಿದ್ದರಿಂದ ಅವನಿಗೆ ತೊಂದರೆ ಬಂದಿದೆ. ಆದರೆ ಕೆಲವರು ೬೦ ಎಕರೆ ಭೂಮಿಯನ್ನು ಇಟ್ಟುಕೊಂಡಿರುವವರು ತಮ್ಮ ಎಲ್ಲಾ ಜಮೀನನ್ನು ತಮ್ಮ ಮಕ್ಕಳ ಹೆಸರಿಗೆ ಹಂಚಿಕೆ ಮಾಡಿಕೊಂಡಿದ್ದಾರೆ. ಇಂಥ ಒಂದು ಸನ್ನಿವೇಶ ಹೈದರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿದೆ. ದೊಡ್ಡ ರೈತರಿಗೆ ಪೆಟ್ಟು ಬಿದ್ದಿಲ್ಲ, ಯಾರು ೧೨ ೧೦, ೬ ಎಕರೆ ಭೂಮಿಯನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದಾರೋ ಅಂಥವರಿಗೆ ಪೆಟ್ಟು ಬಿದ್ದಿದೆ. ಕಲ್ಬುರ್ಗಿ,

ಅಫ್ಜಲ್‌ಪುರ್, ಮತ್ತು ರಾಯಚೂರು ಜಿಲ್ಲೆಗಳಲ್ಲಿ ದೊಡ್ಡ ದೊಡ್ಡ ಕುಟುಂಬಗಳು ಹೆಚ್ಚಾಗಿ ಇವೆ. ಇವರೆಲ್ಲರೂ ತಮ್ಮ ಭೂಮಿಯನ್ನು ಸರ್ಕಾರದ ವಶಕ್ಕೆ ಸಿಕ್ಕದಂತೆ ಹಂಚಿಕೊಂಡಿದ್ದಾರೆ. ಕೆಲವರು ಡಿಕ್ಲೇರ್ ಕೂಡ ಮಾಡಿಬಿಟ್ಟಿದ್ದಾರೆ. ಆದ್ದರಿಂದ ಗೇಣಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಹಾಕಿಲ್ಲ. ಒಟ್ಟು ೫೦ ಸಾವಿರ ಅರ್ಜಿಗಳು ಮಾತ್ರ ನಮ್ಮ ಕಡೆಯಿಂದ ಬಂದಿವೆ. ಷಹಪುರ ತಾಲ್ಲೂಕಿನಲ್ಲಿ ಸುಮಾರು ೨೦–೩೦ ಹಳ್ಳಿಗಳಲ್ಲಿ ಕೇವಲ ೧೦೦ ಹಳ್ಳಿಗಳಿಂದ ಬಂದಂಥ ಅರ್ಜಿಗಳನ್ನು ರಿಜೆಕ್ಟ್ ಮಾಡಿದ್ದಾರೆ. ಈಗ ತಾವು ತಂದಂಥ ತಿದ್ದುಪಡಿ ಸೂಕ್ತವಾಗಿದೆ ಮತ್ತು ಸಮಯಕ್ಕೆ ಅನುಗುಣವಾಗಿದೆ. ಮಾನ್ಯ ಸ್ನೇಹಿತರಾದ ಶರಣಪ್ಪನವರು ಹೇಳಿದ ಹಾಗೆ ಈ ಕೆಲಸಕ್ಕೆ ಕೊಟ್ಟಿರತಕ್ಕ ಸಿಬ್ಬಂದಿ ಬಹಳ ಕಡಿಮೆ. ಈಗ ಒಬ್ಬರು ಅಸಿಸ್ಟೆಂಟ್ ಕಮಿಷನರನ್ನು ಮಾತ್ರ ಕೊಟ್ಟಿದ್ದಾರೆ. ಇದು ಸಾಲದು. ಅರ್ಜಿಗಳನ್ನು ವೆರಿಫೈ ಮಾಡುವುದಕ್ಕೆ ಒಬ್ಬ ತಹಸೀಲ್ದಾರರು ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡುವುದಕ್ಕೆ ಒಬ್ಬ ತಹಸೀಲ್ದಾರರು, ಮತ್ತು ರೆಕಾರ್ಡ್ಸ್ ಆಫ್ ರೈಟ್ಸ್ ಅನ್ನು ವೆರಿಫೈ ಮಾಡುವುದಕ್ಕೆ ಒಬ್ಬರು, ಹೀಗೆ ಮೂರು ಜನ ತಹಸೀಲ್ದಾರರನ್ನು ಕೊಟ್ಟರೆ ನಿರ್ದಿಷ್ಟವಾದ ಗುರಿಯನ್ನು ಮುಟ್ಟುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ತಾವು ಈ ತಿದ್ದುಪಡಿಯನ್ನು ಸೂಕ್ತ ಕಾಲದಲ್ಲಿ ತಂದಿದ್ದೀರಿ, ಭೂಮಿಯನ್ನು ಹಂಚತಕ್ಕ ಮಹತ್ತರ ಕಾರ್ಯದ ಹೊಣೆ ತಮ್ಮ ಮೇಲಿದೆ. ಆದ್ದರಿಂದ ನಾನು ಹೇಳಿದಂಥ ಕಂಟಿಕ್ಟ್ಸ್ ಅನ್ನು ತಾವು ವಿಚಾರ ಮಾಡಬೇಕು. ರೈತರಿಗೆ ಭೂಮಿ ಮುಟ್ಟಿ ತಮ್ಮ ಉದ್ದೇಶ ಸಫಲವಾಗಬೇಕಾದರೆ, ಈ ಕೆಲಸದಲ್ಲಿ ದುರ್ವ್ಯವಹಾರ ನಡೆಯಬಾರದು. ಯಾವ ತರಹದ ಭ್ರಷ್ಟಾಚಾರವೂ ನಡೆಯಕೂಡದು. ಈಗಲಾದರೂ ತಾವು ನೇಮಿಸಿರತಕ್ಕ ಟ್ರಿಬ್ಯುನಲ್ ಸದಸ್ಯರು ಯಾವರೀತಿಯಲ್ಲಿ ಕೆಲಸ ಮಾಡುತ್ತಾರೆ, ಅವರ ಹಿನ್ನಲೆ ಏನು ಎನ್ನತಕ್ಕದ್ದನ್ನು ತರಿಸಿಕೊಂಡು, ಸಾಧ್ಯವಾದ ಮಟ್ಟಿಗೂ ಸಹ ಪಕ್ಷಪಾತಕ್ಕೆ ಒಳಗಾಗದ ರೀತಿಯಲ್ಲಿ ಕೆಲಸ ಮಾಡಬೇಕು. ಇದರಲ್ಲಿ ಒಳ್ಳೆಯ ಜನರನ್ನು ತಾವು ಹಾಕಬೇಕು, ಇಂಥ ಒಂದು ಪವಿತ್ರವಾದ ಕೆಲಸವನ್ನು ಮಾಡಬೇಕಾದರೆ, ತಾವು ಒಳ್ಳೆಯ ಸದಸ್ಯರನ್ನೇ ನೇಮಕಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ನಾಲ್ಕು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK —Mr. Deputy Speaker, I rise to support KNR/BMR this Bill but I want to give some suggestions. I have spoken so many time regarding the constitution of the land tribunals. In the land tribunals, you have given chance to Congress pepole and a few opposition members. There are even three Congress M.L.As. in some Tribunals. One Congress M.L.A. is on three tribunals. In Belgaum there is S.A. Patil; you have not given chance to Sri Sayanak and Pawashe who are Opposition members. In Khanapur, you have dropped Mr Vasantha Rao Patil, who was the Chairman of the T.D.B. Because he is a Marathi man you have dropped him and you have given chance to the son-in-law of Sri R. D. Kittur. All these things are done. According to me, Government is thinking that this programme is a Congress party programme. They should not think that this is a Congress party programme. We are also interested in giving land to the tillers. I have visited the land tribunals on the 26th of last month. The scheduled time of this tribunal is 11 to 5-30. Only the Chairman was there and no other member was present at 11-15 A.M. The tribunals are constituted to help people. They must wait up to 8 P.M. They must give adjournment immediately you must give direction to the tribunal that its working should be only up to 5-30 p.m. and not extended up to 8. If a man wants a copy of the decision, they are charging forty rupees. This is a serious matter. You must give this copy within 2 or 3 days.

MR. DEPUTY SPEAKER :—That can be raised in some other way.

In one case, the landlord of Kakati village has got more than 3000 acres of land and he has maintained the records because he is a rich man that he is the owner and the tenant but he has given the land to tenants with the result he is getting rent. There is an inam village Ambewadi where the tenants are not getting justice. I therefore request the Government to do justice to the tenants because this amendment is for the surplus land and the Government must do justice to the poor people.

The notices and judgments are given in Kannada by tribunals in Belgaum taluk. When the Maharashtra-Karnataka border dispute is pending, why did you insist them to give notices and judgements in Kannada only ?. The notices or judgments can be given in both the languages. The people must understand the contents of the judgement, The marathi people cannot understand Kannada. I therefore request that the notices or judgments can be given in both the languages.

With these few words, I thank the Chair and conclude my speech.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸನ್ಮಾನ್ಯ ಉಪಾಧ್ಯಕ್ಷರೇ, ಒಂದು ಸಣ್ಣ ಅಂಶದ ಮೇಲೆ ದೀರ್ಘವಾದ ಚರ್ಚೆ ನಡೆದಿದೆ. ಒಟ್ಟಾರೆ ಗಮನಿಸಿದರೆ, ಭೂ ಸುಧಾರಣೆ ಕಾಯಿದೆ ಮೇಲೆ ಟೀಕೆ ನಡೆದು, ಅದರ ಸಮೀಕ್ಷೆ ನಡೆದ ಹಾಗೆ ಕಾಣುತ್ತದೆ. ಅದಕ್ಕೆಲ್ಲಾ ಉತ್ತರ ಕೊಡುವುದು ಅವಶ್ಯಕವೇ ಅಥವಾ ಅವಶ್ಯಕವಿಲ್ಲವೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಮೂಲತಃ, ಭೂ ಸುಧಾರಣೆ ಕಾಯಿದೆಯನ್ನು ನಮ್ಮ ಪಕ್ಷಕ್ಕೋಸ್ಕರ ತಂದು, ಪಕ್ಷದ ಪ್ರತಿಷ್ಠೆಯನ್ನು ಬೆಳೆಸುವುದಕ್ಕೆ ಹೋಗಿ ಪಕ್ಷದ ಸದಸ್ಯರನ್ನೇ ಭೂ ನ್ಯಾಯ ಮಂಡಲಿಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಿ ಅನೇಕ ತಪ್ಪುಗಳನ್ನು ಮಾಡಿ, ಜನಗಳಿಗೆ ಒಂದು ರೀತಿಯ ಅಹಿತವನ್ನು ಮಾಡಿದ್ದಾರೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಮಂಜುನಾಥ್ ಅವರು ಮಾತನಾಡುತ್ತಾ ತಿಳಿಸಿದರು. ಅದು ಆಗಿರುವುದೇ ಬೇರೆ, ಅದು ಹಾಗಾಗಿಲ್ಲ ಎಂದು ಅವರ ಪಕ್ಷದ ಮುಖಂಡರೂ, ವಿರೋಧ ಪಕ್ಷದ ನಾಯಕರು ಹೇಳುವುದಕ್ಕೆ ಹೊರಟರು. ಭೂ ಸುಧಾರಣೆ ಕಾಯಿದೆಯ ಮೂಲ ಉದ್ದೇಶ ಮತ್ತು ಅದರ ತತ್ವಗಳ ಬಗ್ಗೆ ನಾನು ಇವತ್ತು ಹೇಳುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲೇ ಚರ್ಚೆ ಮಾಡಿ, ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದು ಈಗಾಗಲೇ ಎರಡು ವರ್ಷಗಳ ಮೇಲಾಯಿತು. ಭೂ ಸುಧಾರಣೆ ಕಾನೂನು ಜಾರಿಗೆ ಬಂದಮೇಲೆ, ನಾವು ಮಾಡಿರುವ ಪ್ರಗತಿಯನ್ನು ನಾನು ಈ ಸಭೆಯಲ್ಲಿ ಅನೇಕಸಲ ತಿಳಿಸಿದ್ದೇನೆ. ಭೂ ಸುಧಾರಣೆ ಕಾನೂನು ಕುರಿತು ನಾವು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ, ನಮ್ಮ ಉದ್ದೇಶ ಎಷ್ಟಿತ್ತೋ ಅಷ್ಟು ಸಫಲವಾಗಿ, ಪ್ರಗತಿಯಾಗಿದೆ ಎಂದು ನಾನು ಹೇಳುವುದಕ್ಕೆ ಹಿಂದೆಗೆಯಬೇಕಾಗುತ್ತದೆ. ಇದಕ್ಕೆ ನಾನಾ ಕಾರಣಗಳಿವೆ. ಭೂ ನ್ಯಾಯ ಮಂಡಲಿಗಳಿಗೆ ಅಧಿಕಾರಗಳನ್ನು ಹಾಕಿ ಅದಕ್ಕೆ ಸಿಬ್ಬಂದಿಯನ್ನು ಒದಗಿಸಿ ಮತ್ತು ಸದಸ್ಯರನ್ನು ನೇಮಕ ಮಾಡಿ, ಅದು ಕಾರ್ಯ ಪ್ರಾರಂಭ ಮಾಡುವುದಕ್ಕೇ ಸ್ವಲ್ಪ ತಡವಾಯಿತು. ಆದರೆ, ಭೂ ನ್ಯಾಯ ಮಂಡಲಿಗಳ ಕೆಲಸ ಪ್ರಾರಂಭವಾದ ಮೇಲೆ ಪ್ರಗತಿ ಹೆಚ್ಚಿನ ಮಟ್ಟದಲ್ಲಿ ಕೆಲವುಕಡೆ ಆಗಿದೆ; ಆಗುತ್ತಿದೆ ಸದಸ್ಯರು-ಅವರು ಕಾಂಗ್ರೆಸ್ ಪಕ್ಷದವರಾಗಲೀ ಅಥವಾ ಇನ್ನಾವ ಬೇರೆ ಪಕ್ಷದವರಾಗಲೀ, ಅನೇಕ ಕಡೆಗಳಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಅದಕಾಗಿ, ಆ ಸದಸ್ಯರನ್ನು ನಾನು ತುಂಬಿದ ಹೃದಯದಿಂದ ವಂದಿಸುತ್ತೇನೆ. ಆದರೆ, ಕೆಲವು ಭಾಗಗಳಲ್ಲಿ ತೊಂದರೆಗಳಾಗಿವೆ. ಒಂದು ಕಡೆ, ಒಬ್ಬ ಅಧಿಕಾರಿಯನ್ನು ನೇಮಿಸಿದ ಮೇಲೆ, ಎರಡು-ಮೂರು ತಿಂಗಳಾದರೂ ಕೆಲಸ ನಡೆಯಲಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್. ಟಿ. ಕೃಷ್ಣಪ್ಪನವರು ಹೇಳಿದರು. ಇಂಥಾ

ಸಂದರ್ಭಗಳೂ ಇವೆ. ಒಬ್ಬರಲ್ಲ, ಇಬ್ಬರು ಅಧಿಕಾರಿಗಳನ್ನು ಹಾಕಿದಾಗಲೂ, ಬೇರೆ ಬೇರೆ ಕಾರಣಗಳಿಂದ ಆ ಅಧಿಕಾರಿಗಳು ಅಲ್ಲಿ ಹೋಗಿ ಕೆಲಸ ಪ್ರಾರಂಭಿಸಲಿಲ್ಲ. ಹೀಗೆ ಅವರು ತಡ ಮಾಡಿದ್ದರಿಂದ, ಭೂ ನ್ಯಾಯ ಮಂಡಲಿಗಳ ಕೆಲಸ ಸ್ವಲ್ಪ ನಿಧಾನವಾದ ಸಂದರ್ಭಗಳೂ ಉಂಟು. ಹೀಗಿದ್ದರೂ ಮಾರ್ಚ್ ಆಖೈರಿನೊಳಗೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಪ್ರಕರಣಗಳು ತೀರ್ಮಾನವಾಗಿದೆ. ಭೂ ನ್ಯಾಯಮಂಡಲಿಗಳನ್ನು ನ್ಯಾಯಾಲಯಗಳಿಗೆ ವಹಿಸಿದ ಕಾಲ ಉಂಟು. ಆಗ ಆಗಿರತಕ್ಕ ತೀರ್ಮಾನಗಳಿಗೂ, ಈಗ ಖಾಸಗೀ ಸದಸ್ಯರುಳ್ಳ ಭೂ ನ್ಯಾಯ ಮಂಡಲಿಗಳಲ್ಲಿ ತೆಗೆದುಕೊಂಡಿರುವ ತೀರ್ಮಾನಗಳಿಗೂ ಹೋಲಿಸಿ ನೋಡುವುದಾದರೆ, ನಾವೇನು ನಿರಾಶರಾಗಬೇಕಾದ್ದಿಲ್ಲ; ಭೂ ನ್ಯಾಯ ಮಂಡಲಿಗಳಲ್ಲಿ ಉತ್ತಮವಾಗಿ ಕೆಲಸ ನಡೆದಿದೆ ಎಂದು ಧಾರಾಳವಾಗಿ ಹೇಳಬಹುದು. ಅನೇಕ ಜನ-ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯ ಅವರು ಹೇಳಿದ ಹಾಗೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದರೂ, ಅದನ್ನು ನಡೆಸಿಕೊಂಡು ಹೋಗುವ ಚೈತನ್ಯ ಇಲ್ಲ ಎಂದು ಹೇಳುವ ರೀತಿಯಲ್ಲಿ ಭೂ ನ್ಯಾಯ ಮಂಡಲಿಗಳಲ್ಲಿ ಖಾಸಗೀ ಸದಸ್ಯರನ್ನು ಹಾಕಿದಾಗ ಅನುಮಾನ ವ್ಯಕ್ತಪಡಿಸಿದವರೂ ಇದ್ದಾರೆ. ಆದರೆ, ಭೂ ನ್ಯಾಯ ಮಂಡಲಿಗಳ ಫಲಿತಾಂಶವನ್ನು ನೋಡಿದ ಮೇಲೆ, ನಾವು ನಿರಾಶರಾಗಬೇಕಾದ್ದಿಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೆಲವು ನ್ಯಾಯ ಮಂಡಲಿಗಳ ಮೇಲೆ ದೂರುಗಳು ಬಂದಿರಬಹುದು; ದೂರುಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಅಂಥಾ ದೂರುಗಳನ್ನು ನನ್ನ ಗಮನಕ್ಕೆ ಸ್ಪಷ್ಟವಾಗಿ ತಂದಾಗ ಸಂಭಂದಪಟ್ಟ ಸದಸ್ಯರನ್ನು ಅಲ್ಲಿಂದ ತೆಗೆದು ಹಾಕಿ, ಬೇರೆ ಸದಸ್ಯರನ್ನು ಸದರಿ ನ್ಯಾಯ ಮಂಡಲಿಯಲ್ಲಿ ನೇಮಿಸಿ ಹೊಸದಾಗಿ ರಚನೆ ಮಾಡಿದ್ದೇವೆ. ಯಾರೇ ಆಗಿರಲಿ, ಅವರು ವಿರೋಧ ಪಕ್ಷದವರಾಗಿರಲಿ, ಆಡಳಿತ ಪಕ್ಷದವರಾಗಿರಲಿ ಯಾವ ಪಕ್ಷದವರೇ ಆಗಿರಲಿ, ಆಪಕ್ಷ ಈಪಕ್ಷ ಎನ್ನುವ ದಾಕ್ಷಿಣ್ಯ ತೋರಿಸದೆ ಅಂತಹವರನ್ನು ಭೂನ್ಯಾಯ ಮಂಡಲಿಗಳಿಂದ ಕಿತ್ತುಹಾಕಿದ್ದೇವೆ ಇದೇ ರೀತಿ ಮಾನ್ಯ ಸದಸ್ಯರಿಗೆ ಅನ್ಯಾಯಗಳು ನಡೆಯುತ್ತಿರುವುದೇನಾದರೂ ಗಮನಕ್ಕೆ ಬಂದರೆ, ಅದನ್ನು ದಯಮಾಡಿ ನನ್ನ ಗಮನಕ್ಕೆ ತರಬೇಕೆಂದು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಭೂ ನ್ಯಾಯ ಮಂಡಲಗಳಲ್ಲಿ ಅವರು ಹಣಸಂಪಾದನೆ ಮಾಡುವುದಾಗಲೀ ಭೂನ್ಯಾಯಗಳನ್ನು ತೀರ್ಮಾನ ಮಾಡುವುದರಲ್ಲಿ ಅವರು ಇರುವ ಪರಿಸ್ಥಿತಿಗೆ ವಿರುದ್ಧವಾಗಿ ತೀರ್ಮಾನ ಕೊಡುತ್ತಿದ್ದಾರೆ ಎನ್ನುವುದಾಗಲೀ ನಮಗೆ ತಿಳಿದುಬಂದರೆ ಅವರನ್ನು ಭೂ ನ್ಯಾಯ ಮಂಡಲಿಗಳಿಂದ ತೆಗೆದು ಹಾಕುವುದಕ್ಕೂ ಹಿಂತೆಗೆಯುವುದಿಲ್ಲ ಎನ್ನುವ ಸ್ಪಷ್ಟ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ. ಆದುದರಿಂದ, ಮಾನ್ಯ ಸದಸ್ಯರು ಎಲ್ಲೆಲ್ಲಿ ಅನ್ಯಾಯಗಳು ಆಗುತ್ತಿವೆ ಎನ್ನುವುದು ಅವರಿಗೆ ಗೊತ್ತಾದರೆ, ನಮಗೆ ತಿಳಿಸಬೇಕೆಂದು ಅರಿಕೆ ಮಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ, ಭೂ ನ್ಯಾಯ ಮಂಡಲಿಗಳ ಕಾರ್ಯದ ಬಗ್ಗೆ ಮತ್ತು ಅವುಗಳ ರಚನೆ ಬಗ್ಗೆ ಹಾಗೂ ಅಲ್ಲಿ ನಡೆಯುವ ಕೆಲಸಗಳ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಿದರು. ಭೂ ನ್ಯಾಯ ಮಂಡಲಿಗಳಲ್ಲಿ ಸದಸ್ಯರಾಗಿರುವವರು, ಅವರ ಸಂಬಂಧಿಗಳಿಗೂ ಜಮೀನುಗಳನ್ನು ಕೊಟ್ಟಿದ್ದಾರೆ. ಎನ್ನುವ ಮಾತನ್ನೂ ಹೇಳಿದ್ದಾರೆ. ಆ ಸದಸ್ಯರ ಸಂಬಂಧಿಗಳು ಭೂಮಿ ಇಲ್ಲದ ಬಡವರಾಗಿದ್ದು ಮತ್ತು ಆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಅರ್ಹತೆ ಪಡೆದವರಾಗಿದ್ದರೆ, ಅವರಿಗೆ ಕೊಡಬಾರದು ಎಂದು ಹೇಳುವುದು ಕಷ್ಟ. ಅಷ್ಟೇ ಅಲ್ಲದೇ, ಭೂ ನ್ಯಾಯ ಮಂಡಲಿಗಳಲ್ಲಿ ಒಬ್ಬರೇ ಸದಸ್ಯರಿರುವುದಿಲ್ಲ; ಬೇರೆ ಸದಸ್ಯರೂ ಇರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲರೂ ಅಂತಹವರೆ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಜಾಪ್ರಭುತ್ವ ನಮ್ಮ ಕೈಗೆ ಬಂದುಬಿಟ್ಟಿದೆ; ಆದುದರಿಂದ ಬಹುಮತದವರು ತಪ್ಪು ಮಾಡುತ್ತಿದ್ದಾರೆ ಎಂದು ಪ್ರಜಾಪ್ರಭುತ್ವವೇ ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಶೀರನ್ನಾಳಿ ಚಂದ್ರಶೇಖರ್ ಅವರೂ, ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡುತ್ತಾ, ಇಂಜಂಕ್ಷನ್ ಆರ್ಡರ್ ಕೊಟ್ಟರೆ, ಅದರ ಬಗ್ಗೆ ಪೋಲೀಸ್ ಅಧಿಕಾರಿಗಳು ಲಕ್ಷ್ಯ ಕೊಡಲಿಲ್ಲ; ಮತ್ತು ಅದನ್ನು ಜಾರಿಗೆ ಕೊಡಲಿಕ್ಕೆ ಕಾರ್ಯ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರು, ಅದು ಯಾವುದು ಎಂದು ನಿರ್ದಿಷ್ಟವಾಗಿ ನನಗೆ ತಿಳಿಸಿದರೆ, ನಾನು ಖಂಡಿತವಾಗಿ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ಕೊಡುತ್ತೇನೆ,

ಶ್ರೀ ಕೋಣಂದೂರು ಲಿಂಗಪ್ಪ.— ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಉಪಾಧ್ಯಕ್ಷರ ಮೂಲಕ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಅದನ್ನು ನೋಡುತ್ತೇನೆ.

ನ್ಯಾಯಮಂಡಲಿಗಳು ತೆಗೆದುಕೊಂಡಂತ ತೀರ್ಮಾನವನ್ನು ಪುನರ್‌ಪರಿಶೀಲಿಸಲು ಈ ನ್ಯಾಯ ಮಂಡಲಿಗಳಿಗೇ ಅಧಿಕಾರ ಕೊಡಬೇಕು ಎನ್ನುವ ಬಗ್ಗೆ ಶ್ರೀಮಾನ್ ಚಂದ್ರಶೇಖರ್‌ರವರು ಹಾಗೂ ಒಬ್ಬಿಬ್ಬರು ಸದಸ್ಯರು ಹೇಳಿದರು ಅದು ಸ್ವಲ್ಪ ಕಷ್ಟಕರವಾದ ಕೆಲಸ. ನಮ್ಮ ಉದ್ದೇಶವೇ ಈ ತೀರ್ಮಾನವಾದ ಮೇಲೆ ಮತ್ತೆ ಅಪೀಲು ಕೊಡದು ಎಂದು ಈಗ ಇರತಕ್ಕ ಕಾನೂನು. ವಕೀಲರುಗಳಿಗೆ ಅವಕಾಶ ಕೊಡಕೂಡದು ಎನ್ನುವ ಉದ್ದೇಶದಿಂದಲೇ ಕೋರ್ಟುಗಳ ವ್ಯಾಪ್ತಿಯಿಂದ ತೆಗೆದದ್ದು; ಮೂಲ ಉದ್ದೇಶ ಬೇಗ ತೀರ್ಮಾನವಾಗಬೇಕು ಎನ್ನುವುದೇ; ಕಾರ್ಯಗತವಾಗಬೇಕೆಂಬುದೇ ನಮ್ಮ ದೃಷ್ಟಿ. ಆದರೆ ಮತ್ತೆ ಇವರಿಗೆ ಪುನರ್‌ಪರಿಶೀಲನೆ ಮಾಡತಕ್ಕ ರಿವ್ಯೂ ಮಾಡತಕ್ಕ ಅಧಿಕಾರವನ್ನು ಭೂ ನ್ಯಾಯಮಂಡಲಿಗಳಿಗೆ ಕೊಟ್ಟರೆ ನಿಧಾನವಾಗುವುದಕ್ಕೆ ಕಾರಣವಾಗುತ್ತದೆ. ಮತ್ತೆ ಅನೇಕ ವ್ಯಾಜ್ಯಗಳು ಹುಟ್ಟುತ್ತವೆ; ಈಗಾಗಲೇ ಅನೇಕ ಕೇಸುಗಳು ಅಪೀಲುಗಳಿಗೆ ಮುಂದಕ್ಕೆ ಹೋಗದೇ ನಿಂತಿವೆ. ಈಗ ನಾವು ಮತ್ತೆ ಪುನರ್‌ಪರಿಶೀಲನೆಗೆ ಅವಕಾಶ ಕೊಟ್ಟರೆ ದಿಡ್ಡಿ ಬಾಗಿಲು ತೆಗೆದಂತಾಗುತ್ತದೆ ಎನ್ನುವುದೇ ನನ್ನ ಭಾವನೆ.

ಶ್ರೀ ಕೋಣಂದೂರು ಲಿಂಗಪ್ಪ.— ಭೂ ನ್ಯಾಯಮಂಡಲಿಗಳಿಗೆ ಬಂದಂತ ಅರ್ಜಿಗಳಲ್ಲಿ ಯಾವುದು ಜೆನಿಯನ್ ಇದೆಯೋ ಅಂಥಾದ್ದನ್ನು ಅಕ್ಸೆಪ್ಟ್ ಮಾಡುವುದು ಉಳಿದ್ದನ್ನು ರಿಜೆಕ್ಟ್ ಮಾಡುವುದಕ್ಕೆ ಅವಕಾಶ ಇರಲಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಅಭಿಪ್ರಾಯದಲ್ಲಿ ಅದನ್ನು ಒಪ್ಪಿಕೊಳ್ಳುವುದು ಸ್ವಲ್ಪ ಕಷ್ಟ. ಇನ್ನು ಶ್ರೀಮಾನ್ ಕಕ್ಕಿಲಾಯರವರು ಒಂದು ಮಾತು ಹೇಳಿದರು; ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಈ ಕಾನೂನನ್ನು ಜಾರಿಗೆ ಕೊಡುವುದರಲ್ಲಿ ಸಾಕಾದಷ್ಟು ಆಸಕ್ತಿ ಇಲ್ಲದೇ ಇರುವುದಕ್ಕೆ ಈ ವಿಷಯದಲ್ಲಿ ವಿಶ್ವಾಸ ಇಲ್ಲದೇ ಇರತಕ್ಕದ್ದೇ ಕಾರಣ ಎಂದು ಹೇಳಿದರು; ಅದು ನಿಜ. ನಮ್ಮ ಸದಸ್ಯರೇ ಅಂದರೆ 100ಕ್ಕೆ 100 ಭಾಗ ವಿಶ್ವಾಸ ಅವರ ಮಾತಿನಲ್ಲೇ ಹೇಳುವುದಾದರೆ "ಸಮರ್ಪಣ ಭಾವ" ಸದಸ್ಯರಿಗೆ ಇಲ್ಲ ಎನ್ನುವುದು ಗೊತ್ತಿದೆ; ಅಂದಮೇಲೆ ಸಿಬ್ಬಂದಿಗೆ ಇರುತ್ತದೆ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಯಾವುದೇ ಆಡಳಿತದಲ್ಲಿ ಕೆಲಸ ಮಾಡತಕ್ಕ ಸಣ್ಣವರಿಂದ ಹಿಡಿದು ದೊಡ್ಡ ಅಧಿಕಾರಿಗಳು ರಾಜಕೀಯ ಪಕ್ಷದ ಮತ್ತು ಅದರ ಕಾರ್ಯಕ್ರಮದ ಸಿದ್ಧಾಂತ ಏನು ಇದೆ ಅದಕ್ಕೆಲ್ಲಾ 100ಕ್ಕೆ 100 ಭಾಗ ಒಪ್ಪತಕ್ಕಂಥ ಅಧಿಕಾರ ವರ್ಗ ಇದೆ ಅಂದರೆ ಸುಲಭದಲ್ಲಿ ಒಪ್ಪುವ ಮಾತಲ್ಲ. ಇಂಥ ಅಧಿಕಾರಿಗಳ ಗುಂಪು ಇಲ್ಲದೇ ಇರತಕ್ಕಂಥದ್ದು ಪ್ರಪಂಚದಲ್ಲಿ ಇಲ್ಲ, ಇದರಿಂದ ಅನೇಕ ಅನಾಹುತಗಳು ನಡೆದಿವೆ. ಅವರಿಗೆ ವಿಶ್ವಾಸ ಹುಟ್ಟಬೇಕಾದರೆ, ಎಲ್ಲಿ ಅವರು ತಪ್ಪುದಾರಿಗೆ ಹೋಗುತ್ತಾರೆ ಅಲ್ಲಿ ಶಿಕ್ಷೆ ಆಗತಕ್ಕ ಭಯ ಇರಬೇಕು. ಅವರಿಗೆ ಸಮರ್ಪಣ ಭಾವ ಕಲಿಸುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಎಲ್ಲಿ ಅಧಿಕಾರಿಗಳು ವ್ಯತ್ಯಾಸ ಮಾಡುತ್ತಾರೆ, ಅದನ್ನು ಸರಿಪಡಿಸುವುದಕ್ಕೆ ನಮ್ಮ ಮೇಲಿನ ಅಧಿಕಾರಿಗಳು ಇಗಿಂದಾಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಪ್ರಯತ್ನ ಮಾಡುತ್ತಿದ್ದಾರೆ. ಉದಾಹರಣೆಗೆ ಗ್ರಾಮ ಲೆಕ್ಕಿಗರ ವಿಷಯವನ್ನೇ ತೆಗೆದುಕೊಳ್ಳಿ, ಪ್ರತಿಯೊಂದು ಜಿಲ್ಲೆಯಲ್ಲಿ 50–100 ಜನರನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿದ್ದೇವೆ, ಅವರ ಮೇಲೆ ಸಾಕಾದಷ್ಟು ಕ್ರಮ ತೆಗೆದುಕೊಂಡಿದ್ದೇವೆ, ಬೇಕಾದರೆ ತಮಗೆ ಅಂಕಿ ಅಂಶಗಳನ್ನು ಮುಂದಿನ ಸಲ ಒದಗಿಸುತ್ತೇನೆ. ಹೊಸಬರು ಬಂದರೂ ಕೂಡ ಮತ್ತೆ ಅದೇ ಜಾಡನ್ನು ಮುಂದುವರಿಸುತ್ತಿದ್ದಾರೆ. ಅವರಿಗೇ ಹಣ ಸಿಕ್ಕಿದರೆ ಸಾಕು, ಎಷ್ಟು ಶಿಕ್ಷೆ ಮಾಡಿದರೆ ಏನು ಆಯಿತು? ಜಿಲ್ಲಾಧಿಕಾರಿಗಳು ಉಗ್ರವಾಗಿ ಹಾಗೂ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಹಾಗಿದ್ದರೂ ಕೂಡ ಮತ್ತೆ ಪಹಣಿಯಲ್ಲ ತಪ್ಪು ಬರೆಯುತ್ತಿದ್ದಾರೆ. ಅದಕ್ಕೋಸ್ಕರವಾಗಿಯೇ ನಾನು ಪಹಣಿ ಬರೆಯುವ ವಿಧಾನವನ್ನೇ ಬದಲಾವಣೆ ಮಾಡಬೇಕೆಂದು ಈಗಾಗಲೇ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ನನ್ನ ಯೋಚನೆ ಅಂದರೆ, ಪಹಣಿ ಬರೆಯುವುದನ್ನು ಸಂಬಂಧಪಟ್ಟ ಜಮೀನ್ದಾರನಿಗೆ ಒಂದು ಕಾಫಿ. ತಾಲ್ಲೂಕು ಆಫೀಸಿಗೆ ಒಂದು ಕಾಫಿ ಹಾಗೂ ತನ್ನ ಹತ್ತಿರ ಒಂದು ನಕಲು ಇಟ್ಟುಕೊಳ್ಳುವುದು. ಈ ವಿಚಾರವನ್ನು ಈಗಾಗಲೇ ಮೇಲಿನ

ಅಧಿಕಾರಿಗಳಿಗೆ ತಿಳಿಸಿದ್ದೇನೆ, ಈ ರೀತಿ ಮಾಡಬೇಕಾದುದು ಅವಶ್ಯಕ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ, ಒಟ್ಟಿನಲ್ಲಿ ತಪ್ಪನ್ನು ಕಡಿಮೆ ಮಾಡುವುದಕ್ಕೆ ಆಲೋಚನೆ ಮಾಡಿದ್ದೇನೆ, ಅವರ ಪೂರ್ಣ ವಿವರ ಬೇಕಾಗಿಲ್ಲ ಇನ್ನೂ ಶ್ರೀಮಾನ್ ದೊಡ್ಡತಿಮ್ಮಯ್ಯನವರು ಒಂದು ಸಲಹೆ ಮಾಡಿದರು, ಹೈಕೋರ್ಟಿನಿಂದ ತೀರ್ಮಾನ ಮಾಡಿದ ಮೇಲೆ ಅನೇಕ ಸ್ಟೇ ಆರ್ಡರ್‌ಗಳು ಬರುತ್ತಿವೆ ಎಂದು. ಈಗ ನಮ್ಮಲ್ಲಿರತಕ್ಕ ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯಾಂಗದ ಶಾಸನಕ್ಕೆ ವಿರೋಧವಾಗಿ ಕೊಟ್ಟಂತ ಸ್ಟೇ ಆರ್ಡರ್‌ಗಳನ್ನು ೧೦೦ಕ್ಕೆ ೯೦ ಭಾಗ ವಿಲೇ ಮಾಡಿದ್ದಾರೆ ಕೆಲವು ವ್ಯಕ್ತಿಗತವಾದ ಪ್ರಶ್ನೆಗಳಿಗೆ ಸ್ಟೇ ಆರ್ಡರ್ ಕೊಟ್ಟಿದ್ದನ್ನು ಕೂಡ ಬೇಗ ಬೇಗ ತೀರ್ಮಾನ ಮಾಡಿದ್ದಾರೆ. ಅಡ್ವೊಕೇಟ್ ಜನರಲ್ ಹಾಗೂ ಸಿಬ್ಬಂದಿವರ್ಗ ಈ ದಿಸೆಯಲ್ಲಿ ಹೈಕೋರ್ಟಿನ ಅಡಚಣೆ ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಅದು ನಮಗೆ ಅಡ್ಡಿ ಆಗಲಾರದು ಎನ್ನುವ ವಿಶ್ವಾಸ ನನಗೆ ಇದೆ. ಮತ್ತೆ ಪ್ರತಿಯೊಂದು ತಾಲೂಕಿನಲ್ಲಿ ಒಬ್ಬೊಬ್ಬ ಅಸಿಸ್ಟೆಂಟ್ ಕಮೀಷನರನ್ನು ಈ ಕೆಲಸಕ್ಕಾಗಿಯೇ ಪ್ರತ್ಯೇಕವಾಗಿ ಹಾಕಬೇಕು, ಇನ್ನೂ ಹೆಚ್ಚು ಸಿಬ್ಬಂದಿ ಕೊಡಬೇಕು ಎನ್ನುವುದನ್ನು ಕೆಲವು ಸದಸ್ಯರು ತಿಳಿಸಿದ್ದಾರೆ ಹೆಚ್ಚು ವ್ಯಾಜ್ಯಗಳು ಇರತಕ್ಕ ಕಡೆಗೆ ೧೨ ಟ್ರಿಬ್ಯೂನಲ್‌ಗಳನ್ನು ಕೂಡಲೇ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ನಾಲ್ಕು ಟ್ರಿಬ್ಯೂನಲ್‌ಗಳು ಸಾಕು ಎಂದು ಯೋಚನೆ ಮಾಡಿದ್ದೆವು, ಆದರೆ ೧೦ ಸಾವಿರಕ್ಕಿಂತ ಮೇಲ್ಪಟ್ಟು ಕೇಸುಗಳು ಅಂದರೆ ೧೦೦-೨೦೦ ಹೆಚ್ಚು ಕಡಿಮೆ ಇರಬಹುದು ಅಂತಹ ಕಡೆಗೆ ಅಡಿಷನಲ್ ಟ್ರಿಬ್ಯೂನಲ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇನ್ನು ಒಂದು ವಾರದೊಳಗೆ ಅವುಗಳನ್ನು ರಚನೆ ಮಾಡುತ್ತೇವೆ, ಅಲ್ಲಿಗೆ ಸಿಬ್ಬಂದಿ ಕೂಡ ಕೊಡುತ್ತೇವೆ. ಇದರ ಜೊತೆಗೆ ಟೈಪ್‌ರೈಟರ್ ಹಾಗೂ ಟೈಪಿಸ್ಟ್‌ಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಕನ್ನಡ ಟೈಪಿಸ್ಟ್ ಸಿಗದೇ ನಿಧಾನವಾಗಿದೆ. ನಾನು ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಗೆ ಹೋದಾಗ ಬೇಕಾದಷ್ಟು ಜನ ಕನ್ನಡ ಟೈಪಿಸ್ಟ್ ಸಿಗುತ್ತಾರೆಂದು ಗೊತ್ತಾಯಿತು, ಈ ಬಗ್ಗೆ ಡೆಪ್ಯೂಟಿ ಕಮೀಷನರ ರವರಿಗೆ ಅಧಿಕಾರ ಕೊಟ್ಟು ಅವರನ್ನು ನೇಮಿಸಿಕೊಳ್ಳುವುದಕ್ಕೆ ಏರ್ಪಾಟು ಮಾಡುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಟೈಪಿಸ್ಟ್‌ಗಳ ಅಭಾವ ಅಲ್ಲ, ಟೈಪ್‌ರೈಟರ್‌ಗಳ ಅಭಾವ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಟೈಪ್‌ರೈಟರ್‌ಗಳು ಬಂದಿವೆ ಅಧಿಕಾರಿಗಳಿಗೂ ಒದಗಿಸಿ ಕೊಟ್ಟಿದ್ದೇವೆ. ನನಗೆ ತಿಳಿದ ಮಟ್ಟಿಗೆ ಟೈಪಿಸ್ಟ್‌ಗಳ ಅಭಾವ ಇಲ್ಲ ಎಂದು ಗೊತ್ತಾಗಿದೆ. ತೆಗೆದುಕೊಳ್ಳುವ ವಿಧಾನದಲ್ಲಿ ತೊಂದರೆಯಾಗಿರಬಹುದು, ಬೇಗ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಶ್ರೀಮಾನ್ ಕೃಷ್ಣಪ್ಪನವರು ಇನ್ನೊಂದು ಮಾತು ಹೇಳಿದರು, ತಡೆ ಆಜ್ಞೆ ಕೊಟ್ಟಂತ ಸಂಧರ್ಭದಲ್ಲಿ ಸಾಮಾನ್ಯವಾಗಿ ಕಣ್ಣಿಗೆ ಕಾಣುವಂತ ಅಂದರೆ ಮೇಲ್ನೋಟಕ್ಕೆ ದಾಖಲೆಗಳು ಸಿಕ್ಕಿದರೆ ಅಂಥ ವಿಚಾರದಲ್ಲಿ ಕೂಡಲೇ ನೋಟೀಸ್ ಕೊಟ್ಟು ಏತಕ್ಕೆ ತಡೆ ಆಜ್ಞೆ ಕೊಡಬಾರದು ಎಂದು ಹೇಳಿದ್ದಾರೆ. ಪ್ರೊಸೀಜರ್‌ನಲ್ಲಿ ತಿದ್ದುಪಡಿ ಮಾಡುವುದಕ್ಕೆ ಏನು ಸಾಧ್ಯ ಎಂದು ಯೋಚನೆ ಮಾಡಿದ್ದೇನೆ. ಇನ್ನೂ ಬಂಗಾರಪ್ಪನವರು ಒಂದು ಮಾತು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಭೂಮಾಲೀಕರ ಹೆಸರಿನಲ್ಲಿ ಎಲ್ಲಾ ಪಹಣಿ ದಾಖಲೆಗಳು ಇವೆ.

5-00 P.M.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮಾನ್ಯ ಬಂಗಾರಪ್ಪನವರು ಒಂದು ಸಲಹೆಯನ್ನು ಕೊಟ್ಟರು. ಈಗ ಟ್ರಿಬ್ಯುನಲ್ಸ್‌ಗೆ ವಹಿಸಿರತಕ್ಕ ಅಧಿಕಾರವೇನಿದೆಯೋ ಅದರ ಬಗ್ಗೆ ಅವರ ಸ್ವಾಗತ ಇದೆ. ಈಗ ೨೯.೯.೬೧ ಡಿಕ್ಲರೇಷನ್ಸ್ ಆಗಿ ಸರಪ್ಲಸ್ ಹೋಲ್ಡರ್ಸ್‌ನ್ನು, ಈಗಾಗಲೇ ನಮ್ಮ ಅಧಿಕಾರಿಗಳು ೨೩೦೮ ಕೇಸಿನಲ್ಲಿ ೪೩,೦೦೦ ಎಕರೆ ಹೆಚ್ಚುವರಿ ಭೂಮಿ ಇದೆ ಎಂದು ಮಾರ್ಚಿ ಆಖೈರಿನೊಳಗೆ ಡಿಟರ್‌ಮಿನ್ ಮಾಡಿದ್ದಾರೆ. ಇಷ್ಟು ತೀರ್ಮಾನ ಮಾಡಿರುವಂತಾದ್ದು ಏನಿದೆ ಇದು ಮತ್ತೆ ರೆವ್ಯೂಗೆ ಹೋಗುವುದು ಸೂಕ್ತವಲ್ಲ. ಈಗ ಇರತಕ್ಕ ಕಾನೂನಿನಲ್ಲಿ ತಹಸೀಲ್ದಾರ್ ಮಾಡಿದಂತ ತೀರ್ಮಾನದ ಮೇಲೆ ಅಸಿಸ್ಟೆಂಟ್ ಕಮಿಷನರಿಗೆ ಅಪೀಲು ಹೋಗಲು ಅವಕಾಶ ಇದೆ.

ಶ್ರೀ ಬಾಪುಗೌಡ.—ಈಗ ನನ್ನ ಜಮೀನು ಹೆಚ್ಚು ಇರುತ್ತದೆ, ಆಗ ತಹಸೀಲ್ದಾರರನ್ನು ಜೊತೆ ಮಾಡಿಕೊಂಡು ಸರಿಮಾಡಿಕೊಂಡಿರುತ್ತೇನೆ. ಆಗ ಯಾರು ತಾನೆ ಅಪೀಲು ಹೋಗುವುದಕ್ಕೆ ಸಾಧ್ಯ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಕಾನೂನು ಸರಿಯಾಗಿ ಓದಿದರೆ ಅರ್ಥವಾಗುತ್ತದೆ. ಈಗ ಆಗಿರತಕ್ಕಂಥ ತೀರ್ಮಾನಗಳನ್ನು ಮತ್ತೆ ರೆವ್ಯೂ ಮಾಡಲಿಕ್ಕೆ ಕಾಲ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಅಪೀಲು ಯಾರು ಮಾಡಬೇಕು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಪೀಲ್ಸ್ ಬಗ್ಗೆ ೧೧೮ರಲ್ಲಿ ಇದೆ, ಡಿವಿಷನಲ್ ಕಮಿಷನರ್‌ಗೆ ಸೋ ಮೋಟೋ ಮಾಡುವುದಕ್ಕೆ ಅವಕಾಶ ಇದೆ. ಅವರಿಗೆ ವಿಷಯ ಗೊತ್ತಾದ ಕೂಡಲೇ ನೋಡು ತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರಿಗೆ ವಿಷಯ ಗೊತ್ತಾಗುವುದು ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರ ಬಳಿ ಎಲ್ಲಾ ದಾಖಲೆ ಇರುತ್ತದೆ. ಒಂದು ತಾಲೂಕಿನಲ್ಲಿ ಎಷ್ಟು ಜಮೀನು ಇದೆ, ಎಷ್ಟು ಸರ್‌ಪ್ಲಸ್ ಇದೆ ಎಂಬುದು ಅಸಿಸ್ಟೆಂಟ್ ಕಮಿಷನರಿಗೆ ಗೊತ್ತಾಗುತ್ತದೆ. ಮತ್ತೆ ಯಾರಾದರೂ, ಮೋಸ ಮಾಡಿದ್ದಾರೆ ಎಂದು ತಿಳಿಸಿ, ಮೇಲಿನ ಅಧಿಕಾರಿಗಳ ಹತ್ತಿರ ಹೋಗುವುದಕ್ಕೆ ಅವಕಾಶ ಇದೆ.

ಶ್ರೀ ಬಾಪುಗೌಡ.—ನನಗೆ ಗೊತ್ತಿದ್ದರೂ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವನ್ನು ಇನ್ನು ಮುಂದೆ ಖಾಸಗಿ ಸದಸ್ಯರು, ನ್ಯಾಯ ಮಂಡಲಿಯವರು ತೀರ್ಮಾನ ಮಾಡುತ್ತಾರೆ ಆದ್ದರಿಂದ ಅನುಮಾನ ಬರುವುದಕ್ಕೆ ಅವಕಾಶ ಇಲ್ಲ. ಆದರೇ ಈಗಲೇ ಮಾಡಿರುವುದನ್ನು ಮತ್ತೆ ರೆವ್ಯೂ ಮಾಡುವುದಕ್ಕೆ ಹೊರಟರೆ ಇದರಿಂದ ತೊಂದರೆಯಾಗುತ್ತದೆ ಎಂದು ಅಷ್ಟೇ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ಈಗ ತಹಸೀಲ್ದಾರ್ ಬಳಿ ತೀರ್ಮಾನವಾದುದಾದ್ದನ್ನು ಯಾವ ಆಫೀಸರೂ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ಇಂಡಿವಿಜ್ಯುಯಲ್ ಆಗಿ ಯಾರು ಹೋಗುತ್ತಾರೆ? ಲ್ಯಾಂಡ್ ಲಾರ್ಡ್ಸ್ ಹೋಗಬೇಕು ಅಷ್ಟೇ. ಇವೊತ್ತು ಅಧಿಕಾರಿಗಳು ಇಷ್ಟು ನಮ್ಮ ಕೇಸ್ ಆಯಿತು ಎಂದು ಅಂಕಿಅಂಶ ಕೊಟ್ಟು ಕುಳಿತುಕೊಳ್ಳುತ್ತಾರೆ. ಆದುದರಿಂದ ಅಷ್ಟು ಕೇಸನ್ನು ಒಂದು ಸಾರಿ ಚೆಕ್ ಮಾಡಿಸುತ್ತೇವೆ ಎಂದು ಹೇಳಿದರೆ ಸಾಕು. ಇವೊತ್ತು ಡಿಸ್‌ಪೋಸಲ್ ಆಗಿರತಕ್ಕಂಥಾದ್ದನ್ನು ಅಸಿಸ್ಟೆಂಟ್ ಕಮಿಷನರ್ ಚೆಕ್ ಮಾಡತಕ್ಕ ಆದೇಶ ಕೊಟ್ಟರೆ ಒಂದು ದಾರಿ ಕಂಡೀತು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಲ್ಲಿ ಏನಾಗಿದೆ ಎಂದರೆ, ಇಂತಹ ಪ್ರಸಂಗಗಳು ಸಾಮಾನ್ಯವಾಗಿ ನಡೆಯುವುದಿಲ್ಲ ಎಂದು ಇರಬಹುದು, ಅಪೂರ್ವವಾಗಿ ನಡೆಯುವುದಕ್ಕೆ ಅವಕಾಶ ಇದೆ. ಇವೊತ್ತು ಟ್ರಿಬ್ಯುನಲ್ಸ್‌ನಲ್ಲಿ ಇರತಕ್ಕವರನ್ನು, ಅಧಿಕಾರಿಗಳನ್ನು ಜೊತೆಮಾಡಿಕೊಂಡು ಹೆಚ್ಚುವರಿ ಜಮೀನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ, ಆದುದರಿಂದ ಅಧಿಕಾರಿಗಳು ತಾವೇ ತಾವಾಗಿ ರೆಕಾರ್ಡ್ ತರಿಸಿ ಎಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಎಲ್ಲವನ್ನು ಮಾಡಿಸುವುದು ಕಷ್ಟ, ಅಸಿಸ್ಟೆಂಟ್ ಕಮಿಷನರ್‌ರವರಿಗೆ, ಡೆಪ್ಯುಟಿ ಕಮಿಷನರ್‌ರವರಿಗೆ, ಹತ್ತು ಪರ್ಸೆಂಟ್, ಇಪ್ಪತ್ತು ಪರ್ಸೆಂಟ್ ಇದನ್ನು ನೀವೇ ನೋಡಿ ಎಂದು ಹೇಳಿ ದೋಷ ಇದ್ದರೆ ಮುಂದಕ್ಕೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಲಿ ಎಂದು ಇನ್‌ಸ್ಟ್ರಕ್ಷನ್ ಮುಖಾಂತರ ಮಾಡಲಿಕ್ಕೆ ಸಾಧ್ಯ, ಆ ರೀತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಮತ್ತೆ ಟ್ರಿಬ್ಯುನಲ್‌ಗಳ ತೀರ್ಮಾನವನ್ನು ಪುನರ್ ಪರಿಶೀಲನೆ ಮಾಡಬೇಕು ಎಂದರೆ ಕಾಲಾತೀತವಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರಾದ ಬಾಪುಗೌಡರು ಕೆಲವು ನಿದರ್ಶನಗಳನ್ನು ಕೊಟ್ಟಿದ್ದಾರೆ, ಅವರು ಹೆಸರು ಹೇಳದೇ ಇದ್ದರು ಯಾರನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ಗೊತ್ತಾಗುತ್ತದೆ. ಅದು ಯಾರು ಎಂದು ತಿಳಿಸಿದರೆ ಒಳ್ಳೆಯದು ಅವರಿಗೆ ತಿಳಿಸಲಿಕ್ಕೆ ಇಷ್ಟವಿಲ್ಲದಿದ್ದರೆ ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ದಯಮಾಡಿ ತಿಳಿಸಿ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ವಿಲೇಜ್ ಅಕೌಂಟೆಂಟ್ ಬಗ್ಗೆ ಹೇಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಸಂದರ್ಭದ ಮೇಲೆ ಹೋಗುತ್ತದೆ, ನ್ಯಾಯ ಎಷ್ಟರ ಮಟ್ಟಿಗೆ ಇದೆ ನೋಡದೆ, ಎಲ್ಲದಕ್ಕೂ ಒಂದೇ ಮಂತ್ರ ಹಾಕುವುದಕ್ಕೆ ಆಗುವುದಿಲ್ಲ. ಯಾವ ಯಾವ ಕಾಯಿಲೆಗೆ ಯಾವ ಮಂತ್ರ ಹಾಕಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ, ಅವರು ಹೇಳುವ ಕಾಯಿಲೆ ಯಾವುದು ನನಗೆ ಗೊತ್ತಿಲ್ಲ.

MR DEPUTY SPEAKER.—I might tell the Hon'ble Member Sri Bapu Gowda that if he wants to make a charge against the members of the Tribunal, he must be very confident. If a charge is to be made, it should be candid, specific and definite.

SRI BAPU GOWDA.—My charge is a permanent charge.

MR. DEPUTY SPEAKER.—But there is nothing on record so far.

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಈ ಟ್ರಿಬ್ಯುನಲ್‌ನಲ್ಲಿ ಬೇಗ ಬೇಗ ಮೀಟಿಂಗ್‌ಗಳನ್ನು ನಡೆಸಿ, ಬೇಗ ಬೇಗ ಕೇಸುಗಳನ್ನು ಇತ್ಯರ್ಥ ಮಾಡಬೇಕು ಎನ್ನುವ ದೃಷ್ಟಿಯಿಂದ ತಾವು ಈ ಟ್ರಿಬ್ಯುನಲ್‌ಗೆ ಸದಸ್ಯರನ್ನು ನೇಮಕ ಮಾಡಿದ್ದೀರಿ. ಆದರೆ ಅನೇಕ ಜನ ಸದಸ್ಯರುಗಳು ಮೀಟಿಂಗ್ ನೋಟೀಸನ್ನು ತೆಗೆದುಕೊಂಡು, ಮೀಟಿಂಗ್ ಹಾಲ್‌ಗೆ ಬಂದಿದ್ದು ಛೇರ್ಮನ್‌ರವರು ಬಂದಕೂಡಲೇ ಸದಸ್ಯರು ಹೊರಗಡೆ ಹೋಗಿದ್ದಾರೆ, ಮೆಂಬರ್ಸ್ ಯಾರೂ ಇಲ್ಲವೆಂದು ಅವರು ಮೀಟಿಂಗನ್ನು ಅಡ್ಜರ್ನ್ ಮಾಡಿದ್ದಾರೆ ಈ ರೀತಿ ಟ್ರಿಬ್ಯುನಲ್‌ನ ಕಾರ್ಯಕಲಾಪಗಳಿಗೆ ಹೋಗುವುದಕ್ಕೆ ಮನಸ್ಸು ಇಲ್ಲದವರುಗಳನ್ನು ತಾವು ನೇಮಕ ಮಾಡುವುದರಿಂದ ಏನು ಪ್ರಯೋಜನವಾಗುತ್ತದೆ ? ಆದುದರಿಂದ ತಾವು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಹೇಳುವುದು ಸರಿ, ಅದಕ್ಕಾಗಿಯೇ ಆ ಮೀಟಿಂಗ್‌ಗೆ ಮಾನ್ಯ ಸದಸ್ಯರು ಯಾರು ಬರಲಿ, ಬರದೇ ಹೋಗಲಿ, ಮೀಟಿಗ್‌ನ್ನು ನಡೆಸಬೇಕೆಂದು ಹೇಳಿದ್ದೇವೆ ಕೆಲವು ಸಾರಿ ಮಂತ್ರಿಗಳು ಪ್ರವಾಸ ಹೋಗಿದ್ದಾರೆ, ಸದಸ್ಯರು ಬಂದಿಲ್ಲ ಎಂದು ಅಡ್ಜರ್ನ್ ಮಾಡಕೂಡದು ಮೀಟಿಂಗ್ ಕರೆದ ಮೇಲೆ ಅದನ್ನು ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಇಷ್ಟೇ ಅಲ್ಲದೆ ಇಂಜಂಕ್ಷನ್ ಆರ್ಡರ್ಸ್ ಕೊಡುವ ಬಗ್ಗೆ ನಿಧಾನವಾಗುತ್ತದೆಂದು ತಿಳಿದು ೮-೧೦ ದಿವಸಗಳಿಗೆ ಒಂದುಸಾರಿ ತಾಲ್ಲೂಕು ಗಳಲ್ಲಿ ಪ್ರವಾಸ ಮಾಡಿ ಬೇಗ ತಡ ಆಜ್ಞೆಗಳನ್ನು ಕೊಡಬೇಕೆಂದು ಸರ್ಕ್ಯುಲರ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ.

ಇನ್ನೊಂದು ವಿಷಯ ಹೇಳುವುದಾದರೆ, ಮಾನ್ಯ ಶಾಮಣ್ಣನವರು ಹೇಳಿದಹಾಗೆ ಜಮೀನುಗಳನ್ನು ಕಳೆದುಕೊಂಡು ವಿಧವೆಯರಿಗೆ, ಸಣ್ಣ ಮಕ್ಕಳು ಇರುವವರಿಗೆ ಪೂರ್ತಿ ಹಣ ಕೊಡುವುದಕ್ಕೋಸ್ಕರ ಮಾರ್ಚಿ ಏಪ್ರಿಲ್‌ನೊಳಗೆ ೧೦ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ವರ್ಷವೂ ಕೂಡ ಈ ಪರಿಹಾರ ಕಾರ್ಯ ಕ್ರಮವನ್ನು ಬೇಗನೆ ತೆಗೆದುಕೊಳ್ಳುತ್ತಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR DEPUTY SPEAKER.—I will put the consideration motion to the vote of the House. The question is.—

"That the Karnataka Land Reforms (Third Amendment) Bill, 1976, be taken into consideration."

The motion was adopted.

CLAUSE 2

MR. DEPUTY SPEAKER.—I will take up clause by clause. There are no amendments. The question is.—

"That clause 2 do stand part of the Bill'

The motion was adopted.

Clause 2 was added to the Bill.

CLAUSE 3

MR. DEPUTY SPEAKER —There is an amendment. It may be moved

SRI N. HUTCHMASTHI GOWDA.—I move :

"That in clause 3 the words, brackets and figures in sub-cluase (6) shall be omitted,

MR. DEPUTY SPEAKER.—Amendment moved :

"That in clause 3, the words, brackets and figures in sub-clause (6) shall be omitted,"

SRI N. HUTCHMASTHI GOWDA.—I have nothing to add to the amend ment moved.

MR. DEPUTY SPEAKER.—The question is :

"That in clause 3, the words, brackets and figures in sub-clause (6) shall be omitted."

The amendment was adopted

I will put the clause as amended to the vote of the House. The question is :

"That clause 3, as amended, do stand part of the Bill."

The motion was adopted.

Clause 3 as amended was added to the Bill.

CLAUSES 4 and 5

MR. DEPUTY SPEAKER —There are no amendments, The question is:

"That clauses 4 and 5 do stand part of the Bill."

The motion was adopted.

Clauses 4 and 5 were added to the Bill.

CLAUSE 1, etc.

MR. DEPUTY SPEAKER.—The question is :

" That clause, 1, the Long Title, the Preamble and the Enacting Formula do stand part of the Bill,"

The motion was adopted.

Clause 1, the Long title, the Preamble and the Enacting Formula were added to the Bill.

Motion to pass

SRI N. HUTCHMASTHI GOWDA.—I move :

"That the Karnataka Land Reforms (Thrid Amendment) Bill, 1976, as amended, be passed.

MR. DEPUTY SPEAKER.—The question is :

"That the Karnataka Land Reforms (Third Amendment) Bill, 1975, as amended, be passed.

The motion was put and adopted and the Bill as amended was passed.

THE KARNATAKA (BELGAUM AND GULBARGA AREAS) RELIGIOUS AND CHARITABLE INAMS ABOLITION (AMENDMENT) BILL, 1974

Motion to Consider

SRI. N. HUTCHMASTHI GOWDA.—I beg to move ;

"That the Karnataka (Belgaum and Gulbarga Areas) Religious and Charitable Inams Abolition (Amendment) Bill, 1974 be taken into consideration."

MR. DEPUTY SPEAKER.—Motion moved :

"That the Karnatakt (Belgaum and Gulbarga Areas) Religious and Charitable Inams Abolition (Amendment) Bill 1974, be into consideration."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಇಂದೊಂದು ಸಣ್ಣ ತಿದ್ದುಪಡಿ ಅವಶ್ಯಕವಾಗಿ ಬೇಕಾದುದರಿಂದ ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೇನೆ. ಇದು ಏನೆಂದರೆ, ಧಾರ್ಮಿಕ ಸಂಸ್ಥೆಗಳಾಗಲಿ ಅಥವಾ ಇತರೆ ದಾನ, ದತ್ತಿ ವಗೈರೆಯ ಜಮೀನುಗಳನ್ನು ನಾವು ಈ ಸಂಸ್ಥೆಗಳಿಂದ ತೆಗೆದುಕೊಂಡಾಗ ಅವುಗಳಿಗೆ ಬರುತ್ತಿದ್ದ ಗೇಣಿ ವಗೈರೆ ನಿಂತು ಹೋಗಿ ಈ ಸಂಸ್ಥೆಗಳನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಅದಕ್ಕಾಗಿ ಇಂಥ ಸಂಸ್ಥೆಗಳಿಗೆ ಕಾನೂನು ಪ್ರಕಾರವಾಗಿ ಗೇಣಿಯಿಂದ ಎಷ್ಟು ಆದಾಯ ಬರುತ್ತಿತ್ತೋ ಅಷ್ಟನ್ನೂ ಕೂಡ ಇನ್ನು ಮುಂದೆ ಸರ್ಕಾರವೇ ಕೊಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದೆ. ಈ ಮಸೂದೆ ಹಿಂದೆ ಕಾನೂನು ಆಗುವ ಸಂದರ್ಭದಲ್ಲಿ ಕಂದಾಯದ ೨೦ರಷ್ಟು ಎಂದು ಇತ್ತು. ಈಗ ಅದಕ್ಕೆ ಬದಲಾಗಿ ಕಂದಾಯದ ೧೦ರಷ್ಟು ಎಂದು ತಿದ್ದುಪಡಿ ಮಾಡಿದೆ. ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ 25 ಎಕರೆಗಳಿದ್ದುದನ್ನು 10 ಎಕರೆಗೆ ಇಳಿಸಿದುದಕ್ಕೆ ಕಾರಣವೇನು ಎನ್ನುವುದನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ — ಹಳೇ ಮೈಸೂರು ಭಾಗದಲ್ಲಿ ಮೊದಲಿನಿಂದಲೂ ಒಂದು ಕಾನೂನು ಇದೆ. ಆ ಭಾಗದಲ್ಲಿ ಕಂದಾಯದ 10 ರಷ್ಟು ಇದೆ. ಅದಕ್ಕೆ ಇಡೀ ರಾಜ್ಯದಲ್ಲಿ ಒಂದೇ ತರಹ ಇರಬೇಕು ಎನ್ನುವುದು ಒಂದನೆಯದು. ಎರಡನೆಯದಾಗಿ ಎಷ್ಟು ಗೇಣಿ ಬರುತ್ತಿದೆ ಕಾನೂನು ಪ್ರಕಾರ ಅಷ್ಟೇ ನಿಗದಿಮಾಡಿ ಒಂದೇ ತರಹ ತರಬೇಕು ಎನ್ನುವುದೇ ಮುಖ್ಯ ಉದ್ದೇಶವಾಗಿರುತ್ತದೆ.